ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 6 ಶುಕ್ರವಾರ 2024

₹4

ಸಂಪುಟ: 45 | ಸಂಚಿಕೆ: 142 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ದೇಶ ಗುರು ಪರಂಪರೆಯಲ್ಲಿ ತನ್ನದೇ ಆದ ಮಹತ್ವ ಹೊಂದಿದೆ

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್



ಮೈಸೂರು,ಸೆ.5– ನಮ್ಮ ದೇಶ ಗುರು ಪರಂಪರೆಯಲ್ಲಿ ತನ್ನದೇ ಆದ ಮಹತ್ವವನ್ನು ಹೊಂದಿದ್ದು, ಇದರ ಸ್ಮರಣಾರ್ಥವಾಗಿ ಇಂದು ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮ ದಿನಾಚರಣೆಯನ್ನು ಆಚರಿಸುತ್ತಿದ್ದೇವೆ. ಮೈಸೂರು ವಿಶ್ವವಿದ್ಯಾನಿಲಯದವರಾದ ರಾಧಾಕೃಷ್ಣನ್ ಅವರು ಮೈಸೂರಿನೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದ್ದರು ಎಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಇಂದು ಜಿಲ್ಲಾ ಪಂಚಾಯತ್ ಹಾಗೂ ಶಾಲಾ ಶಿಕ್ಷಣ ಇಲಾಖೆ ಮೈಸೂರು ಇವರ ವತಿಯಿಂದ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನಾಚರಣೆ ಅಂಗವಾಗಿ ಕರ್ನಾಟಕ ಕಲಾಮಂದಿರದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣೆ ಹಾಗೂ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕಾರ ಹಾಗೂ ನಿವೃತ್ತ ಶಿಕ್ಷಕರಿಗೆ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ರಾಧಾಕೃಷ್ಣನ್ ಅವರು ಒಬ್ಬ ಮಹಾನ್ ಶಿಕ್ಷಕ ಎಂಬುದಕ್ಕೆ ಅವರು ದೆಹಲಿಗೆ ತೆರಳುವ ಸಂದರ್ಭದಲ್ಲಿ ಕಾಲೇಜು ವಿದ್ಯಾರ್ಥಿಗಳು ಅವರನ್ನು ಬೀಳ್ಕೊಟ್ಟ ಪರಿಯೇ ಉದಾಹರಣೆಯಾಗಿದೆ ಎಂದರು.

ನಮ್ಮ ದೇಶದ ಸಂಸ್ಕೃತಿಯಲ್ಲಿ ತಾಯಿಯೇ ಮೊದಲ ಗುರು ಎಂಬ ಪ್ರತೀತಿಯಿದೆ. ಇದಕ್ಕೆ ಮಾದರಿಯಾಗಿ ಸಾವಿತ್ರಿ ಬಾಫುಲೆ ಅವರು ದೇಶದಲ್ಲಿ ಮೊದಲ ಬಾರಿಗೆ ಹೆಣ್ಣು ಮಕ್ಕಳಿಗೆ ಶಿಕ್ಷಣದ ಅವಶ್ಯಕತೆ ಮತ್ತು ಮಹತ್ವದ ಬಗ್ಗೆ ಅರಿವು ಮೂಡಿಸಿ ಅಕ್ಷರದ ಜ್ಞಾನ ದೀವಿಗೆ ಹೊತ್ತಿಸಿದರು ಎಂದರು.

ಗುರು ಶಕ್ತಿ ಬೇಕು: ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಮಾತನಾಡಿ, ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರು ಪ್ರಾಮಾಣಿಕ ಆದರ್ಶ ಶಿಕ್ಷಕರಾಗಿದ್ದರು. ಅವರ ನಡೆ–ನುಡಿ, ಸ್ವಭಾವ, ವಿಚಾರ ಲಹರಿಗಳು ವಿದ್ಯಾರ್ಥಿಗಳಿಗೆ ಪ್ರಿಯವಾಗಿದ್ದವು. ಹಿರಿಯರು ಹೇಳಿರುವಂತೆ ಗುರುವಿನ ಗುಲಾಮನಾಗುವ ತನಕ ಮುಕುತಿ ದೊರೆಯುವುದಿಲ್ಲ ಹಾಗೂ ನಾವು ನಮ್ಮ ಗುರಿಯನ್ನು ತಲುಪಬೇಕಾದರೆ ಹಿಂದೆ ಗುರು ಎಂಬ ಶಕ್ತಿ ಇರಬೇಕು ಎಂದರು.

ಪ್ರಧಾನ ಭಾಷಣಕಾರರಾಗಿ ಆಗಮಿಸಿದ್ದ ಜೆ.ಎಸ್.ಎಸ್ ಕಾಲೇಜು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಸಹಾಯಕ ಪ್ರಾಧ್ಯಾಪಕ ಡಾ.ಭೀಮರಾಜು ಈರೇಗೌಡ ಅವರು ಮಾತನಾಡಿ, ಈ ನಾಡಿನಲ್ಲಿ ಕೋಟ್ಯಾಂತರ ಶಿಕ್ಷಕರಿದ್ದರೂ, ಮಕ್ಕಳಿಗೆ, ಮನೆಯವರಿಗೆ, ಬಂಧು–ಬಳಗಕ್ಕೋಸ್ಕರ ಬದುಕದೆ ದೇಶಕ್ಕಾಗಿ, ನಾಡಿಗಾಗಿ, ಮಣ್ಣಿಗಾಗಿ ಬದುಕಿದ ಮಹಾನ್ ಶಿಕ್ಷಕರಿಗಾಗಿ ಇಂತಹ ದಿನಾಚರಣೆಯನ್ನು ಬಹಳ ಮಹತ್ವದಿಂದ ಆಚರಿಸಲಾಗುತ್ತದೆ ಎಂದರು.

ಶಿಕ್ಷಣವು ಒಂದು ದೇಶದ ಭದ್ರ ಬುನಾದಿ ಇದ್ದಂತೆ, ಯಾವುದೇ ದೇಶದಲ್ಲಿ ಶಿಕ್ಷಣವನ್ನು ನಾಶ ಮಾಡಿದರೆ ಆ ದೇಶ ನಾಶವಾದಂತೆ. ದೇಶದ ಭದ್ರತೆ, ಸಾಹಿತ್ಯ, ಕಲೆ ಶಿಕ್ಷಣದ ಮೇಲೆ ನಿಂತಿದೆ. ಇಂದು ನಮ್ಮ ಸಂಸ್ಕೃತಿಯು ಅಧೋಗತಿಯತ್ತ ಸಾಗುತ್ತಿದೆ. ಹಾಗಾಗಿ ಶಿಕ್ಷಕರು ಶಾಲಾ–ಕಾಲೇಜುಗಳಲ್ಲಿ ಮಕ್ಕಳಿಗೆ ಶಿಕ್ಷಣದ ಜೊತೆಗೆ, ನಮ್ಮ ಸಂಸ್ಕೃತಿಯನ್ನು ತಿಳಿಸುವ ಕೆಲಸ ಮಾಡಬೇಕು ಎಂದು ಹೇಳಿದರು.

ಗ್ರಂಥಾಲಯಕ್ಕೆ ಪುಸ್ತಕಗಳ ಹಸ್ತಾಂತರ....



ಮೈಸೂರು ವಾರ್ಡ್ ನಂ.6ರ ಬೃಂದಾವನ ಬಡಾವಣೆಯಲ್ಲಿರುವ ಗ್ರಂಥಾಲಯಕ್ಕೆ ಬರುವ ಓದುಗರಿಗಾಗಿ ದಂತ ವೈದ್ಯ, ಮೇಟಗಳ್ಳಿ ನಿವಾಸಿ ಡಾ.ಎಂ.ಆರ್. ಲೋಕೇಶ್ ಅವರು ಹಲವಾರು ಪುಸ್ತಕಗಳನ್ನು ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು, ಹಾಗೂ ನಗರ ಕೇಂದ್ರ ಗ್ರಂಥಾಲಯದ ಗ್ರಂಥಪಾಲಕಿ ಪೂರ್ಣಿಮ ಅರಸ್ ಅವರಿಗೆ ಹಸ್ತಾಂತರಿಸಿದರು. ಈ ವೇಳೆ ಗ್ರಂಥಪಾಲಕಿ ನೂರ್ ಶಭಾ, ಸಿಬ್ಬಂದಿ ರಾಜೇಶ್ವರಿ, ಸಂಜಯ್, ಸುರೇಶ್, ಲೋಕೇಶ್ ಮೂರ್ತಿ, ಸುಬ್ರಮಣ್ಯ ಇನ್ನಿತರರು ಉಪಸ್ಥಿತರಿದ್ದರು.

ಗಣೇಶ ಚತುರ್ಥಿ: ಪರಿಸರ ಸ್ನೇಹಿ ಸಂಚಾರಿ ವಿಸರ್ಜನೆಗೆ ವಾಹನ ವ್ಯವಸ್ಥೆ

ಮೈಸೂರು,ಸೆ.5– ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಚೇರಿಯ ವತಿಯಿಂದ ಸ್ವರ್ಣ ಗೌರಿ ಹಾಗೂ ಗಣೇಶ ಚತುರ್ಥಿ ಹಬ್ಬದ ಆಚರಣೆಯಲ್ಲಿ ಆರೋಗ್ಯ ಸ್ನೇಹಿ ಅರಿಶಿನ ಗೌರಿ ಹಾಗೂ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಿ, ಪೂಜಿಸಿ ಪರಿಸರಕ್ಕೆ ಹಾನಿಯಾಗದಂತೆ ವಿಸರ್ಜನೆ ಮಾಡುವ ಹಾಗೂ ಸಾರ್ವಜನಿಕರಿಗೆ ಸಹಕಾರ ನೀಡುವ ನಿಟ್ಟಿನಲ್ಲಿ ಪರಿಸರ ಸ್ನೇಹಿ ಸಂಚಾರಿ ವಿಸರ್ಜನೆ ವ್ಯವಸ್ಥೆಯಿರುವ ವಾಹನಗಳನ್ನು ಸೆಪ್ಟೆಂಬರ್ 7 ರಂದು ಆಯೋಜಿಸಲಾಗಿದೆ.

ವಾಹನ 1 ಸಂಜೆ 4 ಗಂಟೆಯಿಂದ 5.15 ಗಂಟೆಯವರೆಗೆ ಮೇಟಗಳ್ಳಿ ಆರಕ್ಷಕ ಠಾಣೆ ಹತ್ತಿರ, 5.30 ಗಂಟೆಯಿಂದ 6.45 ಗಂಟೆಯವರೆಗೆ ಕೆ.ಡಿ.ಸರ್ಕಲ್ ಹತ್ತಿರ ವಿಜಯನಗರ 2ನೇ ಹಂತ, 7 ಗಂಟೆಯಿಂದ 8.15 ಗಂಟೆವರೆಗೆ ಒಂಟಿಕೊಪ್ಪಲ್ ಚಂದ್ರಮೌಳೇಶ್ವರ ದೇವಸ್ಥಾನ ಅಥವಾ ಮಾತೃ ಮಂಡಳಿ ಹತ್ತಿರ, 8.30 ಗಂಟೆಯಿಂದ 10.30 ಗಂಟೆವರೆಗೆ ಕುಕ್ಕರಹಳ್ಳಿ ಕೆರೆ ಮುಖ್ಯದ್ವಾರದಲ್ಲಿ ವಾಹನ ವ್ಯವಸ್ಥೆ ಇರಲಿದ್ದು, ಎ.ಎಂ ಸಿದ್ದಯ್ಯ ಅವರ ದೂ.ಸಂ: 9880164745ನ್ನು ಸಂಪರ್ಕಿಸಬಹುದು. ವಾಹನ ಸಂಖ್ಯೆ 2 ಸಂಜೆ 4 ಗಂಟೆಯಿಂದ 5.15 ಗಂಟೆಯವರೆಗೆ ಯಾದವಗಿರಿ ವಿಕ್ರಂ ಆಸ್ಪತ್ರೆ ಹತ್ತಿರ, ಸಂಜೆ 5:30 ಗಂಟೆಯಿಂದ 6.45 ಗಂಟೆಯವರೆಗೆ ಶಾಂತಲಾ ಚಿತ್ರಮಂದಿರ ಹತ್ತಿರ, 7 ಗಂಟೆಯಿಂದ 8.15 ಗಂಟೆಯವರೆಗೆ ಚಾಮುಂಡಿಪುರಂ ಸರ್ಕಲ್, 8.30 ಗಂಟೆಯಿಂದ 10.30 ಗಂಟೆಯವರೆಗೆ ಕಾರಂಜಿ ಕೆರೆ ಮುಖ್ಯದ್ವಾರದಲ್ಲಿ ವಾಹನ ವ್ಯವಸ್ಥೆ ಇರಲಿದ್ದು, ಶಿವಣ್ಣ ಅವರ ದೂ.ಸಂ: 9900479002 ನ್ನು ಸಂಪರ್ಕಿಸಬಹುದು. ವಾಹನ ಸಂಖ್ಯೆ 3 ಸಂಜೆ 4 ಗಂಟೆಯಿಂದ 5.15 ಗಂಟೆಯವರೆಗೆ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪ ಕುವೆಂಪು ನಗರ, 5.30 ಗಂಟೆಯಿಂದ 6.45 ಗಂಟೆಯವರೆಗೆ ಜಯನಗರ ರೈಲ್ವೆ ಗೇಟ್ ಹತ್ತಿರ, 7 ಗಂಟೆಯಿಂದ 8.15 ಗಂಟೆಯವರೆಗೆ ಜೆ.ಪಿ.ನಗರ ಗೊಬ್ಬಳಿಮರದ ನಿಲ್ದಾಣ, 8.30 ಗಂಟೆಯಿಂದ 10.30 ಗಂಟೆಯವರೆಗೆ ಲಿಂಗಾಂಬುದಿ ಕೆರೆ ಮುಖ್ಯದ್ವಾರ (ಶ್ರೀರಾಂಪುರ ಮಾರ್ಗವಾಗಿ)ದಲ್ಲಿ ವಾಹನ ವ್ಯವಸ್ಥೆ ಇರಲಿದ್ದು, ಲಕ್ಷ್ಮಣ್ ಹೆಚ್.ಸಿ ಅವರ ದೂ.ಸಂ: 9845307419 ನ್ನು ಸಂಪರ್ಕಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಸಂಚಾರಿ ದೂರವಾಣಿ ಸಂಖ್ಯೆ ಉಪ ಪರಿಸರ ಅಧಿಕಾರಿ ನೇತ್ರಾವತಿ:9739734891 ಮತ್ತು ಜಯಲಕ್ಷ್ಮಿ ಎಂ.ಜೆ: 9743676191 ನ್ನು ಸಂಪರ್ಕಿಸಬಹುದು ಎಂದು ಮೈಸೂರು ನಗರದ ಪ್ರಾ.ಕಾ–1 ರ ಪರಿಸರ ಅಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಗೀತ ಪೋಷಕ ಕೆ.ಶ್ರೀಕಂಠಯ್ಯ ನಿಧನ



ಮೈಸೂರು,ಸೆ.5–ಮೈಸೂರಿನ ಚಾಮರಾಜ ಮೊಹಲ್ಲಾ ನಿವಾಸಿ ಹಾಗೂ ಸಂಗೀತ ಪೋಷಕರಾದ ಕೆ. ಶ್ರೀಕಂಠಯ್ಯ (96) ಅವರು ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಬುಧವಾರ ಬೆಳಗ್ಗೆ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಶ್ರೀಕಂಠಯ್ಯ ಅವರು ತಮ್ಮ ತಂದೆ ದಿವಂಗತ ಪುಟ್ಟುರಾವ್ ಅವರ ಸ್ಮರಣಾರ್ಥ ಸುಮಾರು ಐದು ವರ್ಷಗಳ ಕಾಲ ಸರಣಿ ಸಂಗೀತ ಕಛೇರಿ ನಡೆಸಿಕೊಂಡು ಬಂದಿದ್ದಾರೆ. ಅಲ್ಲದೆ, ಟಿ.ಚೌಡಯ್ಯ ಸ್ಮಾರಕ ರಾಮಸೇವಾ ಸಮಿತಿಯನ್ನು ಸ್ಥಾಪಿಸಿದ್ದರು. ಇವರು ಬೆಂಗಳೂರಿಗೆ ತೆರಳುವ ತನಕ ಈ ಸಮಿತಿ ವತಿಯಿಂದ ಸುಮಾರು 30 ವರ್ಷಗಳ ಕಾಲ ರಾಮನವಮಿ ಸಂಗೀತ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿದ್ದಾರೆ. ಶ್ರೀಯುತರು ಪಿಟೀಲು ಚೌಡಯ್ಯ ಅವರಿಗೆ ನಿಕಟವರ್ತಿಗಳಾಗಿದ್ದು, ಅವರ ಬಗ್ಗೆ ಕೃತಿಯನ್ನು ಬರೆದಿದ್ದಾರೆ. ಇವರ ಅಂತ್ಯಕ್ರಿಯೆ ಬೆಂಗಳೂರಿನ ಹೆಬ್ಬಾಳು ರುದ್ರಭೂಮಿ ಯಲ್ಲಿ ಬುಧವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಾ. ಎಂ.ಭೋಗೇಗೌಡ

ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣ ಬಳಿಯ ನಿವಾಸಿ ಡಾ.ಎಂ.ಭೋಗೇಗೌಡ (86), ವಯೋಸಹಜ ಅನಾರೋಗ್ಯದಿಂದ ಗುರುವಾರ ಬೆಳಗ್ಗೆ ನಿಧನರಾದರು.



ಇವರ ಪತ್ನಿ ಖ್ಯಾತ ಪ್ರಸೂತಿ ತಜ್ಞೆ ಡಾ.ಆಶಾ ಅವರು ಕಳೆದ 2 ವರ್ಷಗಳ ಹಿಂದೆ ನಿಧನ ಹೊಂದಿದ್ದರು. ಮೃತರು, ಇಬ್ಬರು ಗಂಡು ಮಕ್ಕಳು ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ.

ಅಂತ್ಯಕ್ರಿಯೆ ಸ್ವಗ್ರಾಮದ ಪಕ್ಕದ ಸೋಮನಹಳ್ಳಿಯ ಇವರ ಸಮುದಾಯ ಭವನದ ಆವರಣದಲ್ಲಿ ಗುರುವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರು 1996ರಲ್ಲಿ ಕೆ.ಆರ್.ಪೇಟೆ ವಿಧಾನಸಭಾ ಕ್ಷೇತ್ರದ ಮಧ್ಯಂತರ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋತಿದ್ದರು.

ಬರವಣಿಗೆಯನ್ನು ಎಳವೆಯಲ್ಲೇ ರೂಢಿಸಿಕೊಳ್ಳಬೇಕು

ಪಾಠ ಶಾಲಾ ಜೀವನ ಯಾತ್ರಾ–ಪೂರ್ಣಚೇತನ ಶಾಲೆ ಮಕ್ಕಳು ಬರೆದಿರುವ ಪುಸ್ತಕ ಬಿಡುಗಡೆಗೊಳಿಸಿದ ಖ್ಯಾತ ಸಾಹಿತಿ ಎಸ್.ಎಲ್.ಭೈರಪ್ಪ

ಮೈಸೂರು, ಸೆ. 5– ಬರವಣಿಗೆಯ ಕಲೆ ನಾವು ಯಾವುದೇ ಕ್ಷೇತ್ರವನ್ನು ಆಯ್ದು ಕೊಂಡರೂ ಅಗತ್ಯ, ಎಳವೆಯಲ್ಲೇ ಮಕ್ಕಳು ಬರೆಯುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕು ಎಂದು ಖ್ಯಾತ ಸಾಹಿತಿ ಎಸ್.ಎಲ್.ಭೈರಪ್ಪ ಅಭಿಪ್ರಾಯಪಟ್ಟಿದ್ದಾರೆ.



ಮೈಸೂರಿನ ಪೂರ್ಣಚೇತನ ಶಾಲೆಯ ಮಕ್ಕಳೇ ಬರೆದು, ಸಂಪಾದಿಸಿರುವ 'ಪಾಠ ಶಾಲಾ ಜೀವನ ಯಾತ್ರಾ' ಪುಸ್ತಕವನ್ನು ಹಿರಿಯ ಸಾಹಿತಿ ಎಸ್.ಎಲ್.ಭೈರಪ್ಪ ಬಿಡುಗಡೆಗೊಳಿಸಿದರು.

ಮೈಸೂರಿನ ಪೂರ್ಣಚೇತನ ಶಾಲೆಯ ಮಕ್ಕಳೇ ಬರೆದು, ಸಂಪಾದಿಸಿರುವ "ಪಾಠ ಶಾಲಾ ಜೀವನ ಯಾತ್ರಾ" ಪುಸ್ತಕವನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು. ಶಾಲೆಯ ನಾಲ್ಕರಿಂದ ಹತ್ತನೇ ತರಗತಿಯವರೆಗಿನ 104 ವಿದ್ಯಾರ್ಥಿಗಳು ತಮ್ಮ ಬದುಕಿನ ಸಣ್ಣ ಸಣ್ಣ ಅನುಭವಗಳು, ಪ್ರವಾಸ, ಸೃಜನಶೀಲ ಆಲೋಚನೆಗಳು, ತಮ್ಮನ್ನು ಪ್ರಭಾವಿಸಿದ ಸಂಗತಿಗಳು–ವ್ಯಕ್ತಿಗಳ ಬಗ್ಗೆ ಬರೆದಿರುವ 189 ಲೇಖನಗಳ ಗುಚ್ಛ ಈ ಪುಸ್ತಕ. ಕೌಟುಂಬಿಕ ಬಾಂಧವ್ಯದ ಬೆಚ್ಚನೆಯ ಅನುಭವ, ಕೌತುಕಕಾರಿ ಜೀವ ವೈವಿಧ್ಯ, ಅಜ್ಜ ಕಟ್ಟಿಕೊಟ್ಟ ಅನುಭವದ ಬುತ್ತಿ, ಹೆತ್ತವರೇ ನಮ್ಮ ಮೊದಲ ಗುರುಗಳು, ಗೆಳೆತನವೆಂಬ ನಿಜ ಉಡುಗೊರೆ, ವಿಜ್ಞಾನ ಲೋಕ, ನನ್ನ ಅಪ್ಪ– ನನ್ನ ಹೀರೊ, ಮೌಲ್ಯಯುತ ಶಿಕ್ಷಣದ ಪ್ರಾಮುಖ್ಯತೆ, ಶಾಲೆಯಲ್ಲಿ ಕಲಿತ ಜೀವನ ಪಾಠಗಳು, ಪಠ್ಯಪುಸ್ತಕದಾಚೆಗಿನ ವಿಶಿಷ್ಟ ಲೋಕ, ಅಮ್ಮನ ನಿಸ್ವಾರ್ಥದ ಲೋಕ, ಆಟೋಟ ಕೂಟಗಳು ಕಲಿಸುವ ಪಾಠ, ಪ್ರಕೃತಿಯ ಪಾಠಗಳು, ಶಾಲೆ ರೂಪಿಸಿದ ನನ್ನ ವ್ಯಕ್ತಿತ್ವ, ಗುರುಗಳು ತೋರುವ ಆದರ್ಶದ ಹಾದಿ, ಹೀಗೆ, ಶಾಲೆಯ ವಿದ್ಯಾರ್ಥಿಗಳು, ತಮ್ಮ ಮುಗ್ಧ ಭಾವನೆ–ಅನುಭವಗಳಿಗೆ ಈ ಪುಸ್ತಕದಲ್ಲಿ ಅಕ್ಷರ ರೂಪ ನೀಡಿದ್ದಾರೆ.

ಈ ಪುಸ್ತಕದ ಇನ್ನೊಂದು ವಿಶಿಷ್ಟತೆ ಎಂದರೆ ಇದಕ್ಕೆ ಪ್ರತಿಷ್ಠಿತ ಐಎಸ್‌ಬಿಎನ್ ಸಂಖ್ಯೆ ಕೂಡ ದೊರೆತಿದೆ. ಇದು ಈ ಪುಸ್ತಕದ ಗುಣಮಟ್ಟಕ್ಕೆ ಇನ್ನೊಂದು ಸಾಕ್ಷಿ. ಐಎಸ್‌ಬಿಎನ್ ಸಂಖ್ಯೆ ದೊರೆತ ಮೊಟ್ಟ ಮೊದಲ ನಗರದ ಮಕ್ಕಳ ಪ್ರಕಟಣೆ ಇದಾಗಿದೆ.

ಎಳವೆಯಲ್ಲೇ ಮಕ್ಕಳಿಗೆ ಬರೆಯಲು ಒಂದು ವೇದಿಕೆ ಒದಗಿಸಿಕೊಟ್ಟರೆ, ಮಕ್ಕಳಿಗೆ ಅವರ ಸೃಜನಾತ್ಮಕ ಆಲೋಚನೆಗಳನ್ನು ಅಕ್ಷರ ರೂಪಕ್ಕಿಳಿಸಲು ಸಹಾಯವಾಗುತ್ತದೆ. ವೈದ್ಯಕೀಯ, ಇಂಜಿನಿಯರಿಂಗ್, ವಿಜ್ಞಾನ, ಹೀಗೆ ನೀವು ಭವಿಷ್ಯದಲ್ಲಿ ಯಾವುದೇ ಉದ್ಯೋಗ ಕ್ಷೇತ್ರ ಆಯ್ದುಕೊಳ್ಳಿ, ಬರವಣಿಗೆ ನಿಮ್ಮ ಉಪಯೋಗಕ್ಕೆ ಬರುತ್ತದೆ ಎಂದು ಭೈರಪ್ಪ ಅಭಿಪ್ರಾಯಪಟ್ಟರು.

ಶಾಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ಬಿ.ದರ್ಶನ್‌ರಾಜ್ ಮಾತನಾಡಿ, ಅಕ್ಷರಗಳ ಅದ್ಭುತಲೋಕ, ನಮ್ಮ ಮಕ್ಕಳ ಯೋಚನೆಯ ಪರಿಧಿಯನ್ನು ವಿಸ್ತರಿಸುತ್ತದೆ. ಅವರನ್ನು ಭವಿಷ್ಯದಲ್ಲಿ ಹೆಚ್ಚು ಸೃಜನಾತ್ಮಕವಾಗಿ ಯೋಚಿಸುವಂತೆ ಮಾಡುತ್ತದೆ. ಸರಸ್ವತಿ ದೇವತೆಯ ವರಪುತ್ರ ಎಸ್.ಎಲ್. ಭೈರಪ್ಪನವರು ನಮ್ಮ ಮಕ್ಕಳ ಪುಸ್ತಕ ಬಿಡುಗಡೆಗೊಳಿಸಿ ಆಶೀರ್ವದಿಸಿರುವುದು ಎಲ್ಲರ ಸೌಭಾಗ್ಯ ಎಂದು ಅಭಿಪ್ರಾಯಪಟ್ಟರು. ಶಾಲೆಯ ಮುಖ್ಯ ಆಡಳಿತಾಧಿಕಾರಿ ಮಾಧುರ್ಯ ರಾಮಸ್ವಾಮಿ ಮಾತನಾಡಿ, ಶಾಲೆ ತನ್ನ ವಿದ್ಯಾರ್ಥಿಗಳ ಸೃಜನಾತ್ಮಕ ಯೋಚನೆಗಳಿಗೆ ಬೆಂಬಲವಾಗಿ ನಿಲ್ಲಲು ಈ ಪುಸ್ತಕವನ್ನು ಪ್ರಕಟಿಸಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಪ್ರಯತ್ನಗಳಿಗೆ ಶಾಲೆ ವೇದಿಕೆ ಒದಗಿಸಲಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಶಾಲಾ ಪ್ರಾಂಶುಪಾಲೆ ಪ್ರಿಯಾಂಕಾ ಬಿ. ಉಪಸ್ಥಿತರಿದ್ದರು.

ರಾಜ್ಯ ಮಟ್ಟದ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್ ಸಮಾರೋಪ

16ಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಆಟಗಾರರು ಸೇರಿ 600ಕ್ಕೂ ಅಧಿಕ ಮಂದಿ ಭಾಗಿ

● ವಿಜೇತರಿಗೆ ಬಹುಮಾನ ವಿತರಣೆ ● 15, 17 ವರ್ಷದೊಳಗಿನ ವಿಭಾಗದಲ್ಲಿ ನಡೆದ ಪಂದ್ಯಾವಳಿ

ಮೈಸೂರು,ಸೆ.5(ಪಿಎಂ)–ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಹಾಗೂ ಮೈಸೂರು ಡಿಸ್ಟ್ರಿಕ್ ಬ್ಯಾಡ್ಮಿಂಟನ್ ಅಸೋಸಿಯೇಷನ್ ಜಂಟಿ ಆಶ್ರಯದಲ್ಲಿ ಆಯೋಜಿಸಿದ್ದ ಕರ್ನಾಟಕ ರಾಜ್ಯ ಮಟ್ಟದ ಬ್ಯಾಡ್ಮಿಂಟನ್ ಚಾಂಪಿಯನ್‌ಶೀಪ್ ಪಂದ್ಯಾವಳಿ ಗುರುವಾರ ಸಮಾರೋಪ ಕಂಡಿತು.

ಮೈಸೂರಿನ ದಟ್ಟಗಳ್ಳಿಯ ಕನಕದಾಸ ನಗರದ ಹೆಲ್ತ್ ಸಿಟಿ ಬ್ಯಾಡ್ಮಿಂಟನ್ ಕೋರ್ಟ್‌ನಲ್ಲಿ 15 ವರ್ಷದೊಳಗಿನ ಹಾಗೂ 17 ವರ್ಷದೊಳಗಿನ ವಿಭಾಗಗಳಲ್ಲಿ ನಡೆದ ಪಂದ್ಯಾವಳಿಯಲ್ಲಿ ಜಯಗಳಿಸಿದವರಿಗೆ ಇಂದು ಬಹುಮಾನಗಳನ್ನು ವಿತರಣೆ ಮಾಡಲಾಯಿತು. ಕರ್ನಾಟಕದಾದ್ಯಂತ 600ಕ್ಕೂ ಹೆಚ್ಚು ಆಟಗಾರರು ಪಂದ್ಯಾವಳಿಯಲ್ಲಿ ಪಾಲ್ಗೊಂಡಿದ್ದರು. ಚೀನಾದಲ್ಲಿ ನಡೆದ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದವರ ಪೈಕಿ 16ಕ್ಕೂ ಹೆಚ್ಚು ಆಟಗಾರರು ಈ ಪಂದ್ಯಾವಳಿಯಲ್ಲಿ ಪಾಲ್ಗೊಂಡಿದ್ದರು.



ಕನಕದಾಸನಗರದ ಹೆಲ್ತ್ ಸಿಟಿ ಬ್ಯಾಡ್ಮಿಂಟನ್ ಕೋರ್ಟ್‌ನಲ್ಲಿ ಗುರುವಾರ ನಡೆದ ಸಮಾರೋಪ ಸಮಾರಂಭದಲ್ಲಿ ಪಂದ್ಯಾವಳಿಯಲ್ಲಿ ಜಯ ಗಳಿಸಿದ ಮೈಸೂರಿನ ಬ್ಯಾಡ್ಮಿಂಟನ್ ಪಟುಗಳಿಗೆ ಬಹುಮಾನ ವಿತರಣೆ ಮಾಡಲಾಯಿತು. ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಅಧ್ಯಕ್ಷ ಮನೋಜ್ ಕುಮಾರ್ ಜಿ.ಹೊಸಪೇಟಿಮಠ, ಕಾರ್ಯಕಾರಿ ಸಮಿತಿ ಸದಸ್ಯ ಎಸ್.ಜಿ.ಪ್ರಭು, ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ವೆಂಕಟೇಶ್ ಇತರರು ಚಿತ್ರದಲ್ಲಿದ್ದಾರೆ.

ಈ ಪಂದ್ಯಾವಳಿಗೆ ಆ.30ರಂದು ಸಾಧಕ ಪರ್ವತರೋಹಿಯೂ ಆದ ವೈದ್ಯೆ ಡಾ.ಉಷಾ ಹೆಗ್ಡೆ ಹಾಗೂ ದಕ್ಷಿಣ ವಲಯ ಡಿಐಜಿಪಿ ಡಾ.ಎಂ.ಬಿ.ಬೋರಲಿಂಗಯ್ಯ ಚಾಲನೆ ನೀಡಿದ್ದರು. ಏಳು ದಿನಗಳ ಕಾಲ ನಡೆದ ಪಂದ್ಯಾವಳಿಯು ಇಂದು ಮುಕ್ತಾಯ ಕಂಡಿತು. ಗುರುವಾರ ನಡೆದ ಸಮಾರೋಪ ಸಮಾರಂಭದಲ್ಲಿ ಎಲ್ಡರ್ಸ್ ಸಿಟಿಜನ್ ಕೌನ್ಸಿಲ್ ಅಧ್ಯಕ್ಷ ಎಸ್.ವಿ.ಗೌಡಪ್ಪ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ವಿಜೇತ ಬ್ಯಾಡ್ಮಿಂಟನ್ ಪಟುಗಳಿಗೆ ಬಹುಮಾನ ವಿತರಿಸಿದರು.

ಫೈನಲ್ ಪಂದ್ಯದ ವಿಜೇತರು: 15 ವರ್ಷದೊಳಗಿನ ಬಾಲಕರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಅನಿರುದ್ಧ್ ರೆಡ್ಡಿ ಚಲ್ಲಪ್ಪಿ ವಿರುದ್ಧ ಮೈಸೂರಿನ ಶ್ಯಾಮ್ ಬಿಂಡಿಗನವಿಲೆ ಜಯ ಗಳಿಸಿದರು. ಅಂತೆಯೇ 15 ವರ್ಷದೊಗಿನ ಬಾಲಕಿಯರ ವಿಭಾಗದಲ್ಲಿ ಬೆಂಗಳೂರಿನ ಐಕ್ಯಶೆಟ್ಟಿ ವಿರುದ್ಧ ಶೈನಾ ಮಣಿಮುತ್ತು ವಿಜಯಶಾಲಿಯಾದರು.

15 ವರ್ಷದೊಳಗಿನ ಬಾಲಕರ ಡಬಲ್ಸ್‌ನಲ್ಲಿ ಬೆಂಗಳೂರಿನ ಎಸ್.ಹರ್ಷವರ್ಧನ್ ಮತ್ತು ದಕ್ಷಿಣ ಕನ್ನಡದ ಸಾತ್ವಿಕ್ ಎಸ್.ಪ್ರಭು ಜೋಡಿ ವಿರುದ್ಧ ಮೈಸೂರಿನ ಪಿಯೂಷ್ ತ್ರಿಪಾಠಿ ಮತ್ತು ಶ್ಯಾಮ್ ಬಿಂಡಿಗನವಿಲೆ ಜೋಡಿ ಜಯ ಗಳಿಸಿತು. ಅಂತೆಯೇ 15 ವರ್ಷದೊಳಗಿನ ಬಾಲಕಿಯರ ಡಬಲ್ಸ್‌ನಲ್ಲಿ ಬೆಂಗಳೂರಿನ ದಿಶಾ ರವಿಭಟ್ ಮತ್ತು ತನ್ವಿ ಮುನೋತ್ ಜೋಡಿ ವಿರುದ್ಧ ಬೆಂಗಳೂರು ನಗರದ ನಿಧಿ ಆತ್ಮರಾಮ್ ಮತ್ತು ಸೆಲ್ವಸವೃದ್ಧಿ ಜೋಡಿ ವಿಜಯಶಾಲಿಯಾಯಿತು. 15 ವರ್ಷದೊಳಗಿನ ಎಕ್ಸ್‌ಡಿ (ಬಾಲಕ–ಬಾಲಕಿಯರು) ವಿಭಾಗದಲ್ಲಿ ಬೆಂಗಳೂರು ನಗರದ ಸಿ.ವಿಹಾನ್ ಮತ್ತು ತನ್ವಿ ಮುನೋತ್ ಜೋಡಿ ವಿರುದ್ಧ ಬೆಂಗಳೂರು ನಗರದ ಮೆಹುಲ್ ಮಾನವ್ ಅರುಲ್ಮುರುಗನ್ ಮತ್ತು ದಿಶಾ ರವಿಭಟ್ ಜೋಡಿ ಜಯ ಗಳಿಸಿತು.

17 ವರ್ಷದೊಳಗಿನ ಬಾಲಕರ ಸಿಂಗಲ್ಸ್‌ನಲ್ಲಿ ಮೈಸೂರಿನ ಹಾರ್ದಿಕ್ ದಿವ್ಯಾಂಶ್ ವಿರುದ್ಧ ಬೆಂಗಳೂರು ನಗರದ ಎಸ್.ನಿಶ್ಚಲ್ ಜಯ ಗಳಿಸಿದರು. ಅಂತೆಯೇ 17 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್‌ನಲ್ಲಿ ಮೈಸೂರಿನ ದಿಯಾ ಭೀಮಯ್ಯ ವಿರುದ್ಧ ಶೈನಾ ಮಣಿಮುತ್ತು ಜಯ ಸಾಧಿಸಿದರು. 17 ವರ್ಷ ದೊಳಗಿನ ಬಾಲಕರ ಡಬಲ್ಸ್‌ನಲ್ಲಿ ಶಿವಮೊಗ್ಗದ ಎಸ್.ಪವನ್ ಮತ್ತು ಎಸ್. ಮನಿತ್ ಜೋಡಿಯನ್ನು ಮೈಸೂರಿನ ಅಮಿತ್‌ರಾಜ್ ಮತ್ತು ಹಾರ್ದಿಕ್ ದಿವ್ಯಾಂಶ್ ಜೋಡಿ ಮಣಿಸಿ ಜಯ ಸಾಧಿಸಿತು.

17 ವರ್ಷದೊಳಗಿನ ಬಾಲಕಿಯರ ಡಬಲ್ಸ್‌ನಲ್ಲಿ ಬೆಂಗಳೂರಿನ ಕಾಲಂದಿಕಾ ಅರುಣ್‌ಕುಮಾರ್ ಮತ್ತು ನೇಹಾ ಕೃಪೇಶ್ ವಿರುದ್ಧ ಬೆಂಗಳೂರು ನಗರದ ಅದಿತಿ ದೀಪಕ್ ರಾಜ್ ಮತ್ತು ಬಿ.ವಿ.ವೃದ್ಧಿ ಪೊನ್ನಮ್ಮ ಜೋಡಿ ಜಯ ಸಾಧಿಸಿತು. 17 ವರ್ಷದೊಳಗಿನ ಎಕ್ಸ್‌ಡಿ ವಿಭಾಗದಲ್ಲಿ ಬೆಂಗಳೂರಿನ ಧ್ಯಾನ್ ಸಂತೋಷ್ ಮತ್ತು ದಿಶಾ ಸಂತೋಷ್ ಜೋಡಿ ವಿರುದ್ಧ ಅಮಿತ್ ರಾಜ್ ನಟರಾಜ್ ಮತ್ತು ದಿಯಾ ಭೀಮಯ್ಯ ಜೋಡಿ ಜಯ ಗಳಿಸಿತು.

ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಅಧ್ಯಕ್ಷ ಮನೋಜ್ ಕುಮಾರ್ ಜಿ.ಹೊಸಪೇಟಿಮಠ, ಕಾರ್ಯದರ್ಶಿ ಪಿ.ರಾಜೇಶ್, ಕಾರ್ಯಕಾರಿ ಸಮಿತಿ ಸದಸ್ಯ ಎಸ್.ಜಿ.ಪ್ರಭು, ಬ್ಯಾಡ್ಮಿಂಟನ್ ಡೆವಲಪ್ ಮೆಂಟ್ ಕಮಿಟಿ ಅಧ್ಯಕ್ಷ ವಿಶ್ವಾಸ್, ಮೈಸೂರು ಡಿಸ್ಟ್ರಿಕ್ ಬ್ಯಾಡ್ಮಿಂಟನ್ ಅಸೋಸಿಯೇಷನ್ ಕಾರ್ಯಕಾರಿ ಸಮಿತಿ ಸದಸ್ಯೆ ಜ್ಯೋತಿ, ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ವೆಂಕಟೇಶ್, ನೆಹರು ಯುವ ಕೇಂದ್ರದ ಪ್ರಾದೇಶಿಕ ನಿರ್ದೇಶಕ ನಟರಾಜ್, ಕುವೆಂಪು ನಗರ ಠಾಣೆ ಇನ್ಸ್‌ಪೆಕ್ಟರ್ ಅರುಣ್ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು,ಸೆ.5–ಮೈಸೂರಿನ ಎನ್‌ಜೆಎಸ್ ಚಾರಿಟೆಬಲ್ ಟ್ರಸ್ಟ್ ಮತ್ತು ವೀರಶೈವ ಸಜ್ಜನ ಸಂಘದ ವತಿಯಿಂದ ಸೆ.10ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಮಂಡಿ ಮೊಹಲ್ಲಾದ ಕಬೀರ್ ರಸ್ತೆ, ಮಂಡಿ ಪೊಲೀಸ್ ಸ್ಟೇಷನ್ ಹತ್ತಿರವಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 94487 53597, 99161 55453, 94487 38657 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

6.09.2024 ಶುಕ್ರವಾರ, ಮಳೆ ನಕ್ಷತ್ರ: ಪುಬ್ಬ, 31.08.2024 ರಿಂದ 12.09.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ಹಸ್ತ, ರಾಹುಕಾಲ : ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** 'ಬಂಜೆತನ, ಮುಟ್ಟಿನ ಸಮಸ್ಯೆ' ಹಾಗೂ ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಯಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಅವಧೂತ ದತ್ತ ಪೀಠಾಧಿಪತಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ದತ್ತಪೀಠ ಉತ್ತರಾಧಿಕಾರಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರ 21ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವ, ಸ್ವರ್ಣಗೌರೀ ವ್ರತ, ಸ್ಥಳ: ಆಶ್ರಮದ ಆವರಣ, ಬೆಳಗ್ಗೆಯಿಂದ.

■ **ಶ್ರೀ ಶ್ರೀ ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್ :** ಶ್ರೀ ಗೌರಿ ಗಣೇಶ ಹಬ್ಬ ಮತ್ತು ಶ್ರೀ 101 ಗಣಪತಿ ಪ್ರತಿಷ್ಠಾಪನೆ, 70ನೇ ವಾರ್ಷಿಕೋತ್ಸವದ ಪ್ರಯುಕ್ತ ವಿಶೇಷ ಪೂಜಾ ಮಹೋತ್ಸವ, ದೇವತಾ ಕಾರ್ಯಕ್ರಮ (ಶ್ರೀ ಸ್ವರ್ಣಗೌರಿ ಸ್ಥಾಪನೆ), ಬ್ರಾಹ್ಮಿ ಮುಹೂರ್ತದಲ್ಲಿ ಪುಣ್ಯಾಹ, ಪಂಚಗವ್ಯ ಸಾಧನೆ, ಪೋಷಣೆ, ರಕ್ಷಾ ಬಂಧನ, ಬೆಳಗ್ಗೆ 7.30ಕ್ಕೆ ಸ್ವರ್ಣ ಗೌರಿ ಸ್ಥಾಪನೆ, ಅಷ್ಟೋತ್ತರ ಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: 101 ಗಣಪತಿ ದೇವಸ್ಥಾನ, ತ್ಯಾಗರಾಜ ರಸ್ತೆ.

■ **ಶ್ರೀ ವಿದ್ಯಾಗಣಪತಿ ದೇವಸ್ಥಾನ, ಶ್ರೀ ಮಹಾಲಕ್ಷ್ಮಿ ದೇವಸ್ಥಾನ ಟ್ರಸ್ಟ್ :** ಗೌರಿ ಗಣೇಶ ಹಬ್ಬ ಹಾಗೂ 44ನೇ ವಾರ್ಷಿಕೋತ್ಸವದ ಪೂಜಾ ಮಹೋತ್ಸವ, ಬೆಳಗ್ಗೆ 5 ಗಂಟೆಗೆ ಸ್ವರ್ಣಗೌರಿ ಪ್ರತಿಷ್ಠಾಪನೆ, 7ಕ್ಕೆ ಮಹಾಮಂಗಳಾರತಿ, ಸ್ಥಳ: ಶ್ರೀ ವಿದ್ಯಾಗಣಪತಿ ದೇವಸ್ಥಾನ, ವಿನಾಯಕನಗರ.

■ **ಮೈಸೂರು ಶರಣ ಮಂಡಳಿ :** ಡಾ. ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 109ನೇ ಜನ್ಮ ದಿನಾಚರಣೆ ಹಾಗೂ ರಾಜೇಂದ್ರ ಶ್ರೀ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭ, ಪುಷ್ಪಾರ್ಚನೆ : ಶಾಸಕ ಜಿ.ಟಿ. ದೇವೇಗೌಡ, ಸಂಯೋಜನಾಧಿಕಾರಿ ಜಿ.ಎಲ್. ತ್ರಿಪುರಾಂತಕ ಅವರಿಂದ ರಾಜೇಂದ್ರ ಶ್ರೀಗಳ ಜೀವನ ಮತ್ತು ಸಾಧನೆ ಕುರಿತು ಉಪನ್ಯಾಸ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮುಖ್ಯ ಅತಿಥಿಗಳು : ಸಮಾಜ ಸೇವಕರಾದ ಮಂಜುನಾಥ್, ಜೈಶಂಕರ್, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.

■ **ದೀಪ್ತಿ ಸಾಂಸ್ಕೃತಿಕ ವೇದಿಕೆ, ರಾಮಕೃಷ್ಣನಗರ :** ಲೇಖಕ, ವಿಮರ್ಶಕ ಕಾಳಿಹುಂಡಿ ಶಿವಕುಮಾರ್ ಅವರು ಸಂಗ್ರಹಿಸಿರುವ ವಿವಿಧ ಭಾಷೆಗಳ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಗಣಪನ ಚಿತ್ರ ಲೇಖನ ಪ್ರದರ್ಶನ, ಉದ್ಘಾಟನೆ: ಹಿರಿಯ ಸಾಹಿತಿ, ಚುಕ್ಕಿ ಚಿತ್ರ ಕಲಾವಿದ ಮೋಹನ್ ವೆರ್ಣೇಕರ್, ಅಧ್ಯಕ್ಷತೆ: ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರದ ಮುಖ್ಯಸ್ಥ ಎಂ.ಪಿ.ಪ್ರಭುಸ್ವಾಮಿ, ಮುಖ್ಯ ಅತಿಥಿಗಳು: ಕರ್ನಾಟಕ ರಾಜ್ಯ ಮುಕ್ತಕ ಸಾಹಿತ್ಯ ಪರಿಷತ್ ಅಧ್ಯಕ್ಷ ಮುತ್ತುಸ್ವಾಮಿ, ಉಪಸ್ಥಿತರು : ಗಣಪತಿ ಚಿತ್ರ–ಲೇಖನ ಸಂಗ್ರಾಹಕ ಕಾಳಿಹುಂಡಿ ಶಿವಕುಮಾರ್, ಕಾರ್ಯಕ್ರಮದ ನಿರೂಪಣೆ : ಮೈಸೂರು ಆಕಾಶವಾಣಿ ಸಮುದ್ಯತಾ ಕೇಳುಗರ ಬಳಗದ ಅಧ್ಯಕ್ಷ ಕಣ್ಣೂರು ವಿ.ಗೋವಿಂದಾಚಾರಿ, ಸ್ಥಳ: 362/ಎ, ನಿಮಿಷಾಂಬನಗರ ಬಡಾವಣೆಯಲ್ಲಿರುವ (ನಮನ ಪಾರ್ಕ್ ಹತ್ತಿರ) ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರ, ಬೆಳಗ್ಗೆ 11.30ಕ್ಕೆ.

■ **ಶ್ರೀ ಮಹಾಲಕ್ಷ್ಮಿ ದೇವಸ್ಥಾನ :** ದೇವರನಾಮ ಸಂಕೀರ್ತನೆ, ವಿದುಷಿ ಶ್ರೀಮತಿ ವಿಜಯಲಕ್ಷ್ಮಿ ವಸಂತ್ (ಲಕ್ಷ್ಮಿ) ಅವರಿಂದ, ವಿದ್ವಾನ್ ಯಶಸ್ವಿ–ವಯೋಲಿನ್, ವಿದ್ವಾನ್ ವಿಕ್ರಮ್ ಭಾರದ್ವಾಜ್–ಮೃದಂಗ, ಸ್ಥಳ: ದೇವಸ್ಥಾನದ ಪ್ರಾಂಗಣ, ದಟ್ಟಗಳ್ಳಿ, ಸಂಜೆ 6.30 ರಿಂದ 8 ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಪ್ರೊ. ಮೈಸೂರು ಕೃಷ್ಣಮೂರ್ತಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 'ಬಣ್ಣದ ಬಾನಾಡಿಗಳು' ಬಾನುಲಿ ಸರಣಿ, ರಚನೆ: ಡಾ.ಎಸ್.ವಿ.ನರಸಿಂಹನ್, ಪ್ರಸ್ತುತಿ: ಜಿ.ಶಾಂತಕುಮಾರ್, 6.40 ಮತ್ತು ಸಂಜೆ 5.45 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಡಾ.ಮಂಜುನಾಥ. ಪಿ, ಮುಖ್ಯಸ್ಥರು, ಮನೋವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಪ್ರಾಯೋಜಕರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು. ಪ್ರಸ್ತುತಿ: ಎನ್.ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.00 ನಮ್ಮ ಆರೋಗ್ಯ: ರಾಷ್ಟ್ರೀಯ ಪೌಷ್ಟಿಕ ಆಹಾರ ಸಪ್ತಾಹದ ಸಂದರ್ಭದಲ್ಲಿ 'ಅನಿಮಿಯಾ ಮುಕ್ತ ಪೌಷ್ಟಿಕ ಕರ್ನಾಟಕ ಕಾರ್ಯಕ್ರಮ' ಕುರಿತು ತಿಳಿಸಿಕೊಡಲಿದ್ದಾರೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮೈಸೂರು ವಿಭಾಗೀಯ ಸಹನಿರ್ದೇಶಕರ ಕಚೇರಿಯಲ್ಲಿ ಉಪನಿರ್ದೇಶಕಿ ಡಾ.ಬಿ.ಮಲ್ಲಿಕಾ ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್ ನಂತರ ರಾಷ್ಟ್ರೀಯ ದೃಷ್ಟಿದಾನ ಪಾಕ್ಷಿಕದ ಸಂದರ್ಭದಲ್ಲಿ 'ನೇತ್ರದಾನ ಮಹಾದಾನ' ಕುರಿತು ಮಂಡ್ಯ ಜಿಲ್ಲೆ ಬೆಳ್ಳೂರಿನ ಆದಿಚುಂಚನಗಿರಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ಕಣ್ಣಿನ ವಿಭಾಗದ ಪ್ರೊಫೆಸರ್ ಡಾ.ಪ್ರಕಾಶ್. ಡಿ.ಎನ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜು ನಾಥ್, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಕೊಡಿಯಾಲ ಕೆ.ಎನ್. ಕೃಷ್ಣಮೂರ್ತಿ ಮತ್ತು ಕೆ.ಎನ್.ಸುರೇಂದ್ರ–ಯುಗಳ ನಾದಸ್ವರ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ಸೈಕಲ್ ಸವಾರಿ ಮಾತಿನ ಲಹರಿ', ಪ್ರಸ್ತುತಿ : ಜಾಂಪಣ್ಣ ಆಶೀಹಾಳ್ **ಮಧ್ಯಾಹ್ನ:** 12.30 ದೇವರ ನಾಮ, 12.45–ಕಾದಂಬರಿ ವಿಹಾರ–ಅ.ನ.ಕೃ ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ: ಉಮೇಶ್. ಎಸ್.ಎಸ್, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಲಾಲ್ ಗುಡಿ ಶ್ರೀಮತಿ ಬ್ರಹ್ಮಾನಂದನ್ ಮತ್ತು ಲಾಲ್ ಗುಡಿ ಆರ್.ರಾಜಲಕ್ಷ್ಮಿ–ಯುಗಳ ವೈಯೋಲಿನ್, 4.00 ಮಹಿಳಾರಂಗ–ಸಖೀ ಸಂವಾದ. ವಿಷಯ: ಗೌರಿ ಹಬ್ಬ, ಪ್ರಸ್ತುತಿ: ಸಹನ ಮತ್ತು ಕೀರ್ತನ, 4.30 ವೃತ್ತಿ ಮಾರ್ಗದರ್ಶನ, 6.50 ಕೃಷಿರಂಗ: ಕೂಳೆ ಕಬ್ಬಿನ ನಿರ್ವಹಣೆ. ಈ ಕುರಿತು ಮಂಡ್ಯದ ವಿ.ಸಿ.ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ನಿವೃತ್ತ ಪ್ರಾಧ್ಯಾಪಕರಾದ ಡಾ.ಎಸ್.ಎನ್.ಸ್ವಾಮಿಗೌಡ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ವಿಜ್ಞಾನ ಭಾರತೀ: ಭೌತಶಾಸ್ತ್ರದ ಅಪ್ರತಿಮ ಪ್ರತಿಭೆ ಮೇಘನಾದ್ ಸಹಾ ಈ ಕುರಿತು ಮಾತನಾಡುತ್ತಾರೆ ಎನ್.ಶಂಕರ್, ಸಮಯದ ಇತಿಹಾಸ ಈ ಬಗ್ಗೆ ಮಾತನಾಡುತ್ತಾರೆ: ನಿವೃತ್ತ ಭೌತಶಾಸ್ತ್ರ ಪ್ರಾಧ್ಯಾಪಕರಾದ ಕೆ.ಎಸ್.ಮಲ್ಲೇಶ್, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ವಿ.ದೇಶಿಕಾಚಾರ್–ಕೊಳಲು, 10.00 ಹಳ್ಳಿ ಹಾಡು, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 6 ಶುಕ್ರವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 142 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಲಾಭದಾಯಕ ಹುದ್ದೆ ಹಿನ್ನೆಲೆ: ಮುಖ್ಯಮಂತ್ರಿಗಳ ಐವರು ಸಲಹೆಗಾರರ


ಶಾಸಕ ಸ್ಥಾನಕ್ಕೆ ಕುತ್ತು?

ರಾಜಭವನದಿಂದ ವಾಪಸ್ಸಾದ ಮಸೂದೆಗಳಲ್ಲಿ ಈ ಸಂಬಂಧಿತ ತಿದ್ದುಪಡಿ ಮಸೂದೆಯೂ ಒಂದು


ಕೆ.ಗೋವಿಂದರಾಜ್


ನಜೀರ್ ಅಹಮದ್


ಬಸವರಾಜ ರಾಯರೆಡ್ಡಿ


ಆರ್.ವಿ.ದೇಶಪಾಂಡೆ


ಬಿ.ಆರ್.ಪಾಟೀಲ್

ಬೆಂಗಳೂರು, ಸೆ.5(ಕೆಎಂಶಿ)– ವಿಧಾನಮಂಡಲದ ಸದಸ್ಯರಾಗಿದ್ದುಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲಹೆಗಾರರಾಗಿರುವ ಐವರು ಶಾಸಕರು ತಮ್ಮ ಸದಸ್ಯತ್ವ ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ.

ಮುಖ್ಯಮಂತ್ರಿ ಅವರ ರಾಜಕೀಯ ಸಲಹೆಗಾರರಾಗಿರುವ ವಿಧಾನಪರಿಷತ್ ಸದಸ್ಯ ಕೆ.ಗೋವಿಂದರಾಜ್, ನಜೀರ್ ಅಹಮದ್, ಆರ್ಥಿಕ ಸಲಹೆಗಾರರಾಗಿರುವ ವಿಧಾನಸಭೆಯ ಬಸವರಾಜ ರಾಯರೆಡ್ಡಿ, ಮುಖ್ಯಮಂತ್ರಿಗಳ ಸಲಹೆಗಾರ (ನೀತಿ ಮತ್ತು ಯೋಜನಾ) ಆರ್.ವಿ.ದೇಶಪಾಂಡೆ ಮತ್ತು ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ್ ಅವರುಗಳು ಸದಸ್ಯತ್ವ ಕಳೆದುಕೊಳ್ಳುವ ಅಪಾಯದಲ್ಲಿದ್ದಾರೆ. ಶಾಸಕ ಸ್ಥಾನದ ಜೊತೆಗೆ ಲಾಭದಾಯಕ ಹುದ್ದೆಯಲ್ಲಿ ಇದ್ದಾರೆ ಎಂಬ ಕಾರಣದಿಂದ ಅವರ ಸ್ಥಾನಕ್ಕೆ ಕುತ್ತು ಬಂದಿದೆ. ಇದನ್ನು ಮನಗಂಡ ರಾಜ್ಯ ಸರ್ಕಾರ ಕಳೆದ ಬಜೆಟ್ ಅಧಿವೇಶನದಲ್ಲಿ ಇವರಿಗಾಗಿಯೇ ತಿದ್ದುಪಡಿ ಮಸೂದೆ ತಂದು ರಾಜ್ಯಪಾಲರ ಅಂಗೀಕಾರಕ್ಕೆ ಕಳುಹಿಸಿತ್ತು. ಸರ್ಕಾರ ಕಳುಹಿಸಿದ ಹಲವು ಮಸೂದೆಗಳಿಗೆ ವಿವರಣೆ ಕೇಳಿ, ಹಿಂದಕ್ಕೆ ಕಳುಹಿಸಲಾಗಿದ್ದು, ಅದರಲ್ಲಿ ಈ ತಿದ್ದುಪಡಿ ಮಸೂದೆಯೂ ಸೇರಿದೆ.

ರಾಜ್ಯಪಾಲರು ವಿವರಣೆ ಕೇಳಿ ಹಿಂದೆ ಕಳುಹಿಸಿರುವ ಮಸೂದೆಗಳಲ್ಲಿ ಐವರು ಶಾಸಕರ ಲಾಭದಾಯಕ ಹುದ್ದೆಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಉತ್ತರವನ್ನು ಬಯಸಿದೆ. ರಾಜಭವನ ಮತ್ತು ಸರ್ಕಾರದ ನಡುವಿನ ಮುಸುಕಿನ ಗುದ್ದಾಟದ ನಡುವೆ ಈ ಮಸೂದೆಯನ್ನು ಹಿಂದಕ್ಕೆ ಕಳುಹಿಸಿರುವುದು ಮುಖ್ಯಮಂತ್ರಿಗಳಿಗೆ ಆಘಾತ ಉಂಟು ಮಾಡಿದೆ. ಇದರ ಗಾಂಭೀರ್ಯತೆಯನ್ನು ಅರಿತ ಮುಖ್ಯಮಂತ್ರಿ ಅವರು, ರಾಜ್ಯಪಾಲರು ಹಿಂದಕ್ಕೆ ಕಳುಹಿಸಿರುವ ಮಸೂದೆಗಳ ಪೈಕಿ ಲಾಭದಾಯಕ ಹುದ್ದೆ ಪ್ರಶ್ನಿತ ತಿದ್ದು ಪಡಿ ಮಸೂದೆಯನ್ನು ಇಂದು ನಡೆದ ಸಚಿವ ಸಂಪುಟ ಸಭೆಯ ಮುಂದಿಟ್ಟು ಸುದೀರ್ಘ ಚರ್ಚೆ ನಡೆಸಿದರು. ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣೆ) (ತಿದ್ದುಪಡಿ) ವಿಧೇಯಕ 2024ಕ್ಕೆ ಅನುಮತಿ ನೀಡುವಂತೆ ರಾಜ್ಯಪಾಲರಿಗೆ ಕಡತವನ್ನು ಮತ್ತೆ ಕಳುಹಿಸಿಕೊಡಲು ಸಭೆ ತೀರ್ಮಾನಿಸಿತು. ರಾಜಭವನ ಮೂರು ವಿಷಯಗಳಿಗೆ ಸಂಬಂಧಿಸಿದಂತೆ ಕೇಳಿರುವ ವಿವರಣೆಗಳಿಗೆ ಕಾನೂನು ತಜ್ಞರ ಸಲಹೆ ಪಡೆದು, ಟಿಪ್ಪಣಿ ಸಿದ್ಧ ಪಡಿಸಿ ಕಳುಹಿಸಲಾಗಿದೆ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ.

ಮೈಸೂರು ಅರಮನೆ ಆವರಣಕ್ಕೆ ಆಗಮಿಸಿದ ದಸರಾ ಗಜಪಡೆ

ಎರಡನೇ ತಂಡದ ಐದು ಆನೆಗೆ ಸಾಂಪ್ರದಾಯಿಕ ಸ್ವಾಗತ

ಒಟ್ಟು 14 ಆನೆಗಳು ಇಂದಿನಿಂದ ರಾಜಮಾರ್ಗದಲ್ಲಿ ತಾಲೀಮು


ಮೈಸೂರು ಅರಮನೆ ಆವರಣಕ್ಕೆ ಆಗಮಿಸಿದ ದಸರಾ ಗಜಪಡೆ ಎರಡನೇ ತಂಡದ ಐದು ಆನೆಗಳಿಗೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿ, ಸ್ವಾಗತಿಸಲಾಯಿತು

ಮೈಸೂರು, ಸೆ.5(ಎಂಕೆ)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ರೂವಾರಿಗಳಾದ ಗಜಪಡೆಯ ಎರಡನೇ ತಂಡದ ಆನೆಗಳು ಗುರುವಾರ ಸಂಜೆ ಅರಮನೆ ಆವರಣ ಪ್ರವೇಶಿಸಿದವು.

ಮೈಸೂರು ಅರಮನೆಯ ಜಯ ಮಾರ್ತಾಂಡ ದ್ವಾರದ ಮೂಲಕ ಸಂಜೆ 5 ಗಂಟೆಗೆ ಆಗಮಿಸಿದ ಗಜಪಡೆಯ ಎರಡನೇ ತಂಡದ ಆನೆಗಳಿಗೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿ, ಕಬ್ಬು, ಬೆಲ್ಲ ಇನ್ನಿತರೆ ಹಣ್ಣುಗಳನ್ನು ತಿನ್ನಿಸಿ ಮಂಗಳ ವಾದ್ಯಗಳೊಂದಿಗೆ ಭಕ್ತಿಯಿಂದ ಬರಮಾಡಿಕೊಳ್ಳಲಾಯಿತು. ಮತ್ತಿಗೋಡು ಶಿಬಿರದಿಂದ ಮಹೇಂದ್ರ(41), ದುಬಾರೆ ಶಿಬಿರದಿಂದ ಪ್ರಶಾಂತ(51), ಸುಗ್ರೀವ(42), ಹೆಣ್ಣಾನೆಗಳಾದ ದೊಡ್ಡಹರವೆ ಶಿಬಿರದ ಲಕ್ಷ್ಮೀ(53) ಹಾಗೂ ಬಂಡೀಪುರ ಅರಣ್ಯದ ರಾಂಪುರ ಕ್ಯಾಂಪ್‌ನಿಂದ ಹಿರಣ್ಯ(47) ಆನೆಗಳನ್ನು ಅತ್ಯಂತ ಪ್ರೀತಿ ಮತ್ತು ಆತ್ಮೀಯತೆಯಿಂದ ಸ್ವಾಗತಿಸಲಾಯಿತು. ಬಳಿಕ ಅರಮನೆ ಆವರಣದಲ್ಲಿ ಕೆಲ ದೂರ ಸಂಚರಿಸಿದ ಗಜಪಡೆಯನ್ನು ನಿರ್ಮಿಸಲಾಗಿದ್ದ ಶೆಡ್‌ಗಳಿಗೆ ಕರದೊಯ್ದು ಉಪಚಾರ ಮಾಡಲಾಯಿತು.

ನಾಳೆ ವಿಶೇಷ ಪೂಜಾ ಕಾರ್ಯಕ್ರಮ...

ಗಣೇಶ ಚತುರ್ಥಿಯ ಪ್ರಯುಕ್ತ ಅರಮನೆ ಆವರಣದಲ್ಲಿ ಸೆ.7ರಂದು ಮಧ್ಯಾಹ್ನ 12.30ಕ್ಕೆ ವಿಶೇಷ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮೈಸೂರು ದಸರಾ ಮಹೋತ್ಸವದ ರೂವಾರಿಗಳಾದ ದಸರಾ ಆನೆಗಳಿಗೆ ಪೂಜೆ ಸಲ್ಲಿಸುವ ಮೂಲಕ ಗಣೇಶ ಚತುರ್ಥಿ ಆಚರಿಸಲಾಗುವುದು.

ರಾಜಮಾರ್ಗದಲ್ಲಿ ತಾಲೀಮು: ಈಗಾಗಲೇ ಅಂಬಾರಿ ಆನೆ ಕ್ಯಾಪ್ಟನ್ ಅಭಿಮನ್ಯು ನೇತೃತ್ವದಲ್ಲಿ ಆಗಮಿಸಿದ್ದ ಮೊದಲ ತಂಡದ 9 ಆನೆಗಳು ಹಾಗೂ ಎರಡನೇ ತಂಡದ 5 ಆನೆಗಳು ಸೇರಿದಂತೆ 14 ಆನೆಗಳು ಸೆ.6 ರಿಂದ ಜಂಬೂಸವಾರಿ ರಾಜಮಾರ್ಗದಲ್ಲಿ ತಾಲೀಮು ನಡೆಸಲಿವೆ.

ಎಲ್ಲಾ ಆನೆಗಳು ಆರೋಗ್ಯವಾಗಿವೆ: ಈ ವೇಳೆ ಡಿಸಿಎಫ್ ಡಾ.ಪ್ರಭುಗೌಡ ಮಾತನಾಡಿ, ದಸರಾ ಜಂಬೂಸವಾರಿಯಲ್ಲಿ ಪಾಲ್ಗೊಳ್ಳುವ ■6ನೇ ಪುಟಕ್ಕೆ

ಅನ್ನ ಭಾಗ್ಯದಡಿ 5 ಕೆಜಿ ಅಕ್ಕಿ; ಉಳಿದೈದು ಕೆಜಿಗೆ

170 ರೂ. ನಗದು ಮುಂದುವರಿಕೆ

● ಸಂಪುಟ ಸಭೆ ನಿರ್ಧಾರ ● ಫುಡ್‌ಕಿಟ್ ನೀಡುವ ಪ್ರಸ್ತಾಪ ಕೈಬಿಟ್ಟ ಸರ್ಕಾರ ● ಕೆಎಎಸ್ ವಯೋಮಿತಿ ಒಮ್ಮೆಗೆ 3 ವರ್ಷ ಹೆಚ್ಚಳ ● ವರುಣ ಬಳಿ ವಿಟಿಯು ಕೌಶಲ ಕೇಂದ್ರ ಸ್ಥಾಪನೆ ● ಮೈಸೂರಲ್ಲಿ 100 ಹಾಸಿಗೆಯ ನೆಫ್ರೋಯುರಾಲಜಿ ಆಸ್ಪತ್ರೆ ಸ್ಥಾಪನೆ ● 2500 ಕಾಫಿ ಕಿಯೋಸ್ಕ್ ತೆರೆಯಲು ನಿರ್ಧಾರ; ಸ್ವ–ಸಹಾಯ ಮಹಿಳಾ ಗುಂಪಿನ ನಿರ್ವಹಣೆ

ಬೆಂಗಳೂರು, ಸೆ.5(ಕೆಎಂಶಿ) ಬಡತನದ ರೇಖೆಗಿಂತ ಕೆಳಗಿನ ಕುಟುಂಬಗಳಿಗೆ ಅನ್ನಭಾಗ್ಯ ಯೋಜನೆಯಡಿ ಹಾಲಿ ಇರುವ ಪದ್ಧತಿಯನ್ನು ಮುಂದುವರಿಸಲು ನಿರ್ಧಾರ ಕೈಗೊಂಡಿರುವ ರಾಜ್ಯ ಸಚಿವ ಸಂಪುಟ ಸದ್ಯಕ್ಕೆ ಫುಡ್‌ಕಿಟ್ ನೀಡುವ ಯೋಜನೆಯನ್ನು ಕೈ ಬಿಟ್ಟಿದೆ.

ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯು ಅಕ್ಟೋಬರ್ ತಿಂಗಳಿನಿಂದ ಹೆಚ್ಚುವರಿ 5 ಕೆಜಿ ಅಕ್ಕಿ ಬದಲು 170 ರೂ. ನೀಡುವುದನ್ನು ಸ್ಥಗಿತಗೊಳಿಸಿ ಫುಡ್ ಕಿಟ್ ನೀಡಲು ಸಂಪುಟಕ್ಕೆ ಶಿಫಾರಸ್ಸು ಮಾಡಿತ್ತು. ಈ ಯೋಜನೆ



ಅನುಷ್ಠಾನಗೊಳಿಸುವ ಸಂಬಂಧ ಸಂಪುಟ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆದು, ಹಾಲಿ ಪದ್ಧತಿಯನ್ನೇ ಮುಂದುವರೆಸುವ ತೀರ್ಮಾನ ಕೈಗೊಂಡಿದೆ. ಈಗ ಕೇಂದ್ರ ಸರ್ಕಾರ ಪ್ರತಿ ಕೆಜಿಗೆ 28 ರೂ.ನಂತೆ ಎಷ್ಟು ಅಕ್ಕಿ ಬೇಕಿದ್ದರೂ ನೀಡುತ್ತೇವೆಂದು ಹೇಳಿಕೆ ನೀಡಿದ ಬೆನ್ನಲ್ಲೇ ಸರ್ಕಾರ ಅಕ್ಕಿಯ ಬದಲು ಇತರೆ ಅಗತ್ಯ ಸಾಮಗ್ರಿಗಳನ್ನು ನೀಡಲು ಮುಂದಾಗಿ ಫುಡ್‌ಕಿಟ್‌ನಲ್ಲಿ 170 ರೂ. ಮೌಲ್ಯದ ಅಗತ್ಯ ಸಾಮಗ್ರಿಗಳು ನೀಡಲು ಉದ್ದೇಶಿಸಿತ್ತು.

ಕೆಎಎಸ್ ವಯೋಮಿತಿ ಒಮ್ಮೆಗೆ 3 ವರ್ಷ ಹೆಚ್ಚಳ: ರಾಜ್ಯದ ಸಿವಿಲ್ ಸೇವೆಗಳಲ್ಲಿನ ಗ್ರೂಪ್ 'ಬಿ' ಮತ್ತು 'ಸಿ' ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಗರಿಷ್ಠ ವಯೋಮಿತಿಯನ್ನು ಒಂದು ಬಾರಿಗೆ ಅನ್ವಯವಾಗುವಂತೆ ಮೂರು ವರ್ಷ ಹೆಚ್ಚಿಸಲಾಗಿದೆ.

ದೇವನಹಳ್ಳಿ ಬಳಿ ಹೊಸ ಜೈಲು: ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮೇಲೆ ಒತ್ತಡ ಹೆಚ್ಚಿರುವ ಹಿನ್ನೆಲೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಸಮೀಪ 600 ಬಂದಿಗಳ ಸಾಮರ್ಥ್ಯದ ನೂತನ ಕೇಂದ್ರ ಕಾರಾಗೃಹ ನಿರ್ಮಿಸಲು ಸಂಪುಟ ತೀರ್ಮಾನಿಸಿದೆ. ವಸತಿಯೇತರ ಕಟ್ಟಡ ಮತ್ತು ರಸ್ತೆ ನಿರ್ಮಾಣ ಕಾಮಗಾರಿಗಾಗಿ 100 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಹೊಸ ಕಾರಾಗೃಹ ನಿರ್ಮಾಣಕ್ಕೆ ■6ನೇ ಪುಟಕ್ಕೆ

ಕೋವಿಡ್ ಭ್ರಷ್ಟಾಚಾರ: ನ್ಯಾ.ಕುನ್ಹಾ ವರದಿ ಅಧ್ಯಯನಕ್ಕೆ ಅಧಿಕಾರಿಗಳ ಸಮಿತಿ ರಚನೆ

ಬೆಂಗಳೂರು: ಕೋವಿಡ್ ಸಂದರ್ಭದಲ್ಲಿ ರಾಜ್ಯದಲ್ಲಿ ವೈದ್ಯಕೀಯ ಪರಿಕರಗಳ ಖರೀದಿ, ವಿತರಣೆ ಮತ್ತು ಬಳಕೆ ವಿಷಯಗಳಲ್ಲಿ ನಡೆದಿರುವ ಭ್ರಷ್ಟಾಚಾರ ಕುರಿತು ಸರ್ಕಾರ ನೇಮಿಸಿದ ನ್ಯಾಯಮೂರ್ತಿ ಮೈಕೆಲ್ ಡಿ.ಕುನ್ಹಾ ನೇತೃತ್ವದ ನ್ಯಾಯಾಂಗ ಆಯೋಗ ಒಂದು ವರದಿಯನ್ನು ಸಲ್ಲಿಸಿದ್ದು, ವರದಿಯನ್ನು ವಿಶ್ಲೇಷಿಸಿ ಅಧ್ಯಯನ ಮಾಡಿ ಮುಂದಿನ ಕ್ರಮಗಳ ಬಗ್ಗೆ ಅಗತ್ಯದ ಶಿಫಾರಸ್ಸುಗಳನ್ನು ಮಾಡಲು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶ್ರೀಮತಿ ಶಾಲಿನಿ ರಜನೀಶ್ ಹಾಗೂ ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ ಅತೀಕ್ ಅವರನ್ನೊಳಗೊಂಡ ಉನ್ನತಾಧಿಕಾರಿಗಳ ಸಮಿತಿಯನ್ನು ರಚಿಸಲಾಗಿದೆ ಎಂದು ಕಾನೂನು, ನ್ಯಾಯ ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ ಇಂದಿಲ್ಲಿ ಪ್ರಕಟಿಸಿದರು.


ಎಚ್.ಕೆ.ಪಾಟೀಲ್

ಸಚಿವ ಸಂಪುಟದ ನಿರ್ಣಯಗಳನ್ನು ಮಾಧ್ಯಮ ಪ್ರತಿನಿಧಿಗಳಿಗೆ ವಿವರಿಸಿದ ಅವರು, ಕೋವಿಡ್ ಚಿಕಿತ್ಸೆಯ ಸಂದರ್ಭದಲ್ಲಿ ನೂರಾರು ಕೋಟಿ ರೂಪಾಯಿಗಳ ಭ್ರಷ್ಟಾಚಾರ ನಡೆದಿದೆ ಎಂದು ನ್ಯಾಯಾಂಗ ಆಯೋಗ ವರದಿ ಸಲ್ಲಿಸಿದೆ ಎಂದು ತಿಳಿಸಿದರು.

ತಾವು ಮತ್ತು ರಾಮಲಿಂಗಾ ರೆಡ್ಡಿಯವರು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಕೋವಿಡ್ ಭ್ರಷ್ಟಾಚಾರದ ಕುರಿತು ವಿವರವಾದ ವರದಿಯನ್ನು ವಿಧಾನಮಂಡಲಕ್ಕೆ ಸಲ್ಲಿಸಲಾಗಿತ್ತು. ಆದರೆ ಬಿ.ಜೆ.ಪಿ. ಆಡಳಿತಾವಧಿಯಲ್ಲಿ ಅಂದಿನ ಸಭಾಧ್ಯಕ್ಷರು ವರದಿಯನ್ನು ವಿಧಾನಮಂಡಲದಲ್ಲಿ ಮಂಡಿಸಲಿಲ್ಲ ಎಂದು ■6ನೇ ಪುಟಕ್ಕೆ

ಚಾಮುಂಡೇಶ್ವರಿ ಪ್ರಾಧಿಕಾರದ ಸಭೆ ನ್ಯಾಯಾಂಗ ನಿಂದನೆಯಲ್ಲ

ಬೆಂಗಳೂರು: ಚಾಮುಂಡೇಶ್ವರಿ ಪ್ರಾಧಿಕಾರದ ಸಭೆ ನಡೆಸಿರುವುದು ನ್ಯಾಯಾಂಗ ನಿಂದನೆಯಲ್ಲ. ಸಭೆ ನಡೆದ ಸಂದರ್ಭದಲ್ಲಿ ಯಾವುದೇ ತಡೆಯಾಜ್ಞೆ ಇರಲಿಲ್ಲವೆಂದು ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವ ಎಚ್.ಕೆ ಪಾಟೀಲ ಮಾಧ್ಯಮ ಪ್ರತಿನಿಧಿಗಳಿಗೆ ಇಂದಿಲ್ಲಿ ತಿಳಿಸಿದರು.

ಶ್ರೀಮತಿ ಪ್ರಮೋದಾದೇವಿ ಒಡೆಯರ್, ತಡೆಯಾಜ್ಞೆ ಇದ್ದರೂ ಪ್ರಾಧಿಕಾರದ ಸಭೆ ನಡೆಸುವ ಮೂಲಕ ನ್ಯಾಯಾಂಗ ನಿಂದನೆ ಮಾಡಿರುವ ಆರೋಪ ಸರಿಯಲ್ಲ. ಇಂದು ಈ ರಿಟ್ ಅರ್ಜಿ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ವಿಚಾರಣೆಗೆ ಬಂದಾಗ ಸಭೆ ನಡೆದ ದಿನಾಂಕದಂದು ಯಾವುದೇ ತಡೆಯಾಜ್ಞೆ ಇರಲಿಲ್ಲವೆಂದು ನ್ಯಾಯಮೂರ್ತಿಗಳು ■6ನೇ ಪುಟಕ್ಕೆ

ಶ್ರೀ ಚಾಮುಂಡೇಶ್ವರಿ ದೇವಾಲಯದ ಚರ, ಸ್ಥಿರಾಸ್ತಿಗಳಲ್ಲಿ ಯಾವ ಬದಲಾವಣೆ ಮಾಡದಿರಿ



ಬೆಂಗಳೂರು, ಸೆ.5– ಮೈಸೂರಿನ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಸಂಬಂಧಿಸಿದ ಚರ ಮತ್ತು ಸ್ಥಿರ ಆಸ್ತಿಗಳನ್ನು ಸದ್ಯ ಯಾವುದೇ ರೀತಿಯಲ್ಲಿ ಬದಲಾವಣೆ ಮಾಡಬಾರದು ಎಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ. ಮೈಸೂರಿನ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚನೆ ಸಿಂಧುತ್ವ ಪ್ರಶ್ನಿಸಿ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಸಲ್ಲಿಸಿರುವ ತಕರಾರು ■6ನೇ ಪುಟಕ್ಕೆ

ಮುಡಾ ಮಾಜಿ ಆಯುಕ್ತ ದಿನೇಶ್‌ಕುಮಾರ್ ಮತ್ತೊಂದು ಮ್ಯಾಜಿಕ್

ಸುಳ್ಳು ದಾಖಲೆ ಸೃಷ್ಟಿಸಿ ಯಾರದೋ ಭೂಮಿಗೆ

50:50 ಅನುಪಾತದಡಿ ಯಾರಿಗೋ 8 ನಿವೇಶನ

● ಒಂದೆಡೆ ಸಂಬಂಧಿಯಿಂದ ವಂಚನೆಗೀಡಾದ ವೃದ್ಧ ದಂಪತಿಗೆ ಮುಡಾ ಆಘಾತ ● ಮೈಸೂರು ಹೊರ ವಲಯದ ಬಸವನಹಳ್ಳಿಯಲ್ಲಿ 5.14 ಎಕರೆ ಜಮೀನು ಹೊಂದಿದ್ದ ದಂಪತಿ ● ವಿದೇಶಕ್ಕೆ ತೆರಳಿ ಅಲ್ಲಿ ನೆಲೆಸಿದ್ದ ವೇಳೆ ಸಂಬಂಧಿಯಿಂದ ನಕಲಿ ದಾಖಲೆ ಸೃಷ್ಟಿಸಿ ವಂಚನೆ ● ಇದರ ಬೆನ್ನ ಹಿಂದೆಯೇ ಮುಡಾದಿಂದಲೂ ಈ ಜಮೀನಿನ ನಕಲಿ ದಾಖಲೆ ಸೃಷ್ಟಿಸಿ ಅನ್ಯರಿಗೆ 8 ನಿವೇಶನ ಮಂಜೂರು ● ರಾಜ್ಯಪಾಲರು, ಡಿಸಿ, ಆಯುಕ್ತರಿಗೆ ದೂರು

ಮೈಸೂರು, ಸೆ.5(ಆರ್‌ಕೆ)–ವಿದೇಶದಲ್ಲಿ ನೆಲೆಸಿದ್ದ ವೃದ್ಧ ದಂಪತಿಯ ಜಮೀನನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಭೂ ಸ್ವಾಧೀನಪಡಿಸಿಕೊಂಡಾಗ ಈ ದಂಪತಿಯ ಸಂಬಂಧಿಕನೇ ನಕಲಿ ದಾಖಲೆ ಸೃಷ್ಟಿಸಿ ಮುಡಾದಿಂದ ಪರಿಹಾರದ ಹಣ ಪಡೆದಿದ್ದರೆ, ಮುಡಾ ಆಯುಕ್ತರಾಗಿದ್ದ ದಿನೇಶ್‌ಕುಮಾರ್ ಪರಿಹಾರ ನೀಡಿ ಭೂ ಸ್ವಾಧೀನವಾಗಿದ್ದ ಅದೇ ಜಮೀನಿಗೆ ಇತ್ತೀಚೆಗೆ 50:50 ಅನುಪಾತದಡಿ ಸಂಬಂಧವೇ ಇಲ್ಲದ 8 ಮಂದಿಗೆ ನಿವೇಶನ ಮಂಜೂರು ಮಾಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ವಿದೇಶದಿಂದ ಹಿಂತಿರುಗಿರುವ ಉಡುಪಿ ಮೂಲದ ವೃದ್ಧ ದಂಪತಿ ಸುಬ್ರಹ್ಮಣ್ಯ ಹಾಗೂ ದೇವಕಿ ಅವರು ತಮ್ಮ ಸಂಬಂಧಿಕರಾದ ಮಂಜು ನಾಥ್ ಮತ್ತು ವಿಕ್ಕಿ ಎಂಬುವರೊಡಗೂಡಿ ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿ ಗೋಷ್ಠಿ ನಡೆಸಿ ತಾವು ವಂಚನೆಗೊಳಗಾಗಿರುವುದನ್ನು ವಿವರಿಸಿದರಲ್ಲದೇ, ಮುಡಾ ಹಿಂದಿನ ಆಯುಕ್ತ, ಇತ್ತೀಚೆಗೆ ಅಮಾನತುಗೊಂಡಿರುವ ಜಿ.ಟಿ. ದಿನೇಶ್‌ಕುಮಾರ್ ವಿರುದ್ಧ ಮೈಸೂರು ನಗರ ಪೊಲೀಸ್ ಆಯುಕ್ತರು, ಜಿಲ್ಲಾಧಿಕಾರಿಗಳು ಹಾಗೂ ರಾಜ್ಯಪಾಲರಿಗೆ ದೂರು ಸಲ್ಲಿಸಿರುವುದಾಗಿ ತಿಳಿಸಿದರು.


ದಿನೇಶ್‌ಕುಮಾರ್

ವಿವರ: ವಿದೇಶದಲ್ಲಿದ್ದ ಸುಬ್ರಹ್ಮಣ್ಯ, ದೇವಕಿ ದಂಪತಿ 1986ರಲ್ಲಿ ಮೈಸೂರು ತಾಲೂಕು ಕಸಬಾ ಹೋಬಳಿ ಬಸವನಹಳ್ಳಿ ಗ್ರಾಮದ ಸರ್ವೆ ನಂ.118ರಲ್ಲಿ 5.14 ಎಕರೆ ಜಮೀನನ್ನು ತಮ್ಮ ಸಂಬಂಧಿ (ದೇವಕಿ ಅವರ ಸಹೋದರ) ಪೊನ್ನಪ್ಪ ಅವರ ಮೂಲಕ ಖರೀದಿಸಿದ್ದರು. ಈ ಜಮೀನಿಗೆ ಸಂಬಂಧಿಸಿದಂತೆ ಸುಬ್ರಹ್ಮಣ್ಯ ಹಾಗೂ ದೇವಕಿ ಅವರ ಹೆಸರಿನಲ್ಲಿ ಜಂಟಿ ಖಾತೆಯೂ ಆಗಿತ್ತು.

ಈ ದಂಪತಿ ತಮ್ಮ ಜಮೀನಿನಲ್ಲಿ ಕೃಷಿ ಚಟುವಟಿಕೆ ಹಾಗೂ ಕಟ್ಟಡ ನಿರ್ವಹಣೆಯ ಜವಾಬ್ದಾರಿಯನ್ನು ಪೊನ್ನಪ್ಪ ಅವರಿಗೇ ವಹಿಸಿ ವಿದೇಶಕ್ಕೆ ತೆರಳಿದ್ದರು. ಈ ಮಧ್ಯೆ 1991–92ರಲ್ಲಿ ಮುಡಾ ಈ ಜಮೀನಿನ ಭೂ ಸ್ವಾಧೀನಕ್ಕಾಗಿ 4/1 ಹಾಗೂ 6/1 ಅಧಿಸೂಚನೆಯನ್ನು ಹೊರಡಿಸಿತ್ತು. ಈ ಸಂದರ್ಭದಲ್ಲಿ ಪೊನ್ನಪ್ಪ ಬೆಂಗಳೂರಿನ ಗಾಂಧಿ ನಗರ ಉಪ ನೋಂದಣಾಧಿಕಾರಿಗಳ ಕಚೇರಿಯ ಸೀಲು ಹಾಗೂ ಸಹಿಯುಳ್ಳ ನಕಲಿ ಜಿಪಿಎ ಸೃಷ್ಟಿಸಿಕೊಂಡು, ಮುಡಾ ವಿರುದ್ಧ ನ್ಯಾಯಾಲಯದ ಮೊರೆ ಹೋಗಿ ಜಮೀನಿಗೆ ಪರಿಹಾರವಾಗಿ 8,37,451 ರೂ. ಪಡೆದಿದ್ದಾನೆ ಎಂದು ದಂಪತಿ ಆರೋಪಿಸಿದ್ದಾರೆ.


ಮುಡಾ ಕಚೇರಿ


ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ವೃದ್ಧ ದಂಪತಿಗಳಾದ ದೇವಕಿ (ಎಡದಿಂದ 2ನೆಯವರು) ಸುಬ್ರಹ್ಮಣ್ಯ (ಬಲತುದಿಯಲ್ಲಿರುವವರು) ಸುದ್ದಿಗೋಷ್ಠಿ ನಡೆಸಿದರು.

2013ರಲ್ಲಿ ಭಾರತಕ್ಕೆ ಹಿಂತಿರುಗಿದ 74 ವರ್ಷ ವಯೋಮಿತಿಯ ಸುಬ್ರಹ್ಮಣ್ಯ, 70 ವರ್ಷ ವಯೋಮಿತಿಯ ದೇವಕಿ ದಂಪತಿಗೆ ತಮ್ಮ ಜಮೀನು ಮುಡಾದಿಂದ ಭೂ ಸ್ವಾಧೀನವಾಗಿರುವ ವಿಚಾರವೇ ಗೊತ್ತಿರಲಿಲ್ಲ. ಉಡುಪಿಯಲ್ಲಿ ನೆಲೆಸಿದ್ದ ಅವರು ಪದೇ ಪದೆ ಮೈಸೂರಿಗೆ ಬಂದು ತಮ್ಮ ಜಮೀನನ್ನು ನೋಡಿಕೊಂಡು ಹೋಗುತ್ತಿದ್ದರು ಎಂದು ದಂಪತಿ ತಿಳಿಸಿದರು. ತಮ್ಮ ಜಮೀನು ಮುಡಾದಿಂದ ಭೂ ಸ್ವಾಧೀನವಾಗಿದೆ, ತಾವು ನಂಬಿದ್ದ ಸಂಬಂಧಿಕ ಪೊನ್ನಪ್ಪ ನಕಲಿ ಜಿಪಿಎ ಮೂಲಕ ಮುಡಾದಿಂದ ಪರಿಹಾರ ಪಡೆದಿದ್ದಾನೆ ಎಂಬ ವಿಚಾರ 2017ರಲ್ಲಿ ■6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಗುಂಡ : ರಾತ್ರಿ ಲೇಟಾಗಿ ಹೋಗಿದ್ದಕ್ಕೆ ನನ್ನ ಹೆಂಡತಿ ಬಾಗಿಲು ತೆಯಲಿಲ್ಲ. ರಸ್ತೆಯಲ್ಲೇ ಮಲ್ಕೊಂಡೆ...

ತಿಮ್ಮ : ಮತ್ತೆ ಬೆಳಗಾದ ಮೇಲಾದ್ರೂ ಬಾಗಿಲು ತೆಗೆದ್ಳಾ!

ಗುಂಡ : ಕುಡಿದಿದ್ದು ಇಳಿದಿತ್ತು. ನಂಗೆ ಮದ್ವೇನೇ ಆಗಿಲ್ಲ ಅನ್ನೋದು ಅರಿವಾಯ್ತು. ಕೀ ನನ್ನ ಜೇಬಲ್ಲೇ ಇತ್ತು!

ಮೈಸೂರು ಮಿತ್ರ

ಶುಕ್ರವಾರ, 6 ಸೆಪ್ಟೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಮೂರ್ಖರ ಜತೆ ವಾದಿಸುವುದರಿಂದ ಅವರ ಸಂಖ್ಯೆ ಮತ್ತೊಂದು ಹೆಚ್ಚಾಗುತ್ತದೆ ಅಷ್ಟೆ. ವಾದಿಸಿ ವಿವಾದಕ್ಕೆ ಕಾರಣವಾಗುವ ಬದಲು ವಿವೇಕದಿಂದ ಹಿಂದೆ ಸರಿಯುವುದೇ ಸರಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಭಾಷೆ ತಿಳಿಯದಿದ್ದರೂ ಹಾಸ್ಯಕ್ಕೆ ಕಡಿಮೆಯಿಲ್ಲ.

ನಿಮ್ಮ ಪತ್ರಗಳು

■ ಮೈಸೂರಿನ ಘನತೆ ಕಾಪಾಡೋಣ

ಮಾನ್ಯರೆ,

ನೂರು ವರ್ಷಗಳ ಹಿಂದೆ ದೇಶದಲ್ಲಿಯೇ ಮಾದರಿಯಾಗಿ ರೂಪುಗೊಂಡಿರುವ ಮೈಸೂರು ನಗರವನ್ನು ಯೋಜನಾಬದ್ಧವಾಗಿ ಮುಂದುವರೆಸುವ ಜವಾಬ್ದಾರಿ ನಗರಾಭಿವೃದ್ಧಿ ಪ್ರಾಧಿಕಾರದ್ದು. ಜೊತೆಗೆ ಮಹಾರಾಜರ ಆಶಯದಂತೆ ಬಡವರಿಗೆ, ಸೂರಿಲ್ಲದವರಿಗೆ ಸೂರು ಕಲ್ಪಿಸುವುದು ಮುಡಾದ ಮೊದಲ ಆದ್ಯತೆ ಆಗಬೇಕಿತ್ತು. ಆದರೆ ಸಿಐಟಿಬಿ ಯಾವಾಗ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವಾಗಿ ಬದಲಾಯಿತೋ ಅಲ್ಲಿಂದ ಬಡವರಿಗೆ ಮನೆ ಒದಗಿಸುವ ಬದಲು ಮೈಸೂರಿನ ರಾಜಕಾರಣಿಗಳ ಆಸ್ತಿಗಳನ್ನು ಹೆಚ್ಚು ಮಾಡುವ ಕೇಂದ್ರವಾಯಿತು. ಸಾವಿರಾರು ಬಡವರ ಸ್ವಂತ ಸೂರಿನ ಕನಸು ನನಸಾಗಿಸಿದ್ದ ಮುಡಾ ಕ್ರಮೇಣ ತನ್ನ ಘನತೆ ವಿಶ್ವಾಸಾರ್ಹತೆ ಎರಡನ್ನೂ ಕಳೆದುಕೊಳ್ಳುತ್ತ ಸಾಗಿತು.

ಸರ್ಕಾರವನ್ನು ಅಲುಗಾಡಿಸಲು ಆ ವಿಪಕ್ಷದರು ಮುಡಾ ಪ್ರಕರಣವನ್ನು ಇಂದು ಅಸ್ತ್ರವಾಗಿ ಬಳಕೆ ಮಾಡಿ ಕೊಳ್ಳುತ್ತಿದ್ದಾರೆ. ಸೂರು, ನೆಮ್ಮದಿ, ಅಭಿವೃದ್ಧಿ ನೀಡಬೇಕಾಗಿದ್ದ ಮುಡಾ ಹೀಗಾಗುವುದಕ್ಕೆ ಕೇವಲ ಒಂದು ಪಕ್ಷವೋ ಒಬ್ಬ ರಾಜಕಾರಣಿಯೋ ಕಾರಣವಲ್ಲ. ಆಯಾ ಕಾಲಕ್ಕೆ ಬಂದ ವಿವಿಧ ಪಕ್ಷಗಳ ಜನಪ್ರತಿನಿಧಿಗಳೂ, ಅಧಿಕಾರಿಗಳೂ ಇದಕ್ಕೆ ಬದ್ಧರಾಗಿಯೇ ನಡೆದುಕೊಂಡಿದ್ದರೆ ಇಂದು ಮುಡಾ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಒಂದು ವಿವಾದದ ಕೇಂದ್ರವಾಗಿರಬೇಕಾಗಿರಲಿಲ್ಲ. ರಾಜಪರಂಪರೆಯ ದಸರಾ ವೈಭವದ ಹೊರತಾಗಿ ಮೈಸೂರನ್ನು ಒಂದು ಅಭಿವೃದ್ಧಿ ಹೊಂದಿದ ನಗರವಾಗಿ ಸಲು ರಾಜಕಾರಣ ಎಷ್ಟು ಇಚ್ಛಾಶಕ್ತಿ ಪ್ರದರ್ಶಿಸಿದೆ? ಎಲ್ಲಾ ಪಕ್ಷಗಳ ಹೇಳಿಕೆಗಳಿಗೆ, ಸಮಾವೇಶಗಳಿಗೆ ಮೈಸೂರು ಒಂದು ಕೇಂದ್ರದಂತೆ ಬಳಕೆಯಾಗುತ್ತದೆ. ಆದರೆ ಈ ನಗರ ಮತ್ತು ಸುತ್ತಲ ಗ್ರಾಮಗಳಲ್ಲಿ ಉದ್ಯೋಗ ಸೃಷ್ಟಿ, ನಗರಾಭಿವೃದ್ಧಿ, ಬಡಜನರ ಬದುಕಿನ ಸ್ಥಿತಿಯನ್ನು ಇನ್ನಷ್ಟು ಮೇಲೆತ್ತುವ ಕುರಿತು ಎಷ್ಟು ಹೆಜ್ಜೆಗಳನ್ನು ಇಡಲಾಗಿದೆ? ಇವತ್ತು ಇಡೀ ಮೈಸೂರಿನಲ್ಲಿ ಕೆಲವು ಮುಖ್ಯ ಬಡಾವಣೆಗಳಲ್ಲಿ ಕೇವಲ ವಯಸ್ಸಾದವರಿದ್ದಾರೆ. ಬೆಂಗಳೂರು ಮತ್ತು ವಿದೇಶಗಳಿಗೆ ಮುಖ ಮಾಡಿರುವ ಯುವಕ ಯುವತಿಯರನ್ನು ಇಲ್ಲಿಯೇ ಉಳಿಸಿಕೊಳ್ಳುವ ಕೆಲಸ ಪಕ್ಷಾತೀತವಾಗಿ ಆಗಬೇಕಿದೆ. ರಾಜಕಾರಣದಲ್ಲಿ ಆರೋಪ ಪ್ರತ್ಯಾರೋಪಗಳು ಸಾಮಾನ್ಯ.

ಆದರೆ ಅದಕ್ಕಾಗಿ ಒಂದು ಊರಿನ ಸುಂದರ ಪರಂಪರೆಯನ್ನು, ಅದರ ಇತಿಹಾಸವನ್ನು ಕಡೆಗಣಿಸಬಾರದು. ಆರೋಪ ಪ್ರತ್ಯಾರೋಪಗಳು ಬಂದು ಹೋಗುತ್ತದೆ. ಆದರೆ ಊರಿನ ಕಳಂಕ ಕಪ್ಪು ಚುಕ್ಕೆಯಾಗಿ ಉಳಿದುಬಿಡುತ್ತದೆ. ಹಾಗಾಗಿ, ಈ ನೆಲವನ್ನು ರಾಜಕಾರಣದ ಜಿದ್ದಾಜಿದ್ದಿನ ಕೇಂದ್ರವಾಗಿಸಿಕೊಳ್ಳದೇ ನಾಲ್ವಡಿ ಅವರ ಕನಸಿನ ಮೈಸೂರನ್ನು ಪಕ್ಷಭೇದವಿಲ್ಲದೇ ಎಲ್ಲರೂ ಸೇರಿ ಕಟ್ಟಬೇಕಾಗಿದೆ. ಈ ಪ್ರಕರಣವನ್ನು ಎಲ್ಲರೂ ಒಂದು ಪಾಠದಂತೆ ಪರಿಗಣಿಸಿ, ಮೈಸೂರು ಇನ್ನು ಮುಂದೆ ಇಂತಹ ಕಾರಣಗಳಿಗೆ ಸುದ್ದಿಯಾಗದಂತೆಯೂ ತನ್ನ ಜನಪ್ರಿಯ, ಜನಪರ, ಪರಿಸರ ಪರ ಯೋಜನೆಗಳಿಗಾಗಿ ಮೈಸೂರು ಸುದ್ದಿಯಾಗುವಂತೆ ನೋಡಿಕೊಳ್ಳಬೇಕಾಗಿದೆ.

ಇಲ್ಲದಿದ್ದರೆ ಯಾರೋ ಎಲ್ಲೋ ಕೂತು ಮೈಸೂರು ಅಂತ ಗೂಗಲ್ ಮಾಡಿದರೆ ಇಷ್ಟೂ ವರ್ಷಗಳ ಮೈಸೂರಿನ ಭವ್ಯ ಪರಂಪರೆ ಇತಿಹಾಸ ಮರೆಗೆ ಸರಿದು ಯಾವುದೋ ಪ್ರಕರಣವೇ ಕಾಣಿಸಿಕೊಂಡರೆ ಅದು ಊರಿಗೆ ಶೋಭೆಯಲ್ಲ. ರಾಜಕಾರಣ, ದ್ವೇಷ, ಕೋಪ, ಅಧಿಕಾರ ಎಲ್ಲವೂ ಇಂದಿದ್ದು ನಾಳೆ ಹೋಗುವುದು. ಆದರೆ ಊರು ಮತ್ತು ಅದರ ಘನತೆ ತಲೆಮಾರುಗಳಿಗೂ ಉಳಿಯುವಂತದು. ಪಕ್ಷಾತೀತವಾಗಿ ಎಲ್ಲರೂ ಮೈಸೂರಿನ ಘನತೆ ಕಾಪಾಡೋಣ.

– ಕೆ.ವಿ. ಮಲ್ಲೇಶ್, ನಗರ ಪಾಲಿಕೆ ಮಾಜಿ ಸದಸ್ಯರು,

■ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವೈದ್ಯರನ್ನು ನೇಮಿಸಿ

ಮಾನ್ಯರೆ,

ಹೆಚ್.ಡಿ.ಕೋಟೆ ತಾಲೂಕಿನ ಮೈಸೂರು ಮಾನಂದವಾಡಿ ರಾಜ್ಯ ಹೆದ್ದಾರಿಯಲ್ಲಿ ಬರುವ ಕೆ.ಜಿ.ಹಳ್ಳಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವಿರುವುದು ಬರಿ ಹೆಸರಿಗೆ ಮಾತ್ರ. ಸುಮಾರು 20 ವರ್ಷಗಳ ಹಿಂದೆ ನಿರ್ಮಾಣವಾದ ಈ ಆಸ್ಪತ್ರೆ ಇತ್ತೀಚೆಗೆ ಲಕ್ಷಾಂತರ ರೂಪಾಯಿ ವ್ಯಯಿಸಿ ನವೀಕರಣವು ಸಹಾ ಆಗಿದೆ. ಆದರೆ ಕಳೆದ 5 ವರ್ಷಗಳಿಂದ ಇಲ್ಲಿ ಯಾವುದೇ ವೈದ್ಯರು ಅಥವಾ ಸಹಾಯಕರು ಇಲ್ಲ. ಹಲವು ಬಾರಿ ತಾಲೂಕು ಆಡಳಿತಕ್ಕೆ ಮನವಿ ಮಾಡಿದರೂ ಸಹಾ ಯಾವುದೇ ರೀತಿಯ ಪ್ರಯೋಜನವಾಗಿಲ್ಲ. ಸುಮಾರು 4 ಸಾವಿರ ಜನಸಂಖ್ಯೆಯನ್ನು ಹೊಂದಿರುವ ಗ್ರಾಮದಲ್ಲಿ ಚಿಕಿತ್ಸೆಗಾಗಿ ಪ್ರತಿನಿತ್ಯ ವೃದ್ಧರು, ಮಕ್ಕಳು ಮತ್ತು ಗರ್ಭಿಣಿಯರು ತಾಲೂಕು ಆಸ್ಪತ್ರೆಗೆ ಅಲೆಯಬೇಕಾಗಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಈ ಆರೋಗ್ಯ ಕೇಂದ್ರಕ್ಕೆ ವೈದ್ಯರನ್ನು ಅಥವಾ ಆರೋಗ್ಯ ಸಹಾಯಕರನ್ನು ನೇಮಿಸಿ ಅನುಕೂಲ ಮಾಡಿಕೊಡಬೇಕೆಂದು ಮನವಿ.

–ಕೆ.ಎಸ್.ಸುರೇಶ್, ಮುಖ್ಯ ಶಿಕ್ಷಕರು, ಕೆ.ಜಿ.ಹಳ್ಳಿ,

■ ಕನ್ನಡದಲ್ಲಿ ಪರೀಕ್ಷೆ ಬರೆದಿರುವವರಿಗೆ ನ್ಯಾಯ ಒದಗಿಸಿ

ಮಾನ್ಯರೆ,

ಕಳೆದ ಮಂಗಳವಾರ ಕೆಪಿಸಿಸಿ ನಡೆಸಿದ 384 ಪ್ರೊಬೇಷನರಿ ಗೆಜೆಟೆಡ್ ಅಧಿಕಾರಿಗಳ ಪೂರ್ವಭಾವಿ ಪರೀಕ್ಷೆಯಲ್ಲಿ ಸುಮಾರು 2 ಲಕ್ಷ ಮಂದಿ ಉದ್ಯೋಗಾಕಾಂಕ್ಷಿಗಳಲ್ಲಿ ಅರ್ಧಕ್ಕೂ ಹೆಚ್ಚು ಮಂದಿ ಕನ್ನಡದಲ್ಲಿ ಪರೀಕ್ಷೆ ಬರೆದಿರುವುದಾಗಿ ತಿಳಿದಿದೆ.

ಈ ಪೂರ್ವಭಾವಿ ಪರೀಕ್ಷೆಯ ಕನ್ನಡ ಭಾಷೆಯ ಪ್ರಶ್ನೆ ಪತ್ರಿಕೆಯ ಸುಮಾರು 10 ಪ್ರಶ್ನೆಗಳು ತಪ್ಪಾಗಿ ಮುದ್ರಿತವಾಗಿವೆ ಎಂದು ಕನ್ನಡದಲ್ಲಿ ಬರೆದ ಪರೀಕ್ಷಾರ್ಥಿಗಳು ಹೇಳುತ್ತಾರೆ.

ಇದು ಇಂಗ್ಲಿಷ್ ಪ್ರಶ್ನೆ ಪತ್ರಿಕೆಯನ್ನು ಕನ್ನಡಕ್ಕೆ ಭಾಷಾಂತರ ಮಾಡುವಾಗ ಆಗಿರುವ ದೋಷ ಎಂದು ಆಯೋಗವೇ ಹೇಳಿದೆ. ಹಾಗಾದರೆ ಇಂಗ್ಲಿಷನ್ನು ಕನ್ನಡಕ್ಕೆ ಭಾಷಾಂತರ ಮಾಡಲು ನಮ್ಮಲ್ಲಿ ಪರಿಣತರ ಕೊರತೆ ಇದೆಯಾ ? ಈಗಾದರೆ, ಕನ್ನಡದಲ್ಲಿ ಪರೀಕ್ಷೆ ಬರೆಯಬಾರದೆ?

ಕನ್ನಡದಲ್ಲಿ ಪರೀಕ್ಷೆ ಬರೆದ ಅಭ್ಯರ್ಥಿಗಳ ಭವಿಷ್ಯವೇನು? ಕನ್ನಡದಲ್ಲಿ ಪರೀಕ್ಷೆ ಬರೆಯಬಾರದು ಎಂಬ ಉದ್ದೇಶ ಆಯೋಗಕ್ಕೆ ಇರಬಹುದು. ಕನ್ನಡಿಗರು ಉನ್ನತ ಹುದ್ದೆಗಳನ್ನು ಪಡೆಯಬಾರದು ಎಂಬ ಉದ್ದೇಶ ಆಯೋಗಕ್ಕೆ ಇರಬಹುದು ಎನಿಸುತ್ತದೆ. 40 ಭಾಷಾಂತರ ಹುದ್ದೆಗಳಲ್ಲಿ ಕೇವಲ 21 ಜನರು ಮಾತ್ರ ಇದ್ದಾರೆ ಎಂದು ಆಯೋಗ ಸ್ಪಷ್ಟಪಡಿಸಿದೆ. ಈ ಹುದ್ದೆಗಳನ್ನು ಭರ್ತಿ ಮಾಡುವ ಜವಾಬ್ದಾರಿ ಸರಕಾರದಲ್ಲವೆ? ತಪ್ಪು ಭಾಷಾಂತರ ಮಾಡಿದವರ ಮೇಲೂ ಸರ್ಕಾರ ಕ್ರಮ ಕೈಗೊಳ್ಳಬೇಕು. ಕನ್ನಡದಲ್ಲಿ ಪರೀಕ್ಷೆ ಬರೆದಿರುವವರಿಗೂ ಸರ್ಕಾರ ನ್ಯಾಯ ಒದಗಿಸಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಧನಾತ್ಮಕ ಚಿಂತನೆಯೇ ಜೀವನ ವಿಧಾನವಾಗಲಿ...

ನಮ್ಮ ಪ್ರಕೃತಿ, ನಮ್ಮ ಸಮಾಜವೆಲ್ಲವೂ ನಮಗೆ ವಿವಿಧ ರೀತಿಯ ಸಂದೇಶಗಳನ್ನು ನೀಡುತ್ತವೆ. ಆದರೆ ಅವು ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಅರ್ಥ ನೀಡುತ್ತದೆ. ಹುಲ್ಲನ್ನು ಕೆಲವರು ಲಘುವಾಗಿ ಕಾಣುತ್ತಾರೆ. ಹುಲ್ಲು ಒಂದು ರೀತಿ ಕಸಕ್ಕೆ ಸಮಾನ, ಅದರಿಂದ ಯಾವ ಉಪಯೋಗವೂ ಇಲ್ಲ ಎಂಬುದು ಅವರ ಅನಿಸಿಕೆ. ಆದರೆ ಧನಾತ್ಮಕವಾಗಿ ಯೋಚನೆ ಮಾಡುವವರು ಹುಲ್ಲನ್ನೂ ಪ್ರೀತಿಸುತ್ತಾರೆ. ಹುಲ್ಲು ನಮಗೆ ಜೀವನದ ಸಂದೇಶ ನೀಡುತ್ತದೆ ಎನ್ನುತ್ತಾರೆ. ಹುಲ್ಲು ಬೇಸಿಗೆ ಬಂದಾಗ ಬಾಡಿ, ಸರ್ವನಾಶವಾಯಿತು ಎಂಬಂತೆ ಕಂಡುಬರುತ್ತದೆ. ಆದರೆ ಒಂದು ಮಳೆ ಬಂದರೆ ಒಂದೆರಡೇ ದಿನದಲ್ಲಿ ಚಿಗುರುತ್ತದೆ. ಮತ್ತಷ್ಟು ಮಳೆ ಬಂದರೆ ಇನ್ನಷ್ಟು ಹುಲುಸಾಗಿ ಬೆಳೆಯುತ್ತದೆ. ಪ್ರಕೃತಿಗೆ ಶೋಭೆ ತರುವುದೇ ಹುಲ್ಲು ಎಂದು ಅವರ ಭಾವಿಸುತ್ತಾರೆ. ನಾವೂ ಹಾಗೇ ಕಷ್ಟ ಬಂದಾಗ ಕುಗ್ಗದೆ ತಾಳ್ಮೆಯಿಂದ ಕಾದರೆ ಮುಂದೆ ಉತ್ತಮ ಜೀವನ ಸಾಧ್ಯವಾಗುತ್ತದೆ ಎಂಬುದಕ್ಕೆ ಅವರು ಹುಲ್ಲಿನ ಉದಾಹರಣೆ ನೀಡುತ್ತಾರೆ. ಇದು ನಾವು ಯೋಚನೆ ಮಾಡುವ ರೀತಿಗೆ ಸಂಬಂಧಿಸಿದ್ದು. ನಾವು ಹೇಗೆ ಕಾಣುತ್ತೇವೆಯೋ ಹಾಗೆ ಕೆಲವು ಸಂಗತಿಗಳು ನಮಗೆ ಕಂಡುಬರುತ್ತವೆ.

ನಮ್ಮ ಜೀವನ ಎಂದಾಗ ಏಳುಬೀಳುಗಳು ಇದ್ದೇ ಇರುತ್ತವೆ. ನಮ್ಮ ತಪ್ಪಿನ ಕಾರಣವೋ ಅಥವಾ ಇನ್ಯಾವುದೋ ಕಾರಣದಿಂದ ನಾವು ಮಾಡುತ್ತಿದ್ದ ವ್ಯಾಪಾರ, ವ್ಯವಹಾರಗಳಲ್ಲಿ ನಷ್ಟ ಉಂಟಾಗುತ್ತದೆ. ಅದಕ್ಕೆ ಪರಿಹಾರದ ದಾರಿ ತೋರದಿರುವಾಗ ಜೀವನವೇ ಬೇಡ ಎನಿಸಿ ಆತ್ಮಹತ್ಯೆಯ ಕಡೆಗೆ ಮನಸ್ಸು ವಾಲುತ್ತದೆ. ಆದರೆ ನಾವು ಇಂತಹ ವಿಷಯವನ್ನು ನಮ್ಮ ಕುಟುಂಬದವರೊಡನೆ, ಆತ್ಮೀಯರೊಡನೆ ಹಾಗೂ ಸ್ನೇಹಿತರೊಡನೆ ಹಂಚಿಕೊಂಡರೆ ಖಂಡಿತವಾಗಿ ಒಂದಲ್ಲಾ ಒಂದು ಪರಿಹಾರ ದೊರಕುತ್ತದೆ. ಆದರೆ ಹಾಗೆ ಯೋಚನೆ ಮಾಡದೇ ನನ್ನ ತಪ್ಪಿಗೆ ನನ್ನ ಸಾವೇ ಉತ್ತರ ಎಂಬಂತೆ ಆತ್ಮಹತ್ಯೆಯೆಡೆಗೆ ಕೆಲವರು ಯೋಚಿಸುತ್ತಾರೆ.

ನನ್ನ ಸೇವಾ ಅವಧಿಯಲ್ಲಿ ಇಂತಹ ದುಡುಕು ನಿರ್ಧಾರದಿಂದ ಹಲವು ರೈತರು ಆತ್ಮಹತ್ಯೆಗೀಡಾಗಿದ್ದನ್ನು ಗಮನಿಸಿದ್ದೇನೆ. ಅವರ ಅಂತ್ಯಸಂಸ್ಕಾರಕ್ಕೆ ಸೇರಿದ್ದ ಜನರಲ್ಲಿ ಬಹುತೇಕರು ಹೇಳುತ್ತಿದ್ದ ಮಾತು ಇದೇ ಆಗಿತ್ತು. ಅವನು ತನ್ನ ಸಮಸ್ಯೆಯ ಬಗ್ಗೆ ನಮ್ಮೊಡನೆ ಏನನ್ನೂ ಹಂಚಿಕೊಳ್ಳಲಿಲ್ಲ. ಹೇಳಿದ್ದರೆ ನಾವು ಖಂಡಿತಾ ಸಮಸ್ಯೆಗೆ ಪರಿಹಾರ ಹೇಳುತ್ತಿದ್ದೆವು. ಆತ ಮಾಡಿದ್ದ ಸಾಲ ಅಂತಹ ದೊಡ್ಡ ಮೊತ್ತದ್ದೇನಲ್ಲಾ, ಆ ಸಾಲವನ್ನು ನಾವೆಲ್ಲಾ ಸೇರಿ ತೀರಿಸುತ್ತಿದ್ದೆವು. ದುಡುಕಿನ ನಿರ್ಧಾರ ಮಾಡಿಕೊಂಡ ಎಂದು ಅವರು ಹೇಳುತ್ತಿದ್ದರು. ಇದು ನಿಜ. ಕೇವಲ ಒಂದೆರಡು ಲಕ್ಷ ಸಾಲ ಮಾಡಿ ಅದನ್ನು ತೀರಿಸಲಾಗದ ನೋವಿನಲ್ಲಿ ಹಾಗೂ ಸಾಲ ಕೊಟ್ಟವರು ಮನೆಯ ಬಳಿ ಬಂದು ಗಲಾಟೆ ಮಾಡಿದರೆ ನನ್ನ ಹಾಗೂ ನನ್ನ ಕುಟುಂಬದ ಮರ್ಯಾದೆ ಹೋಗುತ್ತದೆ ಎಂದು ಭಾವಿಸಿ ಹಲವು ಜನರು ಆತ್ಮಹತ್ಯೆ ಮಾಡಿಕೊಂಡಿದ್ದನ್ನು ಗಮನಿಸಬಹುದು. ಸಾಲ ಮಾಡುವುದು ಒಂದು ಸಹಜ ಪ್ರಕ್ರಿಯೆ, ಆದರೆ ಎಷ್ಟು ಸಾಲ ಮಾಡಬೇಕು ಎಂಬುದು ವಿವೇಚನೆ. ಸಾಲ ಮಾಡಿ ಉದ್ಧಾರ ಆಗಬೇಕೇ ವಿನಃ ಸಾಲ ಮಾಡಿ ಜೀವನ ಹಾಳುಮಾಡಿಕೊಳ್ಳುವಂತೆ ಆಗಬಾರದು. ಸಾಲ ಮಾಡುವಾಗ ಅದನ್ನು ತೀರಿಸುವ ಮಾರ್ಗದ ಬಗ್ಗೆಯೂ ಯೋಜಿಸಬೇಕು... ಯೋಚಿಸಬೇಕು. ತನ್ನ ಜಮೀನು ನಿರ್ವಹಣೆ, ವ್ಯಾಪಾರ ವ್ಯವಹಾರಕ್ಕೆ ಸಾಲ ಪಡೆಯಬೇಕು ನಿಜ. ಆದರೆ ಪಡೆದ ಸಾಲವನ್ನು ಪಡೆದ ಉದ್ದೇಶಕ್ಕೆ ಬಳಸಿಕೊಳ್ಳದಿದ್ದರೆ ಇಂತಹ ಪರಿಸ್ಥಿತಿ ಬರುತ್ತದೆ. ಜೀವನವನ್ನು ಧನಾತ್ಮಕವಾಗಿ ಪರಿಗಣಿಸಬೇಕು. ಅಗತ್ಯ ಉದ್ದೇಶ ಹಾಗೂ ತನ್ನ ಸಾಮರ್ಥ್ಯದ ಅರಿವಿದ್ದು ಸಾಲ ಮಾಡಬೇಕು. ಆದರೆ ಆತ್ಮಹತ್ಯೆ ಖಂಡಿತಾ ಪರಿಹಾರವಲ್ಲ. ಇಂತಹ ರೈತರು ಆತ್ಮಹತ್ಯೆಗೆ ಶರಣಾದ ನಂತರ ಅವರ ಕುಟುಂಬ ಬೀದಿಗೆ ಬಂದು ನಿಲ್ಲಬೇಕಾಗುತ್ತದೆ. ನಾಥನಿಲ್ಲದೆ ಅನಾಥವಾಗಬೇಕಾಗುತ್ತದೆ.

ಸಿಗಬಹುದಾದ ಸಾಲವನ್ನು ಪಡೆದು, ತಮ್ಮ ವ್ಯಾಪಾರ ವಹಿವಾಟುಗಳನ್ನು ಅಭಿವೃದ್ಧಿಪಡಿಸಿ, ಸಾಲ ತೀರಿಸಿ, ಕೊನೆಗೆ ತಾವೇ ಸಾಲ ಕೊಡುವ ಸ್ಥಿತಿಗೆ ಬಂದ ಹಲವರ ಉದಾಹರಣೆ ನಮ್ಮ ಮುಂದಿದೆ. ಹತಾಶರಾದವರಿಗೆ ಇಂತಹವರು ಆದರ್ಶವಾಗಬೇಕು.

ಇನ್ನು ಪರೀಕ್ಷೆಗಳಲ್ಲಿ ನಪಾಸಾಗುವ ವಿದ್ಯಾರ್ಥಿಯ ಮನೋಭಾವ ಧನಾತ್ಮಕವಾಗಿದ್ದರೆ ಆತ ಮತ್ತೊಮ್ಮೆ ಪರೀಕ್ಷೆ ಎದುರಿಸಿ ಯಶಸ್ವಿಯಾಗುತ್ತಾನೆ. ಯಾವಾಗಲೂ ಸೋಲು ನಮಗೆ ಗೆಲುವಿನ ಹಾದಿಯನ್ನು ತೆರೆದಿಡುತ್ತದೆ. ಆ ಹಾದಿಯನ್ನು ಗುರುತಿಸಬೇಕು. ಸೋಲು ಜೀವನದ ಅಂತ್ಯವಾಗಬಾರದು. ಅದು ಅನೇಕ ವೇಳೆ ಜೀವನದ ಆರಂಭವೂ ಆಗಬಹುದು. ಹಾಗಾಗಬೇಕಾದರೆ ನಾವು ಧನಾತ್ಮಕವಾಗಿ ಯೋಚಿಸುವುದನ್ನು ಕಲಿಯಬೇಕು.



"ಸಿಗಬಹುದಾದ ಸಾಲವನ್ನು ಪಡೆದು, ತಮ್ಮ ವ್ಯಾಪಾರ ವಹಿವಾಟುಗಳನ್ನು ಅಭಿವೃದ್ಧಿಪಡಿಸಿ, ಸಾಲ ತೀರಿಸಿ, ಕೊನೆಗೆ ತಾವೇ ಸಾಲ ಕೊಡುವ ಸ್ಥಿತಿಗೆ ಬಂದ ಹಲವರ ಉದಾಹರಣೆ ನಮ್ಮ ಮುಂದಿದೆ. ಹತಾಶರಾದವರಿಗೆ ಇಂತಹವರು ಆದರ್ಶವಾಗಬೇಕು.

ಇನ್ನು ಪರೀಕ್ಷೆಗಳಲ್ಲಿ ನಪಾಸಾಗುವ ವಿದ್ಯಾರ್ಥಿಯ ಮನೋಭಾವ ಧನಾತ್ಮಕವಾಗಿದ್ದರೆ ಆತ ಮತ್ತೊಮ್ಮೆ ಪರೀಕ್ಷೆ ಎದುರಿಸಿ ಯಶಸ್ವಿಯಾಗುತ್ತಾನೆ. ಯಾವಾಗಲೂ ಸೋಲು ನಮಗೆ ಗೆಲುವಿನ ಹಾದಿಯನ್ನು ತೆರೆದಿಡುತ್ತದೆ. ಆ ಹಾದಿಯನ್ನು ಗುರುತಿಸಬೇಕು. ಸೋಲು ಜೀವನದ ಅಂತ್ಯವಾಗಬಾರದು. ಅದು ಅನೇಕ ವೇಳೆ ಜೀವನದ ಆರಂಭವೂ ಆಗಬಹುದು. ಹಾಗಾಗಬೇಕಾದರೆ ನಾವು ಧನಾತ್ಮಕವಾಗಿ ಯೋಚಿಸುವುದನ್ನು ಕಲಿಯಬೇಕು.

ನಾವು ನಮ್ಮ ಜೀವನವನ್ನು ಹೀಗೆ ಧನಾತ್ಮಕವಾಗಿ ನೋಡಿದಾಗ ನಮ್ಮಲ್ಲಿನ ಹಲವು ಸಮಸ್ಯೆಗಳಿಗೆ ಪರಿಹಾರ ದೊರಕುತ್ತದೆ. ನಾನು ಕ್ಷೇಮವಾಗಿದ್ದೇನೆ, ನೆಮ್ಮದಿಯಾಗಿದ್ದೇನೆ, ಖುಷಿಯಾಗಿದ್ದೇನೆ ಎಂಬ ಮನೋಭಾವ ಧನಾತ್ಮಕತೆಯನ್ನು ತೋರುತ್ತದೆ. ಈ ಹಿಂದೆ ನಮಗೆ ಸ್ಫೂರ್ತಿದಾಯಕವಾದ ಒಂದು ವಾಕ್ಯ ಆಂಗ್ಲ ಭಾಷೆಯಲ್ಲಿ ಕೇಳಿ ಬರುತ್ತಿತ್ತು. ಅದೆಂದರೆ 'All Is well' ಎಂಬುದು. ಇದರಲ್ಲಿ ನಾನೂ ಚೆನ್ನಾಗಿದ್ದೇನೆ, ಎಲ್ಲರೂ ಚೆನ್ನಾಗಿದ್ದಾರೆ ಎಂಬ ಭಾವ. (ಇದು ಸಾಮಾನ್ಯವಾಗಿ ಜೈಲುಗಳಲ್ಲಿ ರಾತ್ರಿ ಪಹರೆಯಲ್ಲಿರುವವರು ಎಲ್ಲ ಕೈದಿಗಳೂ ಕ್ಷೇಮ ಎಂದು ಮತ್ತೊಬ್ಬರಿಗೆ ತಿಳಿಸಲು ಸಾಮಾನ್ಯವಾಗಿ ಕೂಗಿ ಹೇಳುವ ವಿಧಾನ). ಈ ಹಿಂದೆ ಪತ್ರಗಳನ್ನು ಬರೆಯುವಾಗ ಮೊದಲು ನಮಸ್ಕಾರ ತಿಳಿಸಿದ ನಂತರ ಬರೆಯುತ್ತಿದ್ದುದು ಇದನ್ನೇ. ನಾನು ಕ್ಷೇಮವಾಗಿದ್ದೇನೆ, ನೀವೂ ಕ್ಷೇಮವಾಗಿದ್ದೀರೆಂದು ಭಾವಿಸುತ್ತೇನೆ ಎಂದೇ ಬರೆಯಲಾಗುತ್ತಿತ್ತು. ಇದು ದೂರದಲ್ಲಿರುವವರಿಗೆ ಒಂದು ರೀತಿಯ ನೆಮ್ಮದಿಯ ಸಂದೇಶವನ್ನು ಕಳುಹಿಸುತ್ತಿತ್ತು. ಈಗಲೂ ಹಿರಿಯರು ಹೇಳುವುದೂ ಇದನ್ನೇ. ನಿನಗೆ ಎಂತಹುದೇ ಸಮಸ್ಯೆ ಇದ್ದರೂ ನಾನು ಚೆನ್ನಾಗಿದ್ದೇನೆ ಎಂದೇ ಹೇಳು. ನಮ್ಮ ಸಮಸ್ಯೆಯನ್ನು ಎಲ್ಲರಿಗೂ ತಿಳಿಸುವುದಕ್ಕಿಂತ, ಯಾರಲ್ಲಿ ಸಮಸ್ಯೆಗೆ ಪರಿಹಾರ ಸಿಗಬಹುದೋ ಅಂತಹವರಿಗೆ ಹೇಳಿದರೆ ಸಾಕು. ಉಳಿದವರಿಗೆ ನಾನು ಚೆನ್ನಾಗಿದ್ದೇನೆ ಎಂದೇ ಹೇಳಬೇಕು ಎಂದು ಅವರು ಹೇಳುತ್ತಾರೆ. ಇದು ಜೀವನ ಪದ್ಧತಿ.

ಈ ಹಿಂದೆ ಓದಿದ್ದ ಒಂದು ಲೇಖನವನ್ನು ಇಲ್ಲಿ ಉಲ್ಲೇಖಿಸಬಹುದು. ನಾನು ಯಾವಾಗಲೂ ಖುಷಿಯಾಗಿದ್ದೇನೆ ಎಂದೇ ಹೇಳಬೇಕು ಎಂಬುದು ಆ ಲೇಖನದ ಸಾರ. ನಾನು ಖುಷಿಯಾಗಿಲ್ಲ ಎಂದಾದರೆ ನನ್ನ ಹತ್ತಿರಕ್ಕೆ ಯಾರೂ ಸುಳಿಯುವುದಿಲ್ಲ. ಖುಷಿಯನ್ನು ಹಂಚಿಕೊಳ್ಳುವುದಕ್ಕೆ ಜನರು ಸಿಗುವರೇ ವಿನಃ, ದುಃಖವನ್ನು ಹಂಚಿಕೊಳ್ಳಲು ಸಿಗುವವರು ಕಡಿಮೆಯೇ. ನನ್ನ ಗಂಡ ರಾತ್ರಿ ಜೋರಾಗಿ ಗೊರಕೆ ಹೊಡೆಯುತ್ತಾರೆ ಎಂಬುದು ಹಲವರ ದೂರು. ಇದನ್ನು ಧನಾತ್ಮಕವಾಗಿ ಭಾವಿಸುವುದಾದರೆ, ಇಂದು ನಿದ್ರೆ ಮಾಡಲು ಜನರು ಏನೆಲ್ಲಾ ಕಷ್ಟವನ್ನು ಪಡುತ್ತಾರೆ. ಯಾವುದ್ಯಾವುದೋ ಮಾತ್ರೆಗಳನ್ನು ನುಂಗುತ್ತಾರೆ, ಅಷ್ಟಾದರೂ ಅವರು ನೆಮ್ಮದಿಯಾಗಿ ನಿದ್ರೆ ಮಾಡುವುದಿಲ್ಲ. ಆದರೆ ನನ್ನ ಗಂಡ ಯಾವುದೇ ಮಾತ್ರೆ ತೆಗೆದುಕೊಳ್ಳದೇ ಇಷ್ಟು ಸುಖವಾಗಿ ನಿದ್ರೆ ಮಾಡುತ್ತಿರುವುದು ಸಂತಸದ ಸಂಗತಿಯೇ ಎಂದು ಭಾವಿಸಿದರೆ ಸಮಸ್ಯೆಯೇ ಆಗುವುದಿಲ್ಲ. ಆತ ಸುಖವಾಗಿದ್ದಾನೆ ಹಾಗೂ ನನ್ನ ಜತೆಯಲ್ಲಿಯೇ ಇದ್ದಾನೆ. ಇದಕ್ಕಾಗಿ ನಾನು ದೇವರಿಗೆ ಧನ್ಯವಾದ ಹೇಳುತ್ತೇನೆ ಎಂದು ಭಾವಿಸಿದರೆ ಗೊರಕೆಯು ಆಪಾದನೆಯ ವಿಷಯವೇ ಆಗುವುದಿಲ್ಲ.

ಇದಕ್ಕೆ ಮತ್ತೊಂದು ಜೋಡಣೆ ಎಂದರೆ ನನ್ನ ಮಗಳು ದಿನಾ ಬೆಳಿಗ್ಗೆ ಒಂದೇ ದೂರು ಹೇಳುತ್ತಾಳೆ. ಅದೆಂದರೆ ರಾತ್ರಿ ಎಲ್ಲಾ ಸೊಳ್ಳೆಗಳ ಕಾಟ, ಸರಿಯಾಗಿ ನಿದ್ರೆ ಮಾಡಲಾಗುತ್ತಿಲ್ಲ ಎಂದು. ಇದನ್ನು ದೂರು ಎಂಬುದಾಗಿ ಪರಿಗಣಿಸದೆ, ನನ್ನ ಮಗಳು ರಾತ್ರಿಯೆಲ್ಲಾ ನಮ್ಮೊಡನೇ ಇದ್ದಾಳೆ, ಎಲ್ಲೂ ತಿರುಗಾಡಲು ಹೋಗುವುದಿಲ್ಲ. ಇದಕ್ಕಾಗಿ ದೇವರೇ ನಿನಗೆ ಧನ್ಯವಾದ ಎಂದಾಗ ಮನಸ್ಥಿತಿ ಶಾಂತವಾಗಿರುತ್ತದೆ. ಇಂದು ಅನೇಕ ಹೆಣ್ಣು ಮಕ್ಕಳು ಪಾರ್ಟಿ ಎಂದು ಹೊರಹೋಗುವುದು ಮಾಡುತ್ತಾರೆ. ಅವರು ಮನೆಗೆ ಹಿಂದಿರುಗುವವರೆಗೆ ತಂದೆ–ತಾಯಿಯರು ಆತಂಕಪಡುತ್ತಿರುತ್ತಾರೆ. ಅಂತಹ ಸಮಯದಲ್ಲಿ ಮಗಳು ರಾತ್ರಿ ಎಲ್ಲೂ ಹೋಗದೆ ಮನೆಯಲ್ಲೇ ಇದ್ದಾಳೆ ಎಂಬುದು ಸಮಾಧಾನದ ವಿಷಯ ಎಂದು ಭಾವಿಸುವುದು ಧನಾತ್ಮಕವಾದ ಆಲೋಚನೆ.

ಮತ್ತೊಂದು ಉದಾಹರಣೆ ಎಂದರೆ ಅಯ್ಯೋ! ಎಲ್ಲಾ ಪದಾರ್ಥಗಳ ಬೆಲೆ ಜಾಸ್ತಿಯಾಗಿದೆ, ಸಾಕಷ್ಟು ಹಣ ವೆಚ್ಚವಾಗುತ್ತಿದೆ ಎಂಬುದು ಬೇಸರದ ವಿಷಯವೇ ಆದರೂ, ನನಗೆ ಇನ್ನೂ ಅವನ್ನು ಕೊಳ್ಳಲು ಶಕ್ತಿ ಇದೆಯಲ್ಲಾ ಅದಕ್ಕಾಗಿ ದೇವರಿಗೆ ಧನ್ಯವಾದ ಅರ್ಪಿಸುತ್ತೇನೆ ಎಂದುಕೊಂಡಾಗ ದುಗುಡ ಕಡಿಮೆಯಾಗುತ್ತದೆ. ಹಾಗೆಯೇ ಪ್ರತಿದಿನ ಮನೆಯ ಕಸ ಗುಡಿಸಬೇಕು, ಎಲ್ಲವನ್ನೂ ಸ್ವಚ್ಛಗೊಳಿಸಬೇಕು ಇದು ಸಾಕಷ್ಟು ಶ್ರಮದ ಕೆಲಸ ಎಂದುಕೊಳ್ಳುವ ಬದಲು, ನನ್ನ ಅದೃಷ್ಟ, ನನಗೆ ಇರಲು ಒಂದು ಮನೆಯಿದೆ. ಸೂರೇ ಇಲ್ಲದವರ ಗತಿಯೇನು? ಅದಕ್ಕಿಂತ ನಾನು ಅದೃಷ್ಟವಂತ ಎಂದುಕೊಂಡಾಗ ನೆಮ್ಮದಿಯ ಭಾವನೆ ಮೂಡುತ್ತದೆ.

ಹಬ್ಬಗಳು ಬಂದಾಗ ಹಣ ಖರ್ಚಾಗುತ್ತದೆ, ಅನೇಕರಿಗೆ ಉಡುಗೊರೆಗಳನ್ನು ನೀಡಬೇಕು, ಆ ಸಮಯದಲ್ಲಿ ಹೂವು, ಹಣ್ಣು ದುಬಾರಿಯಾಗಿರುತ್ತದೆ ಎಂದುಕೊಳ್ಳುವುದಕ್ಕಿಂತ ನನ್ನ ಸಂತೋಷಕ್ಕಾಗಿ ನಾನು ಖರ್ಚು ಮಾಡುತ್ತಿದ್ದೇನೆ. ನನ್ನ ಸಂಬಂಧಿಕರಿಗೆ ಉಡುಗೊರೆ ನೀಡುವ ನನ್ನ ಜವಾಬ್ದಾರಿಯನ್ನು ಹೆಮ್ಮೆಯಿಂದ ನಿಭಾಯಿಸಿದ್ದೇನೆ. ಇವರೆಲ್ಲಾ ಇರದಿದ್ದರೆ ನನ್ನ ಜೀವನ ಎಷ್ಟು ನೀರಸವಾಗಿರುತ್ತಿತ್ತು. ದೇವರೇ ಇವೆಲ್ಲಾ ಕರುಣಿಸಿರುವ ನಿನಗೆ ಧನ್ಯವಾದಗಳು ಎಂಬ ಭಾವನೆ ಮೂಡಿದರೆ, ಸಾರ್ಥಕತೆ ಮನೆ ಮಾಡುತ್ತದೆ. ಅಲ್ಲದೇ ಜೀವನವನ್ನು ಮತ್ತಷ್ಟು ನೆಮ್ಮದಿಯಾಗಿ ಕಳೆಯಲು ಅನುವು ಮಾಡಿಕೊಡುತ್ತದೆ.

ಅಯ್ಯೋ ಬೆಳಗಾಯಿತು, ಏಳಬೇಕು, ದುಡಿಯಲು ಹೋಗಬೇಕು ಇದೊಂದು ರೀತಿಯ ನನ್ನ ಕರ್ಮ ಎಂದು ಭಾವಿಸುವವರು, ನಾನು ಪ್ರತಿದಿನ ಹೊಸ ಸೂರ್ಯನನ್ನು ನೋಡುತ್ತೇನೆ, ಹೊಸ ಬೆಳಗು ನೋಡುತ್ತೇನೆ. ಎಷ್ಟೋ ಜನರು ಇಂತಹ ಬೆಳಿಗ್ಗೆಗಳನ್ನೇ ನೋಡಲಾರರು. ಎಷ್ಟೋ ಕುರುಡರಿಗೆ ಇದನ್ನು ನೋಡಿ ಸಂತಸ ಪಡುವ ಅವಕಾಶವೇ ಇಲ್ಲ. ನಾನು ಭಾಗ್ಯವಂತ. ಇಂದೂ ಸಹ ಹೊಸ ಬೆಳಗನ್ನು ಕಂಡೆ. ನಾನು ಸಾರ್ಥಕ ಜೀವನಕ್ಕಾಗಿ ದುಡಿಯುತ್ತೇನೆ, ಮಾಡುವ ಕೆಲಸವನ್ನೂ ಪ್ರೀತಿಯಿಂದ ಮಾಡುತ್ತೇನೆ ಎಂದು ಭಾವಿಸಿದರೆ ನೆಮ್ಮದಿ ಜಾಸ್ತಿಯಾಗುತ್ತದೆ.

ನಾವು ಯಾವುದರಲ್ಲಿ ಸುಖವನ್ನು ಕಾಣಬೇಕು ಎಂಬುದು ನಮ್ಮ ವಿವೇಚನೆಗೆ ಬಿಟ್ಟ ವಿಚಾರ. ನಾನು ದೊಡ್ಡ ವಿಜ್ಞಾನಿಯಾಗಲಿಲ್ಲ, ನಾನು ವೈದ್ಯನಾಗಲಿಲ್ಲ, ನಾನು ಕೋಟ್ಯಾಧಿಪತಿಯಾಗಲಿಲ್ಲ ಎಂಬುದು ಪರಿಹಾರ ಸಿಗದೆ ನೋವು ನೀಡುವಂತಹುದು. ಬದಲಾಗಿ ಚಿಕ್ಕದೋ, ದೊಡ್ಡದೋ ಕಷ್ಟದಲ್ಲಿಯೂ ಸುಖವನ್ನು ಹುಡುಕಬೇಕು, ಎಲ್ಲವನ್ನೂ ಆ ದೇವರ ಕರುಣೆ ಎಂದು ಭಾವಿಸಿದರೆ ನೆಮ್ಮದಿ ಮೂಡುತ್ತದೆ. ನಮ್ಮನ್ನು ಇತರರ ಜೊತೆಗೆ ಹೋಲಿಸುವುದಾದರೆ, ನನಗಿಂತ ಕಷ್ಟದಲ್ಲಿರುವ, ನನಗಿಂತ ಅನಾರೋಗ್ಯದಲ್ಲಿರುವವರ ಬಗ್ಗೆ, ಒಂದು ಹೊತ್ತು ಊಟಕ್ಕೆ ಗತಿಯಿಲ್ಲದವರ ಬಗ್ಗೆ ಯೋಚಿಸಬೇಕು. ಮನೆ ಗುಡಿಸಲು ಇಲ್ಲದೆ ರಸ್ತೆ ಬದಿಯಲ್ಲಿ ಮಲಗುವವರಿಗಿಂತ ನಾನು ಉತ್ತಮ ಜೀವನ ನಡೆಸುತ್ತಿದ್ದೇನೆ ಎಂದು ಭಾವಿಸುವವರ ಮನಸ್ಥಿತಿ ಹಾಗೂ ಆರೋಗ್ಯ ಉತ್ತಮವಾಗೇ ಇರುತ್ತದೆ. ಹೆಚ್ಚಿನ ಆಸೆಗಳು ನಮ್ಮ ನೆಮ್ಮದಿಯನ್ನು ಹಾಳು ಮಾಡುತ್ತವೆ. ಇದ್ದುದರಲ್ಲೇ ಸಾರ್ಥಕತೆ ಕಾಣುವುದು ಜಾಣತನ.

ಹಿಜಾಬ್ ವಿವಾದ: ಕುಂದಾಪುರದ ಪ್ರಾಂಶುಪಾಲರಿಗೆ 'ಅತ್ಯುತ್ತಮ ಶಿಕ್ಷಕ' ಪ್ರಶಸ್ತಿ ತಡೆ

ಉಡುಪಿ: ಉಡುಪಿ ಜಿಲ್ಲೆಯ ಕುಂದಾಪುರದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ರಾಮಕೃಷ್ಣ ಅವರಿಗೆ ರಾಜ್ಯಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ನೀಡುವುದನ್ನು ರಾಜ್ಯ ಸರ್ಕಾರ ತಡೆಹಿಡಿದಿದೆ. ಇಂದು ಶಿಕ್ಷಕರ ದಿನಾಚರಣೆ ನಿಮಿತ್ತ ರಾಮಕೃಷ್ಣ ಅವರಿಗೆ ಪ್ರಶಸ್ತಿ ಘೋಷಣೆಯಾಗಿತ್ತು. ಆದರೆ ಮುಸ್ಲಿಂ ಸಮುದಾಯದ ಕೆಲ ಕಾರ್ಯಕರ್ತರು ಹಾಗೂ ಮುಖಂಡರಿಂದ ತೀವ್ರ ಆಕ್ರೋಶ ವ್ಯಕ್ತವಾದ್ದರಿಂದ ಸರ್ಕಾರ ಪ್ರಶಸ್ತಿ ನೀಡದಿರಲು ನಿರ್ಧರಿಸಿದೆ. ಎರಡು ವರ್ಷಗಳ ಹಿಂದೆ ನಡೆದ ಹಿಜಾಬ್ ವಿವಾದ ಇದಕ್ಕೆ ಪ್ರಮುಖ ಕಾರಣವಾಗಿದೆ. ಸರ್ಕಾರಿ ಆದೇಶದೊಂದಿಗೆ ಹಿಜಾಬ್ ಧರಿಸಿದ ವಿದ್ಯಾರ್ಥಿನಿಯರು ತರಗತಿ ಕೊಠಡಿ ಪ್ರವೇಶಿಸಲು ಪ್ರಾಂಶುಪಾಲ ಬಿಜಿ ರಾಮಕೃಷ್ಣ ನಿರಾಕರಿಸಿದ್ದರು.

ಸರ್ಕಾರದ ನಡೆಗೆ ಖಂಡನೆ

ಇದು ಮಂಗಳೂರು, ಮಂಡ್ಯ, ಉಡುಪಿ ಸೇರಿದಂತೆ ರಾಜ್ಯದ ಹಲವೆಡೆ ಪ್ರತಿಭಟನೆ ನಡೆದಿತ್ತು. ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಘೋಷಣೆಯಾಗುತ್ತಿದ್ದಂತೆಯೇ, ಕೆಲ ಪ್ರಗತಿಪರ ಸಂಘಟನೆಗಳು ಸಾಮಾಜಿಕ ಜಾಲತಾಣಗಳಲ್ಲಿ ಸರ್ಕಾರದ ನಿರ್ಧಾರವನ್ನು ಟೀಕಿಸಿದ್ದವು. ಇದಕ್ಕೆ ಪ್ರತಿಕ್ರಿಯೆಯಾಗಿ ರಾಜ್ಯ ಸರ್ಕಾರ ಪ್ರಶಸ್ತಿ ನೀಡದಿರಲು ನಿರ್ಧರಿಸಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಈ ಹಿಜಾಬ್ ಸಮಸ್ಯೆಯನ್ನು ಸಮಿತಿ ಕಡೆಗಣಿಸಿದೆ. ಎಂದು ಭಾವಿಸುತ್ತೇನೆ. ಸಮಸ್ಯೆ ಇದೆ ಎಂಬುದು ನಿನ್ನೆ ಗೊತ್ತಾದಾಗ ಪ್ರಶಸ್ತಿ ನೀಡುವುದನ್ನು ಸದ್ಯಕ್ಕೆ ತಡೆಹಿಡಿದಿದ್ದೇವೆ. ಪರಿಶೀಲಿಸಿ ನಂತರ ಮುಂದಿನ ಕ್ರಮ ಕೈಗೊಳ್ಳುತ್ತೇವೆ ಎಂದರು.


ವಿಎಚ್‌ಪಿ ಉತ್ತರ ಕರ್ನಾಟಕದ ಉಪಾಧ್ಯಕ್ಷ ಗೋವರ್ಧನ್ ರಾವ್ ಮಾತನಾಡಿ, 'ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿದವರಿಗೆ ಉತ್ತಮ ಶಿಕ್ಷಕ ಪ್ರಶಸ್ತಿ' ನೀಡಲಾಗುತ್ತದೆ. ಬೇರೆ ಕಾರಣಕ್ಕೆ ಪ್ರಶಸ್ತಿ ನೀಡದಿರುವುದು ಖಂಡನೀಯ ಎಂದರು.

ಮೈಸೂರಿನ ಉದ್ಯಾನವನಗಳಲ್ಲಿ ಕಗ್ಗತ್ತಲು

ಅನೈತಿಕ ಚಟುವಟಿಕೆ, ಅಪರಾಧ ಕೃತ್ಯಗಳ ತಾಣವಾಗಿರುವ ಪಾರ್ಕುಗಳು

ಮೈಸೂರು, ಸೆ.5 (ಆರ್‌ಕೆ)– ಮೈಸೂರು ನಗರದ ಬಹುತೇಕ ಉದ್ಯಾನವನಗಳಲ್ಲಿ ವಿದ್ಯುತ್ ದೀಪಗಳಿದ್ದರೂ, ಅವು ರಾತ್ರಿ ವೇಳೆ ಬೆಳಗದೇ ಇತ್ತೀಚೆಗೆ ವಿಹಾರ ತಾಣಗಳು ಅಪರಾಧ ಕೃತ್ಯಗಳ ಕೇಂದ್ರಗಳಾಗಿ ಪರಿಗಣಿಸಿವೆ.

ಮೈಸೂರಿನ ಹೃದಯ ಭಾಗದಲ್ಲಿರುವ ಲಕ್ಷ್ಮೀಪುರಂ ಠಾಣಾ ಸರಹದ್ದಿನ ಬಲ್ಲಾಳ್ ಸರ್ಕಲ್ ಪಾರ್ಕ್, ನೇರಂಬಳ್ಳಿ ಕಲ್ಯಾಣ ಮಂಟಪದ ಬಳಿಯ ನ್ಯೂ ಕಾಂತರಾಜ ಅರಸ್ ರಸ್ತೆಯ ಉದ್ಯಾನವನ, ಕೃಷ್ಣಮೂರ್ತಿಪುರಂ 4ನೇ ಕ್ರಾಸ್ ಪಾರ್ಕ್ ಮತ್ತು ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನ (ಸುಬ್ಬರಾಯನ ಕೆರೆ) ಸೇರಿದಂತೆ ಹಲವೆಡೆ ವಿದ್ಯುತ್ ದೀಪ ಕಾರ್ಯನಿರ್ವಹಿಸದಿರುವ ಕಾರಣ ಅಲ್ಲಿ ಅಪರಾಧ ಕೃತ್ಯಗಳು ನಿರಂತರವಾಗಿ ನಡೆಯುತ್ತಿವೆ ಎಂದು ಲಕ್ಷ್ಮೀಪುರಂ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ರವಿಶಂಕರ್ ಮೈಸೂರು ಮಹಾನಗರಪಾಲಿಕೆ ಆಯುಕ್ತರಿಗೆ ಹಲವು ಬಾರಿ ಪತ್ರ ಬರೆದಿದ್ದಾರೆ.



ಕಗ್ಗತ್ತಲಲ್ಲಿ ಮುಳುಗಿರುವ ಪಾರ್ಕ್‌ಗಳು.

ಇಲ್ಲಿ ವಿದ್ಯುತ್ ದೀಪಗಳಿದ್ದರೂ ಅವು ಬೆಳಗದೇ ಇರುವುದರಿಂದ ಪಾರ್ಕುಗಳಲ್ಲಿ ಗಾಂಜಾ ಸೇವನೆ, ಅನೈತಿಕ ಚಟುವಟಿಕೆಗಳು, ಅಂದರ್ ಬಾಹರ್ ಜೂಜಾಟ, ವಿಹಾರಕ್ಕೆ ಬಂದ ಮಹಿಳೆಯರ ಸರ ಅಪಹರಣ, ಸುಲಿಗೆಗಳಂತಹ ಅಪರಾಧ ಕೃತ್ಯಗಳು ನಡೆಯುತ್ತಿವೆ ಎಂದು ಇನ್ಸ್‌ಪೆಕ್ಟರ್ ರವಿಶಂಕರ್ ಮೈಸೂರು ಮಹಾನಗರಪಾಲಿಕೆ ಆಯುಕ್ತರಿಗೆ ಪತ್ರಗಳನ್ನು ಬರೆದಿದ್ದಾರೆ. ಅಲ್ಲದೆ ವಾಯುವಿಹಾರ ವೇಳೆ ಕೆಲವೊಂದು ಪಾರ್ಕುಗಳಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿವೆ. ಇವುಗಳ ನೋಡಿ ಮುಜುಗರವಾಗುತ್ತಿದೆ. ದೀಪಗಳಿಲ್ಲದೆ ಇರುವುದರಿಂದ ಕಗ್ಗತ್ತಲು ಆವರಿಸುವ ಪಾರ್ಕುಗಳಲ್ಲಿ ಅಪರಾಧ ಕೃತ್ಯಗಳ ಭೀತಿ ಇದೆ ಎಂದು ವಾಯುವಿಹಾರಿಗಳು ಸರಹದ್ದಿನ ಪೊಲೀಸ್ ಠಾಣೆಗಳಿಗೆ ದೂರು ನೀಡಿದ್ದಾರೆ. ಮೈಸೂರಿನ ಅಶೋಕಪುರಂ, ಕುವೆಂಪುನಗರ, ಜಯಲಕ್ಷ್ಮೀಪುರಂ, ವಿಜಯನಗರ, ಮೇಟಗಳ್ಳಿ, ವಿವಿಪುರಂ, ವಿದ್ಯಾರಣ್ಯಪುರಂ, ನಜರ್‌ಬಾದ್, ಲಷ್ಕರ್ ಸೇರಿದಂತೆ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯ ಪಾರ್ಕುಗಳಲ್ಲಿ ಈ ರೀತಿಯ ತೊಂದರೆಗಳನ್ನು ಎದುರಿಸುತ್ತಿರುವ ಬಗ್ಗೆ ನಾಗರಿಕರು ದೂರಿದ್ದು, ಮೈಸೂರು ಮಹಾನಗರಪಾಲಿಕೆ ಅಧಿಕಾರಿಗಳು ವಿದ್ಯುತ್ ದೀಪದ ವ್ಯವಸ್ಥೆ ಮಾಡುತ್ತಿಲ್ಲ ಎಂದು ಠಾಣಾಧಿಕಾರಿಗಳು ಆರೋಪಿಸಿದ್ದಾರೆ.

> "ನಗರಪಾಲಿಕೆ ವ್ಯಾಪ್ತಿಯ ಪಾರ್ಕುಗಳಲ್ಲಿ ವಿದ್ಯುತ್ ದೀಪಗಳು ಸದಾ ಬೆಳಗುವಂತೆ ಅಗತ್ಯ ಕ್ರಮವಹಿಸಲು ನಮ್ಮ ಸಿಬ್ಬಂದಿಗೆ ಸೂಚನೆ ನೀಡುತ್ತೇನೆ. ಅದು ಪಾಲಿಕೆಯ ಕರ್ತವ್ಯವೂ ಹೌದು. ಈ ಸಂಬಂಧ ಪೊಲೀಸ್ ಇನ್ಸ್‌ಪೆಕ್ಟರ್‌ಗಳು ಬರೆದಿರುವ ಪತ್ರಗಳನ್ನು ಪರಿಗಣಿಸಿ ನಾವು ದೀಪ ಅಳವಡಿಸಿ ನಿರ್ವಹಣೆ ಮಾಡುತ್ತೇವೆ. ಆದರೆ ಪಾರ್ಕು, ಸಾರ್ವಜನಿಕ ಸ್ಥಳಗಳಲ್ಲಿ ಅಪರಾಧ ಕೃತ್ಯ, ಸಮಾಜಘಾತುಕ ಚಟುವಟಿಕೆಗಳು ನಡೆಯದಂತೆ ತಡೆಗಟ್ಟುವುದು ಪೊಲೀಸರ ಜವಾಬ್ದಾರಿಯಾಗಿದೆ.
>
> –ಅಶಾದ್ ಉರ್ ರೆಹಮಾನ್ ಷರೀಫ್, ಆಯುಕ್ತರು, ಮೈಸೂರು ಮಹಾನಗರಪಾಲಿಕೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ ಶುಕ್ರವಾರ 6 ಸೆಪ್ಟೆಂಬರ್ 2024

ಖದೀಮನ ಬಂಧನ; ಎರಡು ಬೈಕ್ ವಶಕ್ಕೆ

ಮೈಸೂರು, ಸೆ.5(ಎಸ್‌ಪಿಎನ್)– ದ್ವಿ ಚಕ್ರ ವಾಹನ ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಬಂಧಿಸಿರುವ ವಿಜಯನಗರ ಪೊಲೀಸರು, ಈತನಿಂದ 2 ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡಿದ್ದಾರೆ. ಏ.22ರಂದು ವಿಜಯನಗರ 3ನೇ ಹಂತದ ನಿವಾಸಿಯೊಬ್ಬರ ಮನೆಯ ಮುಂದೆ ನಿಲ್ಲಿಸಿದ್ದ ಬೈಕ್ ಅನ್ನು ಯಾರೋ ಕಳ್ಳತನ ಮಾಡಿರುವ ಕುರಿತು ಪ್ರಕರಣ ದಾಖಲಾಗಿತ್ತು. ಈ ಸಂಬಂಧ ತನಿಖೆ ನಡೆಸುತ್ತಿದ್ದ ವಿಜಯನಗರ ಪೊಲೀಸರಿಗೆ ಖಚಿತ ಮಾಹಿತಿ ಮೇರೆಗೆ ವಿಜಯನಗರ 4ನೇ ಹಂತದಲ್ಲಿ ನಂಬರ್ ಪ್ಲೇಟ್ ಇಲ್ಲದ ಬೈಕ್‌ನಲ್ಲಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ಬೈಕ್ ಸವಾರನನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ಈ ಪ್ರಕರಣ ಬೆಳಕಿಗೆ ಬಂದಿದೆ.

ಈ ಪತ್ತೆ ಕಾರ್ಯವನ್ನು ಎಸಿಪಿ ಜಿ.ಎಸ್.ಗಜೇಂದ್ರ ಪ್ರಸಾದ್ ನೇತೃತ್ವದಲ್ಲಿ ವಿಜಯನಗರ ಠಾಣೆಯ ಇನ್ಸ್‌ಪೆಕ್ಟರ್ ಎಸ್.ಡಿ.ಸುರೇಶ್‌ಕುಮಾರ್, ಪಿಎಸ್‌ಐ ಕೆ.ವಿಶ್ವನಾಥ್, ಡಿ.ಕೃಷ್ಣ, ವನಜಾಕ್ಷಿ ಹಾಗೂ ಸಿಬ್ಬಂದಿಗಳಾದ ಶಂಕರ್, ಪ್ರದೀಪ್, ಕೆ.ಎನ್.ಲೋಕೇಶ್, ಕೆ.ಎನ್.ಮಂಜುನಾಥ್, ಎನ್.ವೆಂಕಟೇಶ್, ಶಿವಕುಮಾರ್, ಎ.ಎಂ.ಪರಮೇಶ್, ಮಾಯಪ್ಪ ಮತ್ತು ತಾಂತ್ರಿಕ ವಿಭಾಗದ ಕುಮಾರ್ ಇದ್ದರು.

ಅನಿರ್ದಿಷ್ಟಾವಧಿ ಪ್ರತಿಭಟನೆ ಕೈಬಿಟ್ಟ ರೈತರು

ಮೈಸೂರು,ಸೆ.5(ಪಿಎಂ)– ತಮ್ಮ ಭೂಮಿಗೆ ಪ್ರತಿಯಾಗಿ ಕೈಗಾರಿಕೆಗಳಲ್ಲಿ ಕಾನೂನಿನಂತೆ ಉದ್ಯೋಗ ಕಲ್ಪಿಸಬೇಕೆಂದು ಮೈಸೂರಿನ ಜಿಲ್ಲಾ ಕೈಗಾರಿಕಾ ಕೇಂದ್ರದ ಕಚೇರಿ ಆವರಣದಲ್ಲಿ ಕೆಂಪಿಸಿದ್ದನಹುಂಡಿ ಗ್ರಾಮದ ರೈತರು ನಡೆಸುತ್ತಿದ್ದ ಅಹೋರಾತ್ರಿ ಅನಿರ್ದಿಷ್ಟಾವಧಿ ಪ್ರತಿಭಟನೆಯನ್ನು ಗುರುವಾರ ತಾತ್ಕಾಲಿಕವಾಗಿ ಕೈಬಿಡಲಾಯಿತು.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಎಐಕೆಕೆಎಂಎಸ್ ಮುಖಂಡ ಹೆಚ್.ಎಂ.ಬಸವರಾಜು, ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿಯವರು ಮುಂದಿನ ವಾರ ತಮ್ಮ ಅಧ್ಯಕ್ಷತೆಯಲ್ಲಿ ಸಭೆ ಕರೆದು, ಎಲ್ಲಾ ಕೈಗಾರಿಕೆಗಳ ಪ್ರತಿನಿಧಿಗಳೂ ಕಡ್ಡಾಯವಾಗಿ ಸಭೆಯಲ್ಲಿ ಭಾಗವಹಿಸಲು ಸೂಚಿಸಲಾಗುವುದು. ನನ್ನ ಮಾತಿನ ಮೇಲೆ ನಂಬಿಕೆ ಇಟ್ಟು ಈ ಹೋರಾಟವನ್ನು ಹಿಂಪಡೆಯಬೇಕೆಂದು ಹೋರಾಟಗಾರರಲ್ಲಿ ಮನವಿ ಮಾಡಿದರು. ಈ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಹೋರಾಟ ಕೈಬಿಟ್ಟಿದ್ದೇವೆ ಎಂದು ತಿಳಿಸಿದರು.

ಪ್ರಮಾಣ ಪತ್ರ ವಿತರಣೆ...



ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಅಂಗಸಂಸ್ಥೆಯಾದ ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರದ ಜಯಪುರ ಶಾಖೆಯಲ್ಲಿ ಬ್ಯುಟಿಷಿಯನ್ ತರಬೇತಿ ಪಡೆದ ಪ್ರಶಿಕ್ಷಣಾರ್ಥಿಗಳಿಗೆ ಎಸ್‌ವಿವೈಎಂನ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣ ನಿರ್ದೇಶಕ ಡಾ.ಡೆನ್ನಿಸ್ ಡಿ.ಚೌಹಾಣ್ ಪ್ರಮಾಣ ಪತ್ರ ವಿತರಿಸಿದರು. ಜಯಪುರ ಸಮುದಾಯ ಆರೋಗ್ಯ ಕೇಂದ್ರದ ವೈದ್ಯೆ ಡಾ.ಮಂಜುಶ್ರೀ, ಜಯಪುರ ಗ್ರಾಪಂ ಮಾಜಿ ಅಧ್ಯಕ್ಷ ಮಹಮ್ಮದ್ ಆಲಿ, ನಿವೃತ್ತ ಮುಖ್ಯ ಶಿಕ್ಷಕ ರವೀಂದ್ರ ನಾಥ್, ಬ್ಯುಟಿಷಿಯನ್ ಶಿಕ್ಷಕಿ ನೇತ್ರಾವತಿ, ಅಬ್ದುಲ್ ರಶೀದ್ ಇನ್ನಿತರರಿದ್ದರು.

ಭೂಮಿ ಬೆಲೆ ಗಗನಕ್ಕೇರುತ್ತಿದೆ; ಸಂಬಂಧಿಸಿದ ಎಲ್ಲಾ ಸರ್ಕಾರಿ ಶಾಲೆಗಳ ಜಾಗ ಹದ್ದುಬಸ್ತಿನಲ್ಲಿಡಿ

ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ತಾಕೀತು

- ಶಾಲೆಗಳ ಸುತ್ತಲಿನ ಜಾಗಕ್ಕೆ ಕಾಂಪೌಂಡ್ ನಿರ್ಮಿಸಿ; ಕೂಡಲೇ ಸ್ಕೆಚ್, ಖಾತೆ ಮಾಡಿಸಿ
- ತಾರತಮ್ಯವಿಲ್ಲದೆ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿರುವೆ; ಅನುಭವಿ ಶಿಕ್ಷಕರ ಕೊರತೆ ಇದೆ
- ಈಗ ಎಲ್ಲೆಡೆ ನೈತಿಕ ಮೌಲ್ಯದ ಪಾಠ ಬಿಟ್ಟು ಎಲ್ಲರೂ ಮೆರಿಟ್ ಬಗ್ಗೆ ಆಸಕ್ತಿ ತಾಳುತ್ತಿದ್ದಾರೆ

ಮೈಸೂರು, ಸೆ.5(ಬಿಎಲ್‌ಯು)– ಸರ್ಕಾರಿ ಶಾಲೆಗಳ ಜಾಗವನ್ನು ಅಳತೆ ಹಾಗೂ ಖಾತೆ ಮಾಡಿಸಿ ಹದ್ದುಬಸ್ತಿನಲ್ಲಿಡಬೇಕು ಎಂದು ಶಾಸಕ ಜಿ.ಟಿ.ದೇವೇಗೌಡ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ನಗರದ ಹೂಟಗಳ್ಳಿಯ ಖಾಸಗಿ ಕಲ್ಯಾಣ ಮಂಟಪದಲ್ಲಿ ಇಂದು ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಜನ್ಮ ದಿನ ಅಂಗವಾಗಿ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಲೆಕ್ಕಾಧಿಕಾರಿಗಳು ಹಾಗೂ ಆಯಾ ಮುಖ್ಯೋಪಾಧ್ಯಾಯರು ಜಂಟಿಯಾಗಿ ಈ ಕಾರ್ಯವನ್ನು ಆದಷ್ಟು ಬೇಗ ಮಾಡಿ ಮುಗಿಸಬೇಕು ಎಂದು ಸೂಚಿಸಿದರು.

ದಿನದಿಂದ ದಿನಕ್ಕೆ ಭೂಮಿ ಬೆಲೆ ಗಗನಕ್ಕೇರುತ್ತಿದೆ. ಈ ಹಿನ್ನೆಲೆ ಸರ್ಕಾರಿ ಶಾಲೆಗಳ ಜಾಗವನ್ನು ಉಳಿಸಿಕೊಳ್ಳಬೇಕು. ಶಾಲೆಗಳ ಸುತ್ತಲಿನ ಜಾಗಕ್ಕೆ ಕಾಂಪೌಂಡ್ ನಿರ್ಮಾಣ ಮಾಡಬೇಕು. ಇದಕ್ಕೆ ತಕ್ಕಂತೆ ಸ್ಕೆಚ್ ಹಾಗೂ ಖಾತೆ ಮಾಡಿಸಬೇಕು. ಈ ಮೂಲಕ ಸರ್ಕಾರಿ ಶಾಲೆಯ ಜಾಗವನ್ನು ಹದ್ದುಬಸ್ತಿನಲ್ಲಿಡಬೇಕು ಎಂದು ಜಿ.ಟಿ.ದೇವೇಗೌಡರು ಹೇಳಿದರು.

ಬಡವ, ಶ್ರೀಮಂತ ಎಂಬ ಭೇದ–ಭಾವವಿಲ್ಲದೆ ಸಮಾನವಾಗಿ ನೋಡುವ ಶಿಕ್ಷಕರು ಜ್ಞಾನಿಗಳಾಗಿದ್ದು, ಸಮಾಜದ ಆಗು–ಹೋಗುಗಳನ್ನು ಚೆನ್ನಾಗಿ ಅರಿತಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಅನುಭವಿ ಶಿಕ್ಷಕರ ಕೊರತೆ: ಶಿಕ್ಷಕರನ್ನು ಗೌರವದಿಂದ ಕಾಣಬೇಕು. ಅದರಲ್ಲೂ ಹಿರಿಯ ಶಿಕ್ಷಕರನ್ನು ಸನ್ಮಾನಿಸ ಬೇಕು. ಹಿರಿಯ ಶಿಕ್ಷಕರ ಮಾರ್ಗದರ್ಶನ ಮುಖ್ಯವಾಗಿದೆ. ಆದರೆ ಇಂದು ಅನುಭವಿ ಶಿಕ್ಷಕರ ಕೊರತೆ ಎದುರಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಶಿಕ್ಷಕರು ಹಾಗೂ ತಂದೆ, ತಾಯಿ ಮಕ್ಕಳನ್ನು ಯಾವ ರೀತಿ ನೋಡಿಕೊಳ್ಳಬೇಕು ಎಂಬುವುದನ್ನು ಡಾ.ರಾಧಾಕೃಷ್ಣನ್ ಮಾರ್ಗದರ್ಶನ ಮಾಡಿದ್ದು, ಸರ್ವ ಕಾಲಕ್ಕೂ ಇವರ ಆದರ್ಶ ಪ್ರಸ್ತುತವಾಗಿರುತ್ತದೆ ಎಂದು ಶಾಸಕ ಜಿ.ಟಿ.ದೇವೇಗೌಡರು ತಿಳಿಸಿದರು.

ಶಿಕ್ಷಣದ ಜೊತೆಗೆ ಮಕ್ಕಳನ್ನು ಸದ್ಗುಣ ಸಂಪನ್ನರಾಗುವಂತೆ ಮಾಡಲು ಕೂಡ ಡಾ.ರಾಧಾಕೃಷ್ಣನ್ ಪ್ರೇರಣೆಯಾಗಿದ್ದರು.

ಪೋಷಕರಿದ್ದರೂ ಮಕ್ಕಳಿಗೆ ಅಕ್ಷರ ಹಾಗೂ ಬದುಕು ಕಲಿಸುವ ಪ್ರಮುಖ ಜವಾಬ್ದಾರಿಯನ್ನು ಶಿಕ್ಷಕರು ನಿರ್ವಹಿಸುತ್ತಾರೆ ಎಂದು ಅಭಿಪ್ರಾಯಪಟ್ಟ ಜಿ.ಟಿ.ದೇವೇಗೌಡರು, ಈ ಹಿಂದೆ ಶಿಕ್ಷಕರು ಮಕ್ಕಳಿಗೆ ನೈತಿಕ ಮೌಲ್ಯದ ಪಾಠ ಮಾಡುತ್ತಿದ್ದರು. ಆದರೆ ಈಗ ಮೆರಿಟ್ ತಂದು ಕೊಟ್ಟರೆ ಸಾಕು ಎಂಬ ಆಲೋಚನೆಯಲ್ಲಿದ್ದಾರೆ. ಇದರ ಪರಿಣಾಮ ಸಂಸ್ಕಾರಯುತ ಶಿಕ್ಷಣ ನೀಡಲು ಸಾಧ್ಯವಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಶಿಕ್ಷಕ ಹುದ್ದೆ ಶ್ರೇಷ್ಠವಾಗಿದ್ದು, ಶಿಕ್ಷಕರು ಮಕ್ಕಳಿಗೆ ಪಾಠ ಪ್ರವಚನ ಮಾಡುವುದರ ಜೊತೆಗೆ ಕನ್ನಡ ನಾಡು, ನುಡಿ, ಕಲೆ, ಸಂಸ್ಕೃತಿ ಹಾಗೂ ಸಾಹಿತ್ಯ ಉಳಿಸುವ ಬಗ್ಗೆ ಕೂಡ ಬೋಧಿಸಬೇಕು. ಮೈಸೂರು ತಾಲೂಕಿನ ಶಿಕ್ಷಕರೊಬ್ಬರು ಯೋಗ ಶಿಕ್ಷಣ ನೀಡುವುದರ ಜೊತೆಗೆ ಸ್ವಂತ ಖರ್ಚಿನಲ್ಲಿ ಸಮವಸ್ತ್ರ ಹಾಗೂ ಯಂತ್ರೋಪಕರಣ ನೀಡಿದ್ದಾರೆ. ಈ ಮೂಲಕ ಸಾಧನೆ ಮಾಡುವುದರ ಮೂಲಕ ಅದನ್ನು ಬೇರೆಯವರಿಗೂ ಧಾರೆ ಎರೆಯುವ ಗುಣ ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ತಾರತಮ್ಯ ಎಂದೂ ತೋರಿಲ್ಲ: ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸರ್ಕಾರಿ, ಖಾಸಗಿ ಶಾಲೆಗಳೆಂಬ ತಾರತಮ್ಯವಿಲ್ಲದೆ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಪಕ್ಷಾತೀತ ಹಾಗೂ ಜಾತ್ಯಾತೀತವಾಗಿ ಎಲ್ಲರನ್ನು ಸಮಾನತೆಯಿಂದ ನೋಡಿದ್ದೇನೆ. ಬೇರೆ ವಿಧಾನಸಭಾ ಕ್ಷೇತ್ರಗಳಂತೆ ನಮ್ಮ ಕ್ಷೇತ್ರದಲ್ಲಿ ಯಾವುದೇ ಗುಂಪುಗಾರಿಕೆ ಇಲ್ಲ. ಇದರಿಂದ ಎಲ್ಲಾ ಶಿಕ್ಷಕರು ಮುಕ್ತವಾಗಿ ಕೆಲಸ ಮಾಡಿ ಉತ್ತಮ ಫಲಿತಾಂಶ ತರಬೇಕು ಎಂದು ಜಿ.ಟಿ.ದೇವೇಗೌಡರು ಕಿವಿ ಮಾತು ಹೇಳಿದರು. ಈ ವೇಳೆ ಜಿ.ಟಿ.ದೇವೇಗೌಡರು ಸಾಧಕ ಶಿಕ್ಷಕರು ಹಾಗೂ ನಿವೃತ್ತ ಶಿಕ್ಷಕರನ್ನು ಸನ್ಮಾನಿಸಿದರು.

ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ, ಜಿಪಂ ಮಾಜಿ ಸದಸ್ಯೆ ಚಂದ್ರಿಕಾ, ಕ್ಷೇತ್ರ ಶಿಕ್ಷಣಾಧಿಕಾರಿ ವಿವೇಕಾನಂದ, ಶಿಕ್ಷಕರ ಸಂಘದ ಕಾರ್ಯದರ್ಶಿ ಮಾಲೇಗೌಡ, ಗೌರವಾಧ್ಯಕ್ಷ ಸತೀಶ್, ಕಾರ್ಯಾಧ್ಯಕ್ಷ ಎಸ್.ರಘು, ಉಪಾಧ್ಯಕ್ಷ ಶಿವಪ್ಪ, ಸುಮತಿ, ಖಜಾಂಚಿ ಅಶೋಕ್, ಸಹ ಕಾರ್ಯದರ್ಶಿ ಅನಿಲ್‌ಕುಮಾರ್, ಶ್ಯಾಮಲಾ, ಸಂಘಟನಾ ಕಾರ್ಯದರ್ಶಿ ಸುರೇಶ್, ರೇಣುಕಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಹೂಟಗಳ್ಳಿಯ ಖಾಸಗಿ ಕಲ್ಯಾಣ ಮಂಟಪದಲ್ಲಿ ಗುರುವಾರ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಜನ್ಮದಿನ ಅಂಗವಾಗಿ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು.

ಬೃಹತ್ ಮೈಸೂರು ಮಹಾನಗರಪಾಲಿಕೆ ಆಗುವವರೆಗೆ ಹೋರಾಡುವೆ...

ಬೃಹತ್ ಮೈಸೂರು ಮಹಾನಗರ ಪಾಲಿಕೆ ರಚನೆ ಆಗುವ ತನಕ ಹೋರಾಟ ಮಾಡುತ್ತೇನೆ ಎಂದು ಶಾಸಕ ಜಿ.ಟಿ.ದೇವೇಗೌಡರು ತಿಳಿಸಿದರು.

ನಗರದ ಸುತ್ತಮುತ್ತಲ ಬಡಾವಣೆಗಳಲ್ಲಿ ಮೂಲಸೌಕರ್ಯದ ಕೊರತೆ ಇದೆ. ಈ ಹಿನ್ನೆಲೆಯಲ್ಲಿ ನಗರಪಾಲಿಕೆ ಹಾಗೂ ಮುಡಾ ವ್ಯಾಪ್ತಿಯ ಎಲ್ಲಾ ಬಡಾವಣೆ ಸೇರಿಸಿ ಬೃಹತ್ ಮೈಸೂರು ಮಹಾನಗರಪಾಲಿಕೆ ಮಾಡುವಂತೆ ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಮನವಿ ಸಲ್ಲಿಸಿದ್ದೇನೆ. ಈ ಕೆಲಸ ಆಗುವ ತನಕ ಹೋರಾಟ ಮಾಡುತ್ತೇನೆ ಎಂದು ಹೇಳಿದರು.

ಯಾರೂ ಭೂಮಿ ಮಾರಬೇಡಿ: ಜಮೀನಿನ ಬೆಲೆ ಕಡಿಮೆ ಇದ್ದಾಗ ಅನೇಕರು ಮಾರಾಟ ಮಾಡಿದ್ದಾರೆ. ಆದರೆ ಈಗ ಭೂಮಿಗೆ ಚಿನ್ನದ ಬೆಲೆ ಇದೆ. ಈಗ ಒಂದೊಂದು ನಿವೇಶನಕ್ಕೂ ಪರದಾಡುತ್ತಿದ್ದಾರೆ. ಈ ಹಿನ್ನೆಲೆ ಯಾರೂ ಭೂಮಿ ಮಾರಾಟ ಮಾಡದೆ ಉಳಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಂಚಾರ ವ್ಯವಸ್ಥೆ ಕುರಿತು ಮೈಗ್ರಾಪ ಸಾಮಾನ್ಯ ಸಭೆ

ಮೈಸೂರು, ಸೆ.5(ಎಸ್‌ಪಿಎನ್)– ಮೈಸೂರು ನಗರದಲ್ಲಿ ಸುಧಾರಿತ, ಸುರಕ್ಷತ ಸಂಚಾರ ವ್ಯವಸ್ಥೆ ಕುರಿತು ಚರ್ಚಿಸಲು ಯಾದವಗಿರಿ ವಿವೇಕಾನಂದ ರಸ್ತೆಯ ಮೈಸೂರು ಗ್ರಾಹಕ ಪರಿಷತ್ ಕಚೇರಿಯಲ್ಲಿ ಸೆ.8ರಂದು ಭಾನುವಾರ ಸಂಜೆ 4 ಗಂಟೆಗೆ ಸಾಮಾನ್ಯ ಸಭೆ ಕರೆಯಲಾಗಿದೆ.

2024ರ ಮೈಸೂರು ನಗರದ ಮೊದಲ ಮೂರು ತಿಂಗಳಲ್ಲಿ 40 ಮಂದಿ ಅವಘಡದಲ್ಲಿ ಮೃತಪಟ್ಟಿದ್ದು, 2023ರ ಇದೇ ಅವಧಿಯಲ್ಲಿ 37 ಮಂದಿ ಸಾವನ್ನಪ್ಪಿದ್ದಾರೆ. ವಾರ್ಷಿಕ 162 ಮಂದಿ ಹಾಗೂ 2022ರಲ್ಲಿ 170, 2021ರಲ್ಲಿ 119 ಮಂದಿ ಸಾವನ್ನಪ್ಪಿದ್ದಾರೆ. ಸುಗಮ ಸಂಚಾರ ವ್ಯವಸ್ಥೆ ಕುರಿತು ಚರ್ಚಿಸಲು ವಿವಿ ಪುರಂ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಲವ ಹಾಗೂ ಪಿಎಸ್‌ಐ ಗೌತಮ್‌ಗೌಡ ಆಗಮಿಸಲಿದ್ದಾರೆ ಎಂದು ಮೈಗ್ರಾಪ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದೆ. ಹೆಚ್ಚಿನ ವಿವರಗಳಿಗೆ ದೂ.ಸಂ: 0821–2515150 ಅನ್ನು ಸಂಪರ್ಕಿಸಿ.

ಜಿ.ಅಶೋಕ್ ಅವರಿಗೆ ಶುಭಾಶಯಗಳು...



ಹುಟ್ಟುಹಬ್ಬ ಆಚರಿಸಿಕೊಂಡ ವೈಶಾಕ್ ಗ್ರೂಪ್ ಆಫ್ ಹೋಟೆಲ್ಸ್ ಮಾಲೀಕರಾದ ಜಿ.ಅಶೋಕ್ ಅವರನ್ನು ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ರುಚಿ ದಿ ಪ್ರಿನ್ಸ್‌ನ ಉಗ್ರಯ್ಯ, ಶ್ರೀ ಓಂ ಶಕ್ತಿ ಮಾಲೀಕ ಪ್ರವೀಣ್‌ಕುಮಾರ್ ಇನ್ನಿತರರು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.

ನಾನು ದರ್ಶನ್ ನೋಡ್ಬೇಕು, ಅವ್ರನ್ನ ಮದುವೆಯಾಗ್ತೀನಿ!: ಜೈಲಿನ ಮುಂದೆ ಮಹಿಳೆ ಹೈಡ್ರಾಮಾ!

ಬಳ್ಳಾರಿ: ನಟ ದರ್ಶನ್ ನೋಡ್ಬೇಕು, ಮಾತಾಡ್ಬೇಕು ಎಂದು ಜೈಲಿನ ಬಳಿ ಬರುವ ಅಭಿಮಾನಿಗಳು ಬಳ್ಳಾರಿಯಲ್ಲಿಯೂ ಇದ್ದಾರೆ. ಬಳ್ಳಾರಿ ಸೆಂಟ್ರಲ್ ಜೈಲಿಗೆ ಅವರನ್ನು ಶಿಫ್ಟ್ ಮಾಡಿದ ಮೇಲೆ ಅವರ ಕುಟುಂಬ ಸದಸ್ಯರಿಗೆ ಮಾತ್ರ ಭೇಟಿಗೆ ಅವಕಾಶ ನೀಡಲಾಗಿದೆ. ಕಳೆದ ವಾರ ಅವರನ್ನು ಭೇಟಿಯಾಗಿ ಹೋಗಿದ್ದ ಪತ್ನಿ ವಿಜಯ ಲಕ್ಷ್ಮಿ ಇಂದು ಸಾಯಂಕಾಲ ಮತ್ತೆ ಬರಲಿದ್ದಾರೆ ಎಂಬ ಮಾಹಿತಿ ಸಿಕ್ಕಿದೆ.



ಈ ಮಧ್ಯೆ ಬಳ್ಳಾರಿ ಜೈಲಿನ ಬಳಿ ಬೆಂಗಳೂರಿನ ಕೆಂಗೇರಿ ಬಳಿಯ ಅವರ ಅಭಿಮಾನಿ ಮಹಿಳೆ ತಿಂಡಿ ತಿನಿಸುಗಳನ್ನು ತೆಗೆದುಕೊಂಡು ಬಂದು ಹೈಡ್ರಾಮಾ ಮಾಡಿರುವ ಘಟನೆ ನಡೆದಿದೆ. ದರ್ಶನ್ ನೋಡಲು ಜೈಲೊಳಗೆ ಬಿಡಿ, ಅವರ ಕುಟುಂಬ ಸದಸ್ಯರನ್ನು ಮಾತ್ರ ಬಿಡ್ತೀವಿ ಅಂತ ನೀವು ಹೇಳೊದಾದ್ರೆ ಅವರನ್ನು ಮದುವೆಯಾಗಲೂ ರೆಡಿಯಿದ್ದೇನೆ ಎಂದು ಮಹಿಳೆ ಹೇಳಿದಾಗ ಪೊಲೀಸರು ತಬ್ಬಿಬ್ಬಾಗಿದ್ದಾರೆ. ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್‌ರನ್ನ ಬಂಧಿಸಿ ಪರಪ್ಪನ ಅಗ್ರಹಾರ ಜೈಲಿಗೆ ಕಳಿಸಿದಾಗ ದರ್ಶನ್ ನೋಡಲು ಬಂದಿದ್ದ ಮಹಿಳಾ ಅಭಿಮಾನಿ ಲಕ್ಷ್ಮಿಗೆ ದರ್ಶನ್ ನೋಡಲು ಪೊಲೀಸರು ಅವಕಾಶ ಕೊಟ್ಟಿರಲಿಲ್ಲ. ಇದೀಗ ಬೆಂಗಳೂರಿಂದ ಬಳ್ಳಾರಿ ಜೈಲಿಗೆ ಬಂದಿರುವ ಅಭಿಮಾನಿ ಲಕ್ಷ್ಮಿ, ನಾನು ದರ್ಶನ್ ನೋಡಬೇಕು ಎಂದು ಜೈಲು ಸಿಬ್ಬಂದಿ ಜೊತೆ ವಾತ ತೆಗೆದಿದ್ದಾಳೆ.

IN THE HON'BLE COURT OF I ADDITIONAL SENIOR CIVIL JUDGE AND C.J.M. AT MYSURU

O.S.No. 1600/2023

Plaintiffs: Smt.Gunavathi and another.

-VS-

Defendants: Sri.Marappa and others.

PAPER PUBLICATION

Defendant No.4: Smt.M.M.Ponnamma, W/o P.G.Raju, Aged about 70 Years.

Defendant No.5: Sri.P.R.Ganapath, S/o P.G.Raju, Aged about 45 years

Defendant No.6: Sri.P.R.Bellappa, S/o P.G.Raju, Aged about 42 years.

Defendant No.4, 5 and 6 all are Residing At: Aruvathoklu Village and Post, Madikeri Taluk, Bettageri Panchayath, South Kodagu, Kodagu District.

The Plaintiffs has filed the above suit against the Defendants for the relief of Partition and Separate Possession over the suit schedule property. That you are the Defendant No.4, 5 and 6 in the above suit, the notice sent by this Honble Court returned un-served. Hence, you are hereby called upon to appear before the Honble Court in per son or through your counsel on 25.09.2024 at 11.00.A.M. Failing which the above suit will be proceed in accordance with Law, by placing you ex-parte. Given under my hand and seal on this 20 day of July 2024 at Mysuru.

By Order of the Court: Sheristedar, I Additional Senior Civil Judge and C.J.M. at Mysuru.

Counsel for the Plaintiffs: Sri. RAGHU.L., KAR/850/2007. Office at: #581, V.M.Double Road, Opposite to Sri. Guru Hotel, Behind Vijaya Bank, Kuvempunagara, Mysuru-570023.

ಸೆ.15ಕ್ಕೆ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ; ಮೈಸೂರು ಜಿಲ್ಲೆಯಲ್ಲಿ 60 ಕಿ.ಮೀ ಮಾನವ ಸರಪಳಿ





ಮೈಸೂರು ಜಿ.ಪಂ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಅವರು ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಪೂರ್ವಭಾವಿ ಸಭೆ ನಡೆಸಿದರು. ಮತ್ತೊಂದು ಚಿತ್ರದಲ್ಲಿ ಸಭೆಯಲ್ಲಿ ಪಾಲ್ಗೊಂಡಿರುವ ವಿವಿಧ ಸಂಘಟನೆಗಳ ಮುಖಂಡರು ಹಾಗೂ ಅಧಿಕಾರಿಗಳನ್ನು ಕಾಣಬಹುದು.

ಮೈಸೂರು,ಸೆ.5(ಎಂಟಿವೈ)– ಅಂತರರಾಷ್ಟ್ರೀಯ ಪ್ರಜಾಪ್ರಭುತ್ವದ ದಿನಾಚರಣೆ ಅಂಗವಾಗಿ ಸೆ.15ರಂದು ಮೈಸೂರು ಜಿಲ್ಲೆಯಲ್ಲಿ 60 ಕಿ.ಮೀ ಉದ್ದದ ಮಾನವ ಸರಪಳಿ ರಚಿಸಲು ಉದ್ದೇಶಿಸಲಾಗಿದೆ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀ ಕಾಂತರೆಡ್ಡಿ ತಿಳಿಸಿದ್ದಾರೆ.

ಮೈಸೂರಿನ ಜಿ.ಪಂ ಕಚೇರಿಯಲ್ಲಿ ಗುರುವಾರ ನಡೆದ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವದ ದಿನಾ ಚರಣೆಯ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 'ಪ್ರಜಾಪ್ರಭುತ್ವಕ್ಕಾಗಿ ಕರ್ನಾಟಕದಲ್ಲಿ ಮಾನವ ಸರಪಳಿ' ಘೋಷಣೆಯೊಂದಿಗೆ ಸೆ.15ರಂದು ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು ಆಚರಿಸಲಾಗುತಿದೆ. ಜಿಲ್ಲೆಯಲ್ಲಿ 60 ಕಿ.ಮೀ. ಮಾನವ ಸರಪಳಿ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಕೇವಲ ಅಧಿಕಾರಿ, ಸಿಬ್ಬಂದಿ ವರ್ಗ ಮಾತ್ರವಲ್ಲದೆ, ಸಾರ್ವಜನಿಕರು, ಶಾಲಾ–ಕಾಲೇಜು ವಿದ್ಯಾರ್ಥಿಗಳು, ಎನ್‌ಸಿಸಿ ಕೆಡೆಟ್, ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು, ಎನ್‌ಎಸ್‌ಎಸ್, ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು, ಪೌರಕಾರ್ಮಿಕರು, ಗ್ರಾಮ ಪಂಚಾಯಿತಿ ಸದಸ್ಯರು, ಸಂಘ ಸಂಸ್ಥೆಗಳ ಕಾರ್ಯಕರ್ತರು ಸಕ್ರಿಯವಾಗಿ ಪಾಲ್ಗೊಂಡು ಮಾನವ ಸರಪಳಿಯನ್ನು ಯಶಸ್ವಿಗೊಳಿಸಬೇಕು ಎಂದು ಸಲಹೆ ನೀಡಿದರು.

ಮಾನವ ಸರಪಳಿ ಮಾರ್ಗ

ಮೈಸೂರು–ಬೆಂಗಳೂರು ಮುಖ್ಯ ರಸ್ತೆಯ ಸಿದ್ದಲಿಂಗಪುರದಿಂದ ಆರಂಭವಾಗುವ ಮಾನವ ಸರಪಳಿ ಕೊಲಂಬಿಯಾ ಏಷ್ಯಾ ಆಸ್ಪತ್ರೆ ವೃತ್ತ, ಫೌಂಟೇನ್ ವೃತ್ತ, ಅಶೋಕರಸ್ತೆ ಪುರಭವನದ ಮುಂದೆ ಇರುವ ಡಾ.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಕೋಟೆ ಆಂಜನೇಯಸ್ವಾಮಿ ದೇವಾಲಯ ಮುಂಭಾಗದಿಂದ ಹಾರ್ಡಿಂಜ್ ವೃತ್ತ, ಮೃಗಾಲಯ, ಲಲಿತಮಹಲ್ ರಸ್ತೆ ಮೂಲಕ ತಿ.ನರಸೀಪುರ ರಸ್ತೆಯಲ್ಲಿ ಸಾಗಿ ಚಾಮರಾಜನಗರ ಗಡಿವರೆಗೂ ಮಾನವ ಸರಪಳಿ ರಚಿಸಲಾಗುತ್ತದೆ. ಅಲ್ಲಿಂದ ಚಾಮರಾಜನಗರದ ಜಿಲ್ಲಾಡಳಿತದ ಮಾನವ ಸರಪಳಿ ಜೋಡಣೆಯಾಗಲಿದೆ.

ಸೆ.15ರಂದು ಬೆಳಗ್ಗೆ 8.30ರಿಂದ 9.30ರವರೆಗೆ ಮಾನವ ಸರಪಳಿ ರಚಿಸಲಾಗುತ್ತದೆ. ಮೈಸೂರು–ಬೆಂಗಳೂರು ಮುಖ್ಯ ರಸ್ತೆಯ ಸಿದ್ದಲಿಂಗಪುರದಿಂದ ಆರಂಭವಾಗುವ ಮಾನವ ಸರಪಳಿ ಪುರಭವನದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ನಂತರ ಮುಂದುವರೆಯುತ್ತದೆ. ಇದಕ್ಕಾಗಿ 60 ಸಾವಿರಕ್ಕೂ ಹೆಚ್ಚು ಜನರು ಪಾಲ್ಗೊಳ್ಳಲಿದ್ದಾರೆ. ಪ್ರತಿ 100 ಮೀಟರ್‌ಗೆ ಒಬ್ಬರು ಸೆಕ್ಷನ್ ಅಧಿಕಾರಿ, ಪ್ರತಿಯೊಂದು ಕಿಲೋಮೀಟರ್‌ಗೆ ಏರಿಯಾ ಆಫೀಸರ್ ಹಾಗೂ ಪ್ರತಿ ಮಲ್ಟಿಪಲ್ ಕಿಲೋ ಮೀಟರ್‌ಗೆ ಒಬ್ಬರು ತಾಲೂಕು ಅಧಿಕಾರಿಯನ್ನು ನೇಮಿಸಲಾಗುತ್ತದೆ. ಅವರು ತಮ್ಮ ವ್ಯಾಪ್ತಿಗೆ ಜನರನ್ನು ಸೇರಿಸಿ ಸರಪಳಿಯನ್ನು ನಿರ್ಮಿಸುವ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ ಎಂದು ತಿಳಿಸಿದರು.

ಜಿ.ಪಂ ಸಿಇಓ ಕೆ.ಎಂ.ಗಾಯತ್ರಿ ಮಾತನಾಡಿ, ಜಿಲ್ಲೆಯಲ್ಲಿ 60 ಕಿ.ಮೀ ಮಾನವ ಸರಪಳಿಯನ್ನು ನಿರ್ಮಾಣ ಮಾಡಲು ಜಿಲ್ಲೆಯಲ್ಲಿನ ನಿರ್ದಿಷ್ಟ ಅಂತರಕ್ಕೆ ಅಧಿಕಾರಿಗಳನ್ನು ನೇಮಕ ಮಾಡಲಾಗುತ್ತಿದ್ದು, ನೇಮಕಗೊಂಡ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಜನರನ್ನು ಸೇರಿಸಿ ಸರಪಳಿ ನಿರ್ಮಿಸಿ ಕಾರ್ಯಕ್ರಮಕ್ಕೆ ಯಾವುದೇ ರೀತಿಯ ಸಮಸ್ಯೆ ಎದುರಾಗದಂತೆ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು. ಸಭೆಯಲ್ಲಿ ಪಾಲ್ಗೊಂಡಿದ್ದ ವಿವಿಧ ಸಂಘಟನೆಗಳ ಮುಖಂಡರು ಮಾತನಾಡಿ, ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಹಾಗೂ ಅದರ ಅಂಗವಾಗಿ ರಚಿಸಲು ಉದ್ದೇಶಿಸಿರುವ ಮಾನವ ಸರಪಳಿ ಕುರಿತು ಜನರಿಗೆ ಹೆಚ್ಚಿನ ಮಾಹಿತಿ ಒದಗಿಸಲು ಪ್ರಚಾರದ ಅವಶ್ಯಕತೆ ಇದೆ. ಕರಪತ್ರ, ಭಿತ್ತಿಪತ್ರಗಳ ಮೂಲಕ ಎಲ್ಲಾ ವರ್ಗದ ಜನರು ಭಾಗಿಯಾಗುವಂತೆ ಪ್ರೇರೇಪಿಸಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಮುಡಾ ಆಯುಕ್ತ ಎ.ಎನ್. ರಘುನಂದನ್, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ರಂಗೇಗೌಡ ಹಾಗೂ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ತಾಲೂಕು ಮಟ್ಟದ ಅಧಿಕಾರಿಗಳು, ವಿದ್ಯಾಸಂಸ್ಥೆಯ ಮುಖ್ಯಸ್ಥರು ಹಾಗೂ ವಿವಿಧ ಸಂಘ ಸಂಸ್ಥೆಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

ಪಾಂಡವಪುರ, ದೇವೇಗೌಡನಕೊಪ್ಪಲಿನ ಭ್ರೂಣ ಹತ್ಯೆ ಪ್ರಕರಣ

ಮತ್ತೆ 10 ಆರೋಪಿಗಳ ಬಂಧನ

ಪಾಂಡವಪುರ, ಸೆ.5–ಪಟ್ಟಣದ ಆರೋಗ್ಯ ಇಲಾಖೆಯ ವಸತಿ ಗೃಹದಲ್ಲಿ ನಡೆಯುತ್ತಿದ್ದ ಹೆಣ್ಣುಭ್ರೂಣ ಹತ್ಯೆ ಪ್ರಕರಣ ಹಾಗೂ ದೇವೇಗೌಡನಕೊಪ್ಪಲಿನ ಭ್ರೂಣಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪಾಂಡವಪುರ ಪೊಲೀಸರು ಮತ್ತೆ 10 ಮಂದಿ ಆರೋಪಿಗಳನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಆರೋಗ್ಯ ಇಲಾಖೆಯ ವಸತಿ ಗೃಹದಲ್ಲಿ ನಡೆದ ಹೆಣ್ಣುಭ್ರೂಣ ಹತ್ಯೆ ಪ್ರಕರಣ ಹಾಗೂ ದೇವೇಗೌಡನಕೊಪ್ಪಲು ಭ್ರೂಣ ಹತ್ಯೆ ಪ್ರಕರಣಗಳಿಂದ ಒಟ್ಟು 31 ಮಂದಿ ಆರೋಪಿಗಳಿದ್ದು ಇದರಲ್ಲಿ ಈವರೆಗೆ 27 ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಪ್ರಕರಣದ ಉಳಿದ ನಾಲ್ವರು ಆರೋಪಿಗಳಿಗಾಗಿ ಪತ್ತೆಕಾರ್ಯ ನಡೆಯುತ್ತಿದೆ.

ಆರೋಗ್ಯ ಇಲಾಖೆಯ ವಸತಿ ಗೃಹದಲ್ಲಿ ನಡೆದ ಭ್ರೂಣ ಹತ್ಯೆ ಪ್ರಕರಣದಲ್ಲಿ ಒಟ್ಟು 24 ಮಂದಿ ಆರೋಪಿಗಳಿದ್ದು, ಈ ಪೈಕಿ 23 ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ, ಈ ಪ್ರಕರಣದಲ್ಲಿ ಓರ್ವ ಆರೋಪಿ ತಲೆಮರೆಸಿಕೊಂಡಿದ್ದಾನೆ. ದೇವೇಗೌಡನಕೊಪ್ಪಲು ಭ್ರೂಣಹತ್ಯೆ ಪ್ರಕರಣದಲ್ಲಿ ಒಟ್ಟು 7 ಮಂದಿ ಆರೋಪಿಗಳಿದ್ದು ಇದರಲ್ಲಿ 4 ಮಂದಿ ಆರೋಪಿಗಳನ್ನು ಬಂಧಿಸ ಲಾಗಿದೆ, ಉಳಿದ 3 ಮಂದಿ ತಲೆಮರೆಸಿಕೊಂಡಿದ್ದಾರೆ. ಎರಡು ಪ್ರಕರಣಗಳ ಉಳಿದ ಆರೋಪಿಗಳಿಗಾಗಿ ಪೊಲೀಸರು ಬಲೆ ಬೀಸಿದ್ದಾರೆ.

ಭ್ರೂಣಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಚನ್ನರಾಯಪಟ್ಟಣ ಸತ್ಯ ಆಲಿಯಾಸ್ ಲ್ಯಾಬ್ ಸತೀಶ, ಮದ್ದೂರು ತಾಲೂಕಿನ ಹುಣ್ಣನದೊಡ್ಡಿಯ ಕುಮಾರ, ಚನ್ನಪಟ್ಟಣ ತಾಲೂಕಿನ ಬೈರಾಪಟ್ಟಣದ ದಾಸೇಗೌಡ, ಪತ್ನಿ ಶಾರದಮ್ಮ, ಕೆ.ಆರ್.ನಗರ ತಾಲೂಕಿನ ದೊಡ್ಡೇಗೌಡನಕೊಪ್ಪಲಿನ ಪುಟ್ಟರಾಜು, ಪಾಂಡವಪುರ ತಾಲೂಕಿನ ಬುಗದ ಕಾಳೇನಹಳ್ಳಿ ಮಲ್ಲಿ ಕಾರ್ಜುನ, ಚಿನಕುರಳಿಯ ರತ್ನಮ್ಮ, ನಾರಾಯಣಪುರದ ಮೀನಾ, ಮೈಸೂರಿನ ಶ್ರೀರಾಂಪುರದ ಸೋಮಶೇಖರ, ಬೆಂಗಳೂರಿನ ರಾಜಾಜಿನಗರದ ಪಾರ್ವತಿ ಎಂಬ ಆರೋಪಿಗಳನ್ನು ಬಂಧಿಸಿ ಗುರುವಾರ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ ನ್ಯಾಯಾಧೀಶರಾದ ಬಿ.ಪಾರ್ವತಮ್ಮ ಅವರು ಎಲ್ಲಾ ಆರೋಪಿಗಳನ್ನು 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು.



ಕುಮಾರ, ಮಲ್ಲಿಕಾರ್ಜುನ, ಸೋಮಶೇಖರ, ರತ್ನಮ್ಮ, ಮೀನಾ, ಲ್ಯಾಬ್ ಸತೀಶ, ಪುಟ್ಟರಾಜು, ಪಾರ್ವತಿ, ಶಾರದಮ್ಮ, ದಾಸೇಗೌಡ

ಡಾ.ಸರ್ವಪಲ್ಲಿ ರಾಧಾಕೃಷ್ಣನ್ ದೇಶದ ದೊಡ್ಡ ವಿದ್ವಾಂಸ, ತತ್ವಜ್ಞಾನಿ

ಮಂಡ್ಯ,ಸೆ.5–ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರು ದೇಶದ ದೊಡ್ಡ ವಿದ್ವಾಂಸ ಹಾಗೂ ತತ್ವಜ್ಞಾನಿ ಆಗಿದ್ದರು. ಶಿಕ್ಷಕರ ಬಗ್ಗೆ ಅಪಾರವಾದ ಪ್ರೀತಿಯನ್ನು ಇಟ್ಟುಕೊಂಡಿದ್ದರು ಅವರ ಜನ್ಮ ದಿನವನ್ನು ಶಿಕ್ಷಕರ ದಿನಾಚರಣೆಯನ್ನಾಗಿ ಆಚರಿಸಿ ಎಂದು ತಿಳಿಸಿದ ಮಹಾನ್ ವ್ಯಕ್ತಿತ್ವ ಅವರದ್ದಾಗಿದೆ ಎಂದು ಶಾಸಕ ಪಿ.ರವಿಕುಮಾರ್ ಗಣಿಗ ತಿಳಿಸಿದರು.

ಗುರುವಾರ ನಗರದ ಅಂಬೇಡ್ಕರ್ ಭವನದಲ್ಲಿ ನಡೆದ ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣೆ ಹಾಗೂ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಹಾಗೂ ನಿವೃತ್ತ ಶಿಕ್ಷಕರ ಅಭಿನಂದನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರತಿ ವರ್ಷ ಸೆಪ್ಟೆಂಬರ್ 5ರಂದು ಶಿಕ್ಷಕರ ದಿನಾಚರಣೆಯನ್ನು ಮಾಡಲಾಗುತ್ತಿದೆ. ಶಿಕ್ಷಕರ ಆತ್ಮ ಗೌರವಕ್ಕೆ ಭದ್ರ ಬುನಾದಿಯನ್ನು ಹಾಕಿಕೊಟ್ಟಂತ ವ್ಯಕ್ತಿ ಡಾ.ಸರ್ವಪಲ್ಲಿ ರಾಧಾಕೃಷ್ಣನ್‌ರವರು ಎಂದು ಹೇಳಿದರು.

ಪ್ರತಿ ಮಕ್ಕಳ ಎರಡನೇ ತಾಯಿಯಾಗಿ, ಗುರುವಾಗಿ ತಿದ್ದುತ್ತಿರುವ ಹಾಗೂ ಮಕ್ಕಳ ಜೀವನದ ಬಾಳಿಗೆ ಬೆಳಕಾಗಿ, ಯಾವುದೇ ಆಸೆ ಆಕಾಂಕ್ಷೆಗಳನ್ನು ಇಟ್ಟುಕೊಳ್ಳದೇ ಸಮಾಜದಲ್ಲಿ ಒಬ್ಬ ಉತ್ತಮ ಮನುಷ್ಯನನ್ನಾಗಿ ರೂಪಿಸುತ್ತಿರುವವರು ಎಂದರೆ ಶಿಕ್ಷಕರು ಮಾತ್ರ ಆದ್ದರಿಂದ ಇಡೀ ಭಾರತ ದೇಶವು ಶಿಕ್ಷಕರ ದಿನವನ್ನು ಆಚರಿಸುತ್ತಿದ್ದು, ಇಡೀ ಶಿಕ್ಷಕ ವೃಂದಕ್ಕೆ ಶಿಕ್ಷಕರ ದಿನಾಚರಣೆಯ ಶುಭಾಶಯಗಳು ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ವಿದ್ಯಾರ್ಥಿಗಳ ಫಲಿತಾಂಶವನ್ನು ಉತ್ತಮಗೊಳಿಸುವಲ್ಲಿ ಶಿಕ್ಷಕರ ಪರಿಶ್ರಮ ಅತ್ಯವಶ್ಯಕ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅವರು ಸಂದೇಶದ ಮೂಲಕ ಶಿಕ್ಷಕರ ದಿನಾಚರಣೆಗೆ ಎಲ್ಲಾ ಶಿಕ್ಷಕರಿಗೆ ಶುಭ ಹಾರೈಸಿದ್ದು, ಸದರಿ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಫಲಿತಾಂಶ ಉತ್ತಮಗೊಳಿಸಲು ಶಿಕ್ಷಕರ ಪರಿಶ್ರಮ ಅತ್ಯವಶ್ಯಕ ಎಂದು ತಿಳಿಸಿದ್ದಾರೆ ಎಂದು ಹೇಳಿದರು.

ತುಮಕೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದ ಶ್ರೀ ಸ್ವಾಮಿ ವೀರೇಶಾನಂದ ಸರಸ್ವತೀ ಸ್ವಾಮೀಜಿ ಮಾತನಾಡಿ, ಶಿಕ್ಷಕರ ಮುಂದಿರುವ ಸವಾಲುಗಳು ಮತ್ತು ಸರಿಯುತ್ತರ ಎಂಬ ವಿಷಯದ ಬಗ್ಗೆ ಮಾತನಾಡಿ, ಶಿಕ್ಷಕರು ರಾಷ್ಟ್ರದ ಮಹಾನ್ ನಿರ್ಮಾತೃಗಳಾಗಿದ್ದಾರೆ. ಪೋಷಕರು ನಿಮ್ಮನ್ನು ನಂಬಿ ತಮ್ಮ ಮಕ್ಕಳನ್ನು ನಿಮ್ಮ ಬಳಿಗೆ ಕಳುಹಿಸುತ್ತಾರೆ. ಅವರನ್ನು ತಿದ್ದಿ ತೀಡಿ ಉತ್ತಮ ನಾಯಕರನ್ನಾಗಿ ಮಾಡಿ ಎಂದರು.

ಇದೇ ಸಂದರ್ಭದಲ್ಲಿ ಗಣ್ಯರಿಂದ ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರವರ ಭಾವಚಿತ್ರವನ್ನು ಅನಾವರಣಗೊಳಿಸಿ ಪುಷ್ಪಾರ್ಚನೆ ನೆರವೇರಿಸಲಾಯಿತು. ತದನಂತರ ಜಿಲ್ಲಾಮಟ್ಟದ ಉತ್ತಮ ಶಿಕ್ಷಕರಿಗೆ ಹಾಗೂ ನಿವೃತ್ತ ಶಿಕ್ಷಕರುಗಳಿಗೆ ಪ್ರಶಸ್ತಿ ವಿತರಿಸಿ ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಜಿ.ಪಂ. ಸಿಇಓ ಶೇಕ್ ತನ್ವೀರ್ ಆಸೀಫ್, ರೆಡ್‌ಕ್ರಾಸ್ ಸಂಸ್ಥೆಯ ಉಪಾಧ್ಯಕ್ಷೆ ಡಾ.ಮೀರಾಶಿವಲಿಂಗಯ್ಯ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶಂಭುಗೌಡ, ಜಿಲ್ಲಾ ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಪುಟ್ಟರಾಜಯ್ಯ, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷ ಕೆ.ನಾಗೇಶ, ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಜೆ.ವೈ.ಮಂಜುನಾಥ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ಚಿಕ್ಕೇಗೌಡ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಚ್.ಶಿವರಾಮೇಗೌಡ, ಡಯಟ್ ಶಿಕ್ಷಣ ಸಂಸ್ಥೆಯ ಉಪನಿರ್ದೇಶಕ ಪುರುಷೋತ್ತಮ್, ಜಿಲ್ಲಾ ಪ್ರೌಢಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ರಮೇಶ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ದೇವರಾಜು, ಉಪಸ್ಥಿತರಿದ್ದರು.



ಶಿಕ್ಷಕರ ದಿನಾಚರಣೆ ಹಾಗೂ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರಧಾನ ಸಮಾರಂಭ

ಸೆ.14ರಿಂದ ಗಗನಚುಕ್ಕಿ ಜಲಪಾತೋತ್ಸವ

ಉತ್ಸವ, ಲೇಸರ್ ಲೈಟಿಂಗ್ಸ್‌ಗೆ ಸಿಎಂ ಸಿದ್ದರಾಮಯ್ಯ ಚಾಲನೆ

● ಎರಡು ದಿನವೂ ಸಾಂಸ್ಕೃತಿಕ ಕಾರ್ಯಕ್ರಮ, ಉಪಾಹಾರ, ಊಟದ ವ್ಯವಸ್ಥೆ

ಮಳವಳ್ಳಿ,ಸೆ.5– ಜಿಲ್ಲಾಡಳಿತದ ವತಿಯಿಂದ ಮಳವಳ್ಳಿ ತಾಲೂಕಿನ ಶಿವನಸಮುದ್ರದಲ್ಲಿ ಗಗನಚುಕ್ಕಿ ಜಲಪಾತೋತ್ಸವವನ್ನು ಸೆ.14 ಹಾಗೂ 15ರಂದು ಆಯೋಜಿಸಲಾಗಿದೆ ಎಂದು ಶಾಸಕ ಪಿ.ಎಂ.ನರೇಂದ್ರಸ್ವಾಮಿ ತಿಳಿಸಿದರು.

ಗುರುವಾರ ತಾಲೂಕಿನ ಶಿವನಸಮುದ್ರದ ಲಕ್ಷದ್ವೀಪ ಹೋಟೆಲ್‌ನಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಸೆಪ್ಟೆಂಬರ್ 14 ಮತ್ತು 15ರಂದು ಬೆಳಿಗ್ಗೆ 11 ಗಂಟೆಯಿಂದ ರಾತ್ರಿ 10.30ರವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದರು.

ಉತ್ಸವದ ಮೊದಲ ದಿನವಾದ ಸೆ14ರಂದು ಸಂಜೆ 6 ಗಂಟೆಗೆ ಕಾರ್ಯಕ್ರಮಕ್ಕೆ ಮತ್ತು ಲೇಸರ್ ಲೈಟಿಂಗ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದು, ಇವರೊಟ್ಟಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಸಚಿವರಾದ ಹೆಚ್.ಕೆ.ಪಾಟೀಲ್, ಶಿವರಾಜ್ ತಂಗಡಗಿ ಸೇರಿದಂತೆ ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳು ಭಾಗವಹಿಸಲಿದ್ದು, ಶಾಸಕ ನರೇಂದ್ರಸ್ವಾಮಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು ಎಂದರು.

ಗಗನಚುಕ್ಕಿಯನ್ನು ಪ್ರಸಿದ್ಧ ಪ್ರವಾಸಿ ತಾಣವಾಗಿಸಲು ಹಾಗೂ ಹೆಚ್ಚಿನ ಯುವಜನರನ್ನು ಆಕರ್ಷಿಸಲು ಜಲಪಾತೋತ್ಸವದಂತಹ ಕಾರ್ಯಕ್ರಮ ಅವಶ್ಯಕವಾಗಿದೆ. ಸ್ಥಳೀಯ ಕಲಾವಿದರಿಗೆ ಹೆಚ್ಚಿನ ಆದ್ಯತೆ ನೀಡಿದ್ದು, ಎರಡು ದಿನಗಳ ಕಾಲ ನಡೆಯುವ ಗಗನಚುಕ್ಕಿ ಜಲಪಾತೋತ್ಸವದ ಹಿನ್ನೆಲೆ ಆಗಮಿಸುವ ಸಾರ್ವಜನಿಕರಿಗೆ ಕಾರ್ಯಕ್ರಮದ ಜೊತೆಗೆ ಉಚಿತ ಉಪಾಹಾರ, ಮಧ್ಯಾಹ್ನದ ಊಟ ಹಾಗೂ ರಾತ್ರಿ ಊಟದ ವ್ಯವಸ್ಥೆ ಮಾಡಲಾಗಿದೆ. ಪರಿಸರದ ಸೌಂದರ್ಯ ಸವಿಯುವ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಸಹ ಬೆಳಿಗ್ಗೆಯಿಂದ ರಾತ್ರಿಯವರೆಗೆ ಇರುತ್ತದೆ ಎಂದು ತಿಳಿಸಿದರು.

ಗಗನಚುಕ್ಕಿಯನ್ನು ಬೃಹತ್ ಆಕರ್ಷಣೀಯ ಕೇಂದ್ರವನ್ನಾಗಿಸಲು ವಿವಿಧ ಕ್ರೀಡಾ ಚಟುವಟಿಕೆಗಳು ಹಾಗೂ ಇಲ್ಲಿ ಸಿಗುವ ಸೌಲಭ್ಯದೊಂದಿಗೆ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಅನುದಾನಕ್ಕೆ ಪ್ರಸ್ತಾವನೆ ಕಳುಹಿಸಿಕೊಡಲಾಗಿದೆ. ಈ ಯೋಜನೆ ಅನುಷ್ಠಾನಗೊಂಡರೆ ಹಲವಾರು ಸ್ಥಳೀಯರಿಗೆ ಉದ್ಯೋಗ ದೊರೆಯಲಿದೆ ಎಂದರು. ಏಷ್ಯಾದಲ್ಲೇ ಮೊದಲು ಜಲ ವಿದ್ಯುತ್ ಉತ್ಪಾದನೆ ಮಾಡಿದ ಹೆಗ್ಗಳಿಕೆ ಶಿವನಸಮುದ್ರ ವಿದ್ಯುತ್ ಕೇಂದ್ರಕ್ಕೆ ಸಲ್ಲುತ್ತದೆ. ಮೈಸೂರು–ಮಂಡ್ಯ–ಚಾಮರಾಜನಗರ ಜಿಲ್ಲೆಗಳಲ್ಲಿ ಇರುವ ಪ್ರವಾಸಿ ಸ್ಥಳಗಳ ಪ್ರವಾಸಿ ಸರ್ಕ್ಯೂಟ್ ರಚಿಸಬೇಕು. ಇದಲ್ಲದೇ ಸುತ್ತ ನೀರಿರುವ ಐಲ್ಯಾಂಡ್ ಪ್ರದೇಶ ಗಗನಚುಕ್ಕಿಯಲ್ಲಿದ್ದು, ಇಲ್ಲಿ ಸಾಕು ಪ್ರಾಣಿಗಳ ಪ್ರಾಣಿ ಸಂಗ್ರಹಾಲಯ, ಸುತ್ತ ವಾಕಿಂಗ್ ಪಾಥ್ ನಿರ್ಮಿಸಲು ಚಿಂತಿಸಲಾಗುತ್ತಿದ್ದು, ಈ ಬಗ್ಗೆ ಅರಣ್ಯ ಸಚಿವರೊಂದಿಗೆ ಚರ್ಚಿಸಲಾಗುವುದು ಎಂದು ಹೇಳಿದರು.

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ಗಗನಚುಕ್ಕಿ ಜಲಪಾತೋತ್ಸವ ಕಾರ್ಯಕ್ರಮದಲ್ಲಿ ಸ್ಥಳೀಯ ಕಲಾವಿದರಿಗೂ ಆದ್ಯತೆ ನೀಡಲಾಗಿದ್ದು, ಬೆಳಗಿನ ಕಾರ್ಯಕ್ರಮವನ್ನು ಸ್ಥಳೀಯ ಕಲಾವಿದರಿಗೆ ನೀಡಲಾಗಿದೆ. ಖ್ಯಾತ ಸಂಗೀತ ಸಂಯೋಜಕ ರವಿ ಬಸ್ರೂರು ಅವರು ಇದೇ ಮೊದಲ ಬಾರಿಗೆ ಲೈವ್ ಆಗಿ ಸೆ.15 ರಂದು ಕಾರ್ಯಕ್ರಮ ನೀಡುತ್ತಿದ್ದಾರೆ ಎಂದು ಕಾರ್ಯಕ್ರಮದ ವಿವರ ನೀಡಿದರು.

ಸೆ14ರಂದು ಶನಿವಾರ ಬೆಳಿಗ್ಗೆ 11ರಿಂದ ಮಧ್ಯಾಹ್ನ 2 ಗಂಟೆಗೆ ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಮಧ್ಯಾಹ್ನ 2 ಗಂಟೆಯಿಂದ ಸಂಜೆ 4.30 ಗಂಟೆವರೆಗೆ ನಾಗೇಶ್ ಕಂದೇಕಾಲ ಮತ್ತು (ಕಲಾವತಿ ದಯಾನಂದ್, ಅಜಯ್ ವಾರಿಯರ್, ಜೋಗಿ ಸುನಿತಾ, ಚಿಂತನ್ ವಿಕಾಸ್, ಸುಹನಾ ಸೈಯದ್) ಇವರಿಂದ ಭಾವಗೀತೆಗಳು. ಸಂಜೆ 4.30 ರಿಂದ 6 ಗಂಟೆವರೆಗೆ ಪ್ರಖ್ಯಾತ ಕಾಮಿಡಿ ಕಿಲಾಡಿಗಳು ಕಲಾವಿದರಿಂದ ಹಾಸ್ಯ ಮನರಂಜನೆ. ಸಂಜೆ 7 ಗಂಟೆಯಿಂದ ರಾತ್ರಿ 10.30ರವರೆಗೆ ಮಣಿಕಾಂತ್ ಕದ್ರಿ, ಚಂದನ್ ಶೆಟ್ಟಿ, ಹಂಸಿಕಾ ಅಯ್ಯರ್ ತಂಡದವರಿಂದ ನೃತ್ಯ ಮತ್ತು ಸಂಗೀತ ಕಾರ್ಯಕ್ರಮವಿರಲಿದೆ ಎಂದು ತಿಳಿಸಿದರು.

15ರಂದು ಭಾನುವಾರ ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 2 ಗಂಟೆವರೆಗೆ ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು, ಮಧ್ಯಾಹ್ನ 2ರಿಂದ ಸಂಜೆ 4.30 ಗಂಟೆವರೆಗೆ ಪ್ರಖ್ಯಾತ ಜಿ–ಸರಿಗಮಪ ತಂಡದವರಿಂದ ಸಂಗೀತ ಕಾರ್ಯಕ್ರಮ. ಸಂಜೆ 4.30ರಿಂದ 6ಗಂಟೆವರೆಗೆ ಪ್ರಖ್ಯಾತ ಕಲರ್ಸ್–ಗಿಚ್ಚಿ ಗಿಲಿಗಿಲಿ ತಂಡದವರಿಂದ ಹಾಸ್ಯ ಕಾರ್ಯಕ್ರಮ. ಸಂಜೆ 6ರಿಂದ ರಾತ್ರಿ 10.30 ಗಂಟೆವರೆಗೆ ರವಿ ಬಸ್ರೂರ್ ಮತ್ತು ತಂಡದವರಿಂದ ಸಂಗೀತ ರಸಸಂಜೆ ಕಾರ್ಯಕ್ರಮಗಳು ನಡೆಯಲಿವೆ.



ಜಲಪಾತೋತ್ಸವದ ಪೋಸ್ಟರ್ ಬಿಡುಗಡೆ ಮಾಡಿದ ಗಣ್ಯರು

ಟ್ರೋಫಿ ವಿತರಣೆ



ಮೈಸೂರು ರೇಸ್‌ಕ್ಲಬ್‌ನಲ್ಲಿ ಗುರುವಾರ ನಡೆದ ರೇಸ್‌ನಲ್ಲಿ ವಿಜೇತ 'ಮೈಸ್ಟಿಕ್ ಬಾಂಡ್' ಕುದುರೆ ಮಾಲೀಕರಾದ ಪಿ.ಎಂ. ನಾಣಯ್ಯ ಅವರಿಗೆ ದಿ ಅಕಾಡೆಮಿ ನ್ಯೂಸ್ ಪೇಪರ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಕೆ.ಜಿ. ವಿಕ್ರಂ ಮುತ್ತಣ್ಣ ಅವರು 'ದಿ ಸ್ಟಾರ್ ಮೈಸೂರ್' ಟ್ರೋಫಿ ವಿತರಿಸಿದರು.



'ಕ್ಯಾಸ್ಟಿಲ್' ಕುದುರೆಯ ತರಬೇತುದಾರ ರಾಜೇಶ್ ನರೇಡು ಅವರಿಗೆ ಡಾ. ಪ್ರಮೋದಾದೇವಿ ಒಡೆಯರ್ 'ದಿ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮೆಮೋರಿಯಲ್ ಮಲ್ಟಿಮಿಲಿಯನ್ 2024' ಟ್ರೋಫಿ ವಿತರಿಸಿದರು.



'ಓ ಹನ್ನಿಸಿ' ಕುದುರೆಯ ತರಬೇತುದಾರ ರಾಕೇಶ್ ಅವರಿಗೆ ಚದುರಂಗ ಕಾಂತರಾಜ ಅರಸ್ 'ದಿ ಹೆಚ್‌ಹೆಚ್ ಶ್ರೀ ಜಯಚಾಮರಾಜ ಒಡೆಯರ್ ಮೆಮೋರಿಯಲ್' ಟ್ರೋಫಿ ನೀಡಿದರು.



'ಸದರನ್ ಫೋರ್ಸ್' ಕುದುರೆಯ ತರಬೇತುದಾರ ಫರಜ್ ಹರ್ಷದ್ ಅವರಿಗೆ ಶ್ರೀಮತಿ ಭಾಗ್ಯ ಅರಸ್ ಅವರು 'ದಿ ಬಿಕೆ ಕೃಷ್ಣದೇವರಾಜ ಅರಸ್ ಮೆಮೋರಿಯಲ್' ಟ್ರೋಫಿ ವಿತರಿಸಿದರು.

ಕರ್ನಾಟಕ ಬಿಜೆಪಿಗೆ ಎದೆಗಾರಿಕೆಯ ನಾಯಕತ್ವ ಬೇಕಿದೆ, ಹಿಂದೂ ಸಂಘಟನೆಗಳು ಅದನ್ನು ಕೊಡಲು ಸಾಧ್ಯ

ಮಾಜಿ ಸಂಸದ ಪ್ರತಾಪ್ ಸಿಂಹ ಆರ್ಭಟ

ಸುಳ್ಯ, ಸೆ.5– ಪೊಲೀಸರನ್ನೇಕೆ ದೂರುತ್ತೀರಿ? ಪ್ರವೀಣ್ ನೆಟ್ಟಾರ್ ಕೊಲೆಯಾದಾಗ, ಶಿವಮೊಗ್ಗದಲ್ಲಿ ಹರ್ಷ ಮರ್ಡರ್ ಆದಾಗ ಕೊಲೆಗಡುಕರು ಇರುವ ಜಾಗ ಗೊತ್ತಾಗಿತ್ತು. ಪೊಲೀಸರ ಕೈಯಲ್ಲಿ ಬಂದೂಕು ಇತ್ತು. ಅದರಲ್ಲಿ ಕ್ಯಾಟ್ರಿಡ್ಜ್ ಇದ್ದವು, ಪೊಲೀಸರ ಎದೆಯಲ್ಲಿ ಗುಂಡಿಗೆಯೂ ಇತ್ತು. ಆದರೆ, ಟ್ರಿಗರ್ ಎಳೆಯುವಂತೆ ಆದೇಶ ನೀಡಲು ಬಿಜೆಪಿ ಸರ್ಕಾರವನ್ನು ತಡೆದವರು ಯಾರು? ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಪ್ರಶ್ನಿಸಿದರು.



ಕರ್ನಾಟಕಕ್ಕೂ ಒಬ್ಬ ಯೋಗಿ ಆದಿತ್ಯನಾಥ್ ಬೇಕು ಎಂದು ಪ್ರತಾಪ್ ಸಿಂಹ ಆರ್ಭಸಿದರು. ವಿಶ್ವ ಹಿಂದೂ ಪರಿಷತ್ ಮತ್ತು ಸುಳ್ಯ ಮೊಸರು ಕುಡಿಕೆ ಉತ್ಸವ ಸಮಿತಿ ವತಿಯಿಂದ ನಡೆದ ಮೊಸರು ಕುಡಿಕೆ ಉತ್ಸವದಲ್ಲಿ ದಿಕ್ಸೂಚಿ ಭಾಷಣ ಮಾಡಿದರು.

ಪ್ರಸ್ತುತ ರಾಜಕೀಯ ಸನ್ನಿವೇಶದಲ್ಲಿ ಕರ್ನಾಟಕಕ್ಕೆ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ರಂತಹ ನಾಯಕತ್ವ ಬೇಕಾಗಿದೆ. ಅಂತಹ ನಾಯಕತ್ವವನ್ನು ಹಿಂದೂ ಸಂಘಟನೆಗಳು ಸೃಷ್ಟಿಸಬೇಕು. ವಿಚಾರ, ಧರ್ಮಕ್ಕೆ ನಿಷ್ಠೆ ಇರುವ ಎದೆಗಾರಿಕೆ ಇರುವ ನಾಯಕತ್ವ ಬಿಜೆಪಿಗೆಬೇಕು. ಅಲ್ಲದೇ ಧರ್ಮದ ಬಗ್ಗೆ ಪ್ರೀತಿ, ಅಭಿಮಾನ ಇದೆಯೇ ಎಂಬುದನ್ನು ನಾವು ಆತ್ಮ ವಿಮರ್ಶೆ ಮಾಡಬೇಕು. ಧರ್ಮದ ಬಗ್ಗೆ ಇರುವ ಅಭಿಮಾನ ಶೂನ್ಯತೆಯಿಂದ ಹೊರ ಬರಬೇಕು. ವಸುದೈವ ಕುಟುಂಬಕಂ ಎಂದು ಹಿಂದೂ ಸಮಾಜ ಶಾಂತಿ ಮತ್ತು ಸದ್ಭಾವನೆಯನ್ನು ಸದಾ ಬೋಧಿಸಿದೆ. ಜಗತ್ತಿನಲ್ಲಿ ಶಾಂತಿ, ಸದ್ಭಾವನೆ ನೆಲೆಯಾಗಲು ಎಲ್ಲರೂ ಅದನ್ನು ಪಾಲಿಸ ಬೇಕು ಎಂದರು. ಖಗೋಳ ವಿಜ್ಞಾನದ ಬಗ್ಗೆ, ಗ್ರಹಗಳ ಬಗ್ಗೆ, ಸೂರ್ಯನ ಬಗ್ಗೆ ಸಹಸ್ರಾರು ವರ್ಷಗಳ ಹಿಂದೆ ಹಿಂದೂ ಧರ್ಮ ತಿಳಿಸಿದೆ. ನಮ್ಮ ಧರ್ಮ, ಸಂಸ್ಕೃತಿಯ ಬಗ್ಗೆ ನಮ್ಮ ಮಕ್ಕಳಿಗೆ ತಿಳಿಸುವ ಮನಸ್ಸು ಮಾಡಬೇಕು. ನಾವು ಒಟ್ಟಾಗಿದ್ದರೆ ಮಾತ್ರ ನಮ್ಮ ಧರ್ಮ, ಸಂಸ್ಕೃತಿ ಉಳಿಯಲು ಸಾಧ್ಯ. ವೈವಿಧ್ಯತೆಯಲ್ಲಿ ಏಕತೆ ಇರುವುದು ಹಿಂದೂ ಸಮಾಜದಲ್ಲಿ ಮಾತ್ರ ಎಂದು ಬಣ್ಣಿಸಿದರು.

ಮೂರನೇ ಪುಟದಿಂದ

170 ರೂ. ನಗದು ಮುಂದುವರಿಕೆ

ಅನುಮೋದನೆ ನೀಡಲಾಗಿದೆ. ಮೈಸೂರು ಜಿಲ್ಲೆ ವರುಣ ಹೋಬಳಿ ಚೋರನಹಳ್ಳಿ ಗ್ರಾಮದಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಇನ್‌ಕ್ಯೂಬೇಷನ್ ಸೆಂಟರ್, ಕೌಶಲ್ಯ ಅಭಿವೃದ್ಧಿ ಕೇಂದ್ರ, ಮೌಲ್ಯಮಾಪನ ಕೇಂದ್ರ ಮತ್ತು ಇಂಜಿನಿಯರಿಂಗ್ ಪದವೀಧರರಿಗೆ ನವೋದ್ಯಮ ತರಬೇತಿ ನೀಡುವ ಕೇಂದ್ರ ನಿರ್ಮಾಣ ಕಾಮಗಾರಿಗಳ ಪರಿಷ್ಕೃತ ಅಂದಾಜು ಮೊತ್ತ 75.91 ಕೋಟಿ ರೂ.ಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಉದಯೋನ್ಮುಖ ತಂತ್ರಜ್ಞಾನಗಳಲ್ಲಿ ಜಾಗತಿಕ ಸ್ಪರ್ಧಾತ್ಮಕತೆಗೆ ಸ್ಥಳೀಯ ಉದ್ಯೋಗಿಗಳನ್ನು ಕೌಶಲ್ಯಗೊಳಿಸಲು ನಿಪುಣ್ ಕರ್ನಾಟಕ ಉಪಕ್ರಮವನ್ನು 100 ಕೋಟಿ ರೂ. ವೆಚ್ಚದಲ್ಲಿ ಅನುಷ್ಠಾನಗೊಳಿಸುವುದು, ಇದಕ್ಕಾಗಿ ಪ್ರಸಕ್ತ ಸಾಲಿಗೆ 10 ಕೋಟಿ ರೂ. ನೀಡಲಾಗಿದೆ. ಮೊರಾರ್ಜಿ ದೇಸಾಯಿ ವಸತಿ ಶಾಲಾ–ಕಾಲೇಜುಗಳಿಗೆ ಮೂಲಸೌಕರ್ಯ ಕಲ್ಪಿಸಲು 18.54 ಕೋಟಿ ರೂ. ಅಂದಾಜು ಮೊತ್ತಕ್ಕೆ ಅನುಮೋದನೆ ನೀಡಿದೆ. ಬೆಂಗಳೂರಿನ ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಗೆ ರೇಡಿಯೋಥೆರಪಿ ಚಿಕಿತ್ಸಾ ಮತ್ತು ರೋಗ ನಿರೋಧಕ ಉಪಕರಣಗಳನ್ನು 70 ಕೋಟಿ ರೂ.ಗಳಲ್ಲಿ ಖರೀದಿಸಲು ಸಂಪುಟ ಸಮ್ಮತಿಸಿದೆ.

ಮೈಸೂರಲ್ಲಿ 100 ಹಾಸಿಗೆಯ ನೆಫ್ರೋಯುರಾಲಜಿ ಆಸ್ಪತ್ರೆ: ಮೈಸೂರಿನಲ್ಲಿ 40 ಹಾಸಿಗೆ ಸಾಮರ್ಥ್ಯದ ನೆಫ್ರೋಯುರಾಲಜಿ ಆಸ್ಪತ್ರೆಯನ್ನು 100 ಹಾಸಿಗೆಗಳ ಸಾಮರ್ಥ್ಯಕ್ಕೆ ಹೆಚ್ಚಿಸಲು 117.11 ಕೋಟಿ ರೂ. ನೀಡಿದೆ. ಸ್ವಸಹಾಯ ಗುಂಪುಗಳ ಸದಸ್ಯರಾಗಿರುವ ಒಂದು ಲಕ್ಷ ಮಹಿಳೆಯರಿಗೆ ಕಾಫಿ ಮಂಡಳಿ ಸಹಭಾಗಿತ್ವದಲ್ಲಿ ಕಾಫಿ ಉದ್ಯಮಿಗಳಾಗಲು ತರಬೇತಿ ನೀಡುವ ಜೊತೆಯಲ್ಲಿ 25 ಕೋಟಿ ರೂ. ವೆಚ್ಚದಲ್ಲಿ 2,500 ಕಾಫಿ ಕಿಯೋಸ್ಕ್ ತೆರೆಯಲು ಅನುಮತಿ ನೀಡಿದೆ.

ಯಾರಿಗೋ 8 ನಿವೇಶನ

ತಮ್ಮ ಗಮನಕ್ಕೆ ಬಂದಿದ್ದು, ಮಾಹಿತಿ ಹಕ್ಕು ಕಾಯಿದೆಯಡಿ ಮುಡಾದಿಂದ ದಾಖಲೆಗಳನ್ನು ಪಡೆದು ಉಡುಪಿ ಪೊಲೀಸ್ ಠಾಣೆಯಲ್ಲಿ ಪೊನ್ನಪ್ಪ ವಿರುದ್ಧ ತಾವು ಪ್ರಕರಣ ದಾಖಲಿಸಿ ಈ ಸಂಬಂಧ ಮುಡಾ ಆಯುಕ್ತರು ಹಾಗೂ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದಾಗಿ ಹೇಳಿದ ಸುಬ್ರಹ್ಮಣ್ಯ, ಈ ಸಂಬಂಧ ಕ್ರಮ ಜರುಗಿಸುವಂತೆ ಮುಖ್ಯಮಂತ್ರಿಗಳ ಕಾರ್ಯಾಲಯದಿಂದ ಮುಡಾ ಆಯುಕ್ತರಿಗೂ ಸೂಚನೆ ನೀಡಲಾಗಿತ್ತು ಎಂದು ಹೇಳಿದರು. ಮುಡಾದಿಂದ ಭೂ ಸ್ವಾಧೀನವಾಗಿದ್ದ ತಮ್ಮ ಜಮೀನಿಗೆ ಸಂಬಂಧಿಕ ಪೊನ್ನಪ್ಪ ನಕಲಿ ಜಿಪಿಎ ಮೂಲಕ 8.37 ಲಕ್ಷ ಪರಿಹಾರ ಪಡೆದಿದ್ದರೂ, ಆ ಸಂಬಂಧ ತಾವು ಆತನ ವಿರುದ್ಧ ಉಡುಪಿಯಲ್ಲಿ ಪೊಲೀಸರಿಗೆ ದೂರು ಸಲ್ಲಿಸಿ, ಆ ವಿಚಾರವನ್ನು ಮುಡಾ ಆಯುಕ್ತರಿಗೆ ತಿಳಿಸಿದ್ದರೂ 2023ರ ಜೂನ್ ತಿಂಗಳಲ್ಲಿ ಮುಡಾ ಆಯುಕ್ತರಾಗಿದ್ದ ಜಿ.ಟಿ.ದಿನೇಶ್ ಕುಮಾರ್ ಅವರು ತಮ್ಮ ಜಮೀನಿನಲ್ಲಿ ರಸ್ತೆ ನಿರ್ಮಾಣ ಮಾಡಿ, ಜಮೀನನ್ನು ರಸ್ತೆ ನಿರ್ಮಾಣಕ್ಕೆ ಬಳಸಿಕೊಳ್ಳ ಲಾಗಿದೆ ಎಂಬ ಕಾರಣ ನೀಡಿ, ತಮ್ಮ ಜಮೀನಿಗೆ ಸಂಬಂಧವೇ ಇಲ್ಲದ 8 ಮಂದಿಗೆ 50:50 ಅನುಪಾತದಲ್ಲಿ ಪರಿಹಾರವಾಗಿ 8 ನಿವೇಶನ ಗಳನ್ನು ನೀಡಿದ್ದಾರೆ ಎಂದು ಆರೋಪಿಸಿದರು. ಈ ಸಂಬಂಧ ತಾವು ರಾಜ್ಯಪಾಲರು, ಮೈಸೂರು ಜಿಲ್ಲಾಧಿಕಾರಿಗಳು ಹಾಗೂ ಮೈಸೂರು ನಗರ ಪೊಲೀಸ್ ಆಯುಕ್ತರಿಗೆ ಲಿಖಿತ ದೂರು ಸಲ್ಲಿಸಿ ರುವುದಾಗಿ ತಿಳಿಸಿದರು.

ಐದು ಆನೆಗೆ ಸಾಂಪ್ರದಾಯಿಕ ಸ್ವಾಗತ

ಗಜಪಡೆಯ ಮೊದಲ ತಂಡದಲ್ಲಿ ಬಂದ 9 ಆನೆಗಳ ತಾಲೀಮು ನಡೆಯುತ್ತಿದೆ. ಈಗ ಆಗಮಿಸಿರುವ 2ನೇ ತಂಡಕ್ಕೆ ಅರಮನೆ ಮಂಡಳಿ ವತಿಯಿಂದ ಸ್ವಾಗತಿಸಲಾಗಿದ್ದು, ಆನೆಗಳಾದ ಮಹೇಂದ್ರ, ಪ್ರಶಾಂತ, ಸುಗ್ರೀವ, ಹಿರಣ್ಯ ಮತ್ತು ಲಕ್ಷ್ಮಿ ಈ ಐದು ಆನೆಗಳು ಆರೋಗ್ಯವಾಗಿವೆ. ನಾಳೆ(ಆ.6) ಬೆಳಗ್ಗೆ 7.30ಕ್ಕೆ ತೂಕ ಪರೀಕ್ಷೆ ನಡೆಸಿ, ತಾಲೀಮು ನಡೆಸಲಾಗುವುದು ಎಂದು ಮಾಹಿತಿ ನೀಡಿದರು. ಅಡಮನೆ ಮಂಡಳಿ ಉಪ ನಿರ್ದೇಶಕ ಟಿ. ಸುಬ್ರಹ್ಮಣ್ಯ, ಮೈಸೂರು ವೃತ್ತ ಸಿಎಫ್ ಡಾ.ಮಾಲತಿ ಪ್ರಿಯಾ, ಅರಣ್ಯ ಸಂಚಾರಿ ದಳದ ಡಿಸಿಎಫ್ ಡಾ. ಚಂದ್ರಶೇಖರ್ ಪಾಟೀಲ್, ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯ ಡಾ.ಮುಜೀಬ್, ಸಹಾಯಕರಾದ ರಂಗರಾಜು, ಅಕ್ರಂ ಮತ್ತಿತರರಿದ್ದರು.

ನ್ಯಾಯಾಂಗ ನಿಂದನೆಯಲ್ಲ

ಸ್ಪಷ್ಟಪಡಿಸಿದ್ದಾರೆಂದು ರಾಜ್ಯ ಸರ್ಕಾರದ ಹೆಚ್ಚುವರಿ ಅಡ್ವೋಕೇಟ್ ಜನರಲ್ ಎನ್. ದೇವದಾಸರವರು ಪತ್ರ ಮುಖೇನ ತಿಳಿಸಿರುವುದನ್ನು ತಾವು ಸಚಿವ ಸಂಪುಟದ ಸಭೆಯ ಗಮನಕ್ಕೆ ತಂದಿರುವುದಾಗಿ ಸಚಿವರು ವಿವರಿಸಿದರು. ಚಾಮುಂಡೇಶ್ವರಿ ಪ್ರಾಧಿಕಾರದ ಕಾನೂನು ಅಸ್ತಿತ್ವದಲ್ಲಿದ್ದು, ಈ ಕಾನೂನಿನ ಕಲಂಗಳನ್ನು ಜಾರಿಗೆ ತರಲು ಅಥವಾ ಅನುಷ್ಠಾನಗೊಳಿಸಲು ಯಾವುದೇ ನ್ಯಾಯಾಂಗದ ಅಡ್ಡಿಗಳಿಲ್ಲವೆಂದು ಅಡ್ವೋಕೇಟ್ ಜನರಲ್ ಕಚೇರಿಯಿಂದ ತಮಗೆ ಪತ್ರ ಕಳುಹಿಸಲಾಗಿದೆ ಎಂದು ಸಚಿವರು ವಿವರಿಸಿದರು.

ಸ್ಥಿರಾಸ್ತಿಗಳಲ್ಲಿ ಯಾವ ಬದಲಾವಣೆ ಮಾಡದಿರಿ

ಅರ್ಜಿ ವಿಚಾರಣೆ ಇಂದು ಹೈಕೋರ್ಟ್‌ನಲ್ಲಿ ನಡೆಯಿತು. ಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ್ ಚಂದನ್ ಗೌಡರ್ ಅವರಿದ್ದ ಏಕ ಸದಸ್ಯ ಪೀಠವು ದೇವಸ್ಥಾನಕ್ಕೆ ಸಂಬಂಧಿಸಿದ ಚರ ಮತ್ತು ಸ್ಥಿರ ಆಸ್ತಿಗಳನ್ನು ಸದ್ಯ ಯಾವುದೇ ರೀತಿಯಲ್ಲಿ ಬದಲಾವಣೆ ಮಾಡಬಾರದು ಎಂದು ಸರ್ಕಾರಕ್ಕೆ ನಿರ್ದೇಶನ ನೀಡಿತು.

ಮೊನ್ನೆಯಷ್ಟೇ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಪ್ರಥಮ ಸಭೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಡೆಸಿ, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಆಗಬೇಕಿರುವ ಅಭಿವೃದ್ಧಿ ಕಾರ್ಯಗಳು ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚಿಸಿದ್ದರು.

ಚಾಮುಂಡೇಶ್ವರಿ ಕ್ಷೇತ್ರ ಮೈಸೂರು ರಾಜಮನೆತನದ ಖಾಸಗಿ ಆಸ್ತಿ. ಅದರಲ್ಲಿ ಹಸ್ತಕ್ಷೇಪ ಮಾಡುವ ಅಧಿಕಾರ ಸರ್ಕಾರಕ್ಕೆ ಇಲ್ಲ. ಪ್ರಾಧಿಕಾರ ರಚನೆಯಿಂದ ಕ್ಷೇತ್ರದ ಆಸ್ತಿ, ವಜ್ರ ವೈಢೂರ್ಯ ಸರ್ಕಾರದ ಸುಪರ್ದಿಗೆ ಹೋಗಲಿದೆ. ಕ್ಷೇತ್ರದ ಧಾರ್ಮಿಕ ವಿಧಿ–ವಿಧಾನಗಳು, ಸಂಪ್ರದಾಯಗಳಲ್ಲಿ ಸರ್ಕಾರದ ಹಸ್ತಕ್ಷೇಪ ಇರಲಿದೆ. ಚರ ಮತ್ತು ಸ್ಥಿರ ಆಸ್ತಿಗಳಲ್ಲಿ ವೇಗವಾಗಿ ಬದಲಾವಣೆ ತರಲಾಗುತ್ತಿದೆ. ಪ್ರಾಧಿಕಾರ ರಚನೆಗೆ ಮಧ್ಯಂತರ ತಡೆ ನೀಡುವುದರ ಜೊತೆಗೆ ದೇವಾಲಯದ ಸಂಪ್ರದಾಯಗಳಲ್ಲಿ ಸರ್ಕಾರ ಮಧ್ಯ ಪ್ರವೇಶ ಮಾಡಬಾರದು. ಚರ ಮತ್ತು ಸ್ಥಿರ ಆಸ್ತಿಗಳಲ್ಲಿ ಬದಲಾವಣೆ ಮಾಡಬಾರದು ಎಂದು ಅರ್ಜಿದಾರರ ಪರ ವಕೀಲರು ಮನವಿ ಮಾಡಿದರು.

ಸರ್ಕಾರದ ಪರ ಹೆಚ್ಚುವರಿ ಅಡ್ವೋಕೇಟ್ ಜನರಲ್ ಎನ್. ದೇವದಾಸ್ ವಾದ ಮಂಡಿಸಿದರು. ವಾದ–ಪ್ರತಿ ವಾದ ಆಲಿಸಿದ ನ್ಯಾಯಮೂರ್ತಿಗಳು ವಿಚಾರಣೆಯನ್ನು ಸೆ.25ಕ್ಕೆ ಮುಂದೂಡಿದರು. ಅಲ್ಲಿವರೆಗೆ ದೇಗುಲದ ಚರ ಮತ್ತು ಸ್ಥಿರ ಆಸ್ತಿಗಳಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಬಾರದು ಎಂದು ಸರ್ಕಾರಕ್ಕೆ ನಿರ್ದೇಶನ ನೀಡಿದರು.

ಅಧಿಕಾರಿಗಳ ಸಮಿತಿ ರಚನೆ

ಪತ್ರಕರ್ತರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು. ಕೋವಿಡ್ ಪರಿಕರಗಳ ಖರೀದಿಯಲ್ಲಿ ಬಹು ದೊಡ್ಡ ಭ್ರಷ್ಟಾಚಾರ ನಡೆದಿದೆ ಎಂದು ಸಾರ್ವಜನಿಕ ಲೆಕ್ಕಪತ್ರ ಸಮಿತಿ ವರದಿ ನೀಡಿತ್ತು. ಈ ವರದಿಯ ನಂತರ ಮೈಕೆಲ್ ಡಿ. ಕುನ್ಹಾ ನೇತೃತ್ವದಲ್ಲಿ ನ್ಯಾಯಾಂಗ ಆಯೋಗ ರಚನೆಯಾಗಿತ್ತು. ಈ ಆಯೋಗ 7 ಸಂಪುಟದಲ್ಲಿ ವರದಿ ಸಲ್ಲಿಸಿದೆ. ನೂರಾರು ಕೋಟಿ ರೂಪಾಯಿಗಳ ಭ್ರಷ್ಟಾಚಾರ, ಸರ್ಕಾರಿ ಕಡತಗಳ ಕಾಣೆಯಾಗುವಿಕೆ ಬಹು ಪ್ರಮುಖವಾದ ಅಂಶವಾಗಿದೆ ಎಂದು ಸಚಿವರು ವಿವರಿಸಿದರು. ಮುಡಾ ಹಗರಣದ ನಂತರ ಕೋವಿಡ್ ಭ್ರಷ್ಟಾಚಾರವನ್ನು ಪ್ರಸ್ತಾಪಿಸುತ್ತಿರುವುದು ಪ್ರತೀಕಾರದ ಕ್ರಮವಲ್ಲವೇ ಎಂದು ಪತ್ರಕರ್ತರೊಬ್ಬರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು ಮುಡಾ ಎಂಬ ಹೆಸರಿನ ಹಗರಣವಲ್ಲದಿದ್ದರೂ ಪ್ರಸ್ತಾಪವಾಗಿ ಕೇವಲ ಎರಡು ತಿಂಗಳು ಗತಿಸಿದೆ. ಆದರೆ ಕೋವಿಡ್ ಭ್ರಷ್ಟಾಚಾರ ಕುರಿತು ನ್ಯಾಯಾಂಗ ಆಯೋಗ ರಚನೆಯಾಗಿ ಒಂದು ವರ್ಷ ಕಳೆದಿದೆ. ಪ್ರತಿಕಾರದ ಕ್ರಮ ಎಲ್ಲಿಂದ ಬಂತು ಎಂದು ಮರು ಪ್ರಶ್ನೆ ಮಾಡಿದರು. ಕೋವಿಡ್ ಭ್ರಷ್ಟಾಚಾರದ ಕುರಿತು ನ್ಯಾಯಾಂಗ ಆಯೋಗದ ವರದಿ ಕುರಿತು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಚನ್ನಪಟ್ಟಣ ಉಪಚುನಾವಣೆ

ಹಿರಿಯ ಕಾರ್ಯಕರ್ತ ಜಯಮುತ್ತು ಎನ್‌ಡಿಎ ಅಭ್ಯರ್ಥಿ

● ಕಾಂಗ್ರೆಸ್‌ನಿಂದ ಡಿ.ಕೆ.ಸುರೇಶ್ ಕಣಕ್ಕಿಳಿಸಿದರೆ ಈ ಅಭ್ಯರ್ಥಿ ಬದಲು ಸಾಧ್ಯತೆ ● ಜೆಡಿಎಸ್‌ಗೆ ಕ್ಷೇತ್ರ ಬಿಟ್ಟಿಕೊಟ್ಟ ಬಿಜೆಪಿ

ಬೆಂಗಳೂರು: ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಯಾಗಿ ಜೆಡಿಎಸ್‌ನ ಹಿರಿಯ ಕಾರ್ಯಕರ್ತ ಜಯಮುತ್ತು ಕಣಕ್ಕಿಳಿಯುವುದು ಬಹುತೇಕ ಖಚಿತ.

ರಾಜ್ಯದಲ್ಲಿ ತೆರವಾಗಿರುವ ಮೂರು ವಿಧಾನಸಭಾ ಕ್ಷೇತ್ರಗಳಿಗೆ ನವೆಂಬರ್‌ನಲ್ಲಿ ಚುನಾವಣೆ ನಡೆಸಲು ಕೇಂದ್ರ ಚುನಾವಣಾ ಆಯೋಗ ಕಸರತ್ತು ನಡೆಸಿರುವ ಬೆನ್ನಲ್ಲೇ ಚನ್ನಪಟ್ಟಣ ಕ್ಷೇತ್ರವನ್ನು ತನ್ನ ಮಿತ್ರ ಪಕ್ಷವಾದ ಜೆಡಿಎಸ್‌ಗೆ ಬಿಟ್ಟುಕೊಟ್ಟಿದೆ.

ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡುವ ಮೂಲಕ ಉಪಚುನಾವಣೆಯಲ್ಲಿ ಕಣಕ್ಕಿಳಿಯಲು ಭಾರೀ ಹರಸಾಹಸ ಮಾಡಿದ್ದ ಮಾಜಿ ಸಚಿವ, ಬಿಜೆಪಿ ವಿಧಾನಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್ ಅವರಿಗೆ ಭಾರೀ ನಿರಾಸೆಯಾಗಿದೆ. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರಿಂದ ತೆರವಾದ ಕ್ಷೇತ್ರದಲ್ಲಿ ಕಣಕ್ಕಿಳಿಯಲು ಯೋಗೇಶ್ವರ್, ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಅವರ ಮೂಲಕ ಭಾರೀ ಕಸರತ್ತು ನಡೆಸಿದ್ದರು. ಕ್ಷೇತ್ರವನ್ನು ಬಿಜೆಪಿಗೆ ಬಿಟ್ಟುಕೊಡಲು ಕುಮಾರಸ್ವಾಮಿ ಸಾರಾಸಗಟಾಗಿ ನಿರಾಕರಿಸಿದ್ದು ಹಾಗೂ ಪಕ್ಷದ ರಾಜ್ಯ ಉಸ್ತುವಾರಿ ರಾಧಾ ಮೋಹನ್‌ದಾಸ್ ಅಗರ್ವಾಲ್ ಸಹಾ ಜೆಡಿಎಸ್ ಬೆಂಬಲಕ್ಕೆ ನಿಂತಿದ್ದರಿಂದ ಯೋಗೇಶ್ವರ್ ಅವರಿಗೆ ಟಿಕೆಟ್ ಇಲ್ಲ ಎಂಬುದು ಖಚಿತಗೊಂಡಿದೆ.

ದೆಹಲಿಯ ಬಿಜೆಪಿ ವರಿಷ್ಠರು ಕೂಡಾ ಜೆಡಿಎಸ್ ಕ್ಷೇತ್ರವನ್ನು ನಾವು ಪಡೆಯಲು ಸಾಧ್ಯವಿಲ್ಲ, ಮೈತ್ರಿ ಮತ್ತಷ್ಟು ಗಟ್ಟಿಯಾಗಿ ಮುಂದುವರೆಯಬೇಕು ಎಂದರು.

ಶಿಕ್ಷಣ, ಸಂವಿಧಾನ ಸಮಾಜದಲ್ಲಿ ಬದುಕಲು ಇರುವ ಶಕ್ತಿಗಳು


ಮೈಸೂರಿನ ಕರಾಮುವಿ ಕಾವೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಡಾ.ರಾಧಾಕೃಷ್ಣನ್ ಅವರ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಪ್ರೊ.ಪಿ.ಕಣ್ಣನ್ ಉದ್ಘಾಟಿಸಿದರು.

ಮೈಸೂರು, ಸೆ.5(ಜಿಎ)–ಶಿಕ್ಷಣ ಮತ್ತು ಸಂವಿಧಾನದ ಅರಿವು ಮನುಷ್ಯನಿಗೆ ಸಮಾಜದಲ್ಲಿ ಬದುಕಲು ಇರುವ ಶಕ್ತಿಗಳು ಎಂದು ಕರ್ನಾಟಕ ರಾಜ್ಯ ಅಕ್ಕ ಮಹಾದೇವಿ ಮಹಿಳಾ ವಿವಿಯ ಇಂಗ್ಲಿಷ್ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಅಧ್ಯಕ್ಷ ಪ್ರೊ.ಪಿ.ಕಣ್ಣನ್ ತಿಳಿಸಿದರು.

ಕರ್ನಾಟಕ ರಾಜ್ಯ ಮುಕ್ತ ವಿವಿ ವತಿಯಿಂದ ಕಾವೇರಿ ಸಭಾಂಗಣದಲ್ಲಿ ಶಿಕ್ಷಕರ ದಿನಾಚರಣೆ ಪ್ರಯುಕ್ತ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದಲ್ಲಿ ಬದುಕಬೇಕಾದರೆ, ಶಿಕ್ಷಣ ಅತ್ಯಗತ್ಯವಾಗಿ ಬೇಕು. ಶಿಕ್ಷಣದಿಂದಲೇ ನಮ್ಮ ಜ್ಞಾನ ಬೆಳಗುವುದು ಎಂದರು.

ರಾಷ್ಟ್ರಪತಿ, ಪ್ರಧಾನಿ, ಇನ್ನು ಅನೇಕ ಹುದ್ದೆಗಳಲ್ಲಿ ವ್ಯಕ್ತಿಗಳನ್ನು ನೋಡಿರಬಹುದು. ಆದರೆ,ಶಿಕ್ಷಕರು ಹಾಗೂ ಗುರುಗಳನ್ನು ಎಲ್ಲಾ ಹುದ್ದೆಗಳಿಗಿಂತ ಮೀರಿ ಗೌರವ ಕೊಡುತ್ತೇವೆ. ಶಿಕ್ಷಕರು ಶಿಕ್ಷಣವನ್ನು ಮಾತ್ರ ಕಲಿಸುವುದಿಲ್ಲ, ಬದಲಾಗಿ ಬದುಕಿನ ನೈತಿಕ ಮೌಲ್ಯಗಳನ್ನು ತಿಳಿಸುವ ಮಾರ್ಗದರ್ಶಕರೂ ಆಗಿದ್ದಾರೆ ಎಂದು ತಿಳಿಸಿದರು.

ಶಿಕ್ಷಕರು ಸಮಾಜಮುಖಿ ಚಿಂತನೆ ಮಾಡುವುದರ ಜೊತೆಯಲ್ಲಿ, ಮಕ್ಕಳ ಮನಸನ್ನು ಅಧ್ಯಯನ ಮಾಡಿ, ಅವರ ಶೈಲಿಯಲ್ಲಿಯೇ ಪಾಠ–ಪ್ರವಚನ ಮಾಡುವುದರಿಂದ, ಮಕ್ಕಳು ಹಾಗೂ ಶಿಕ್ಷಕರ ಬಾಂಧವ್ಯ ಚೆನ್ನಾಗಿ ಇರುತ್ತದೆ.ಮಕ್ಕಳಿಗೆ ಮೂಢನಂಬಿಕೆಗಳನ್ನು ಬಿತ್ತದೆ, ವೈಜ್ಞಾನಿಕ ಮನೋಭಾವನೆಯನ್ನು ಬಿತ್ತಿ, ಜ್ಞಾನದ ಶಕ್ತಿಗಳಾಗಿ ಬೆಳೆಸಬೇಕು ಎಂದು ಹೇಳಿದರು.

ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರು ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಿ, ರಾಷ್ಟ್ರಪತಿ ಹುದ್ದೆಗೆ ಏರಿ, ಶಿಕ್ಷಕರಿಗೆ ಬೆಲೆ ತಂದು ಕೊಟ್ಟರು. ಅವರ ಜನ್ಮ ದಿನಾಚರಣೆಯು ಶಿಕ್ಷಕರಿಗೆ ಹಬ್ಬದ ವಾತಾವರಣವನ್ನು ಉಂಟು ಮಾಡುತ್ತದೆ.ಅವರ ಮೌಲ್ಯ ಹಾಗೂ ಆದರ್ಶ ನಮಗೆಲ್ಲ ಮಾದರಿಯಾಗಿದೆ ಎಂದರು. ಕಾರ್ಯಕ್ರಮದಲ್ಲಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕುಲಸಚಿವರಾದ ಪ್ರೊ.ಕೆ.ಬಿ.ಪ್ರವೀಣ, ಡಾ.ಹೆಚ್.ವಿಶ್ವನಾಥ್, ಡೀನ್‌ಗಳಾದ ಪ್ರೊ.ಎನ್.ಲಕ್ಷ್ಮಿ, ಪ್ರೊ.ಎಂ.ರಾಮನಾಥಂ ನಾಯುಡು, ಹಣಕಾಸು ಅಧಿಕಾರಿ ಹೆಚ್.ವಿ.ಶ್ವೇತ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಹಾಸ್ಟೆಲ್ ಕೊರತೆಯಿಂದ ಗ್ರಾಮೀಣ ಹೆಣ್ಣು ಮಕ್ಕಳು ಶಿಕ್ಷಣದಿಂದ ವಂಚಿತ

ಮೈಸೂರಲ್ಲಿ ನಡೆದ ಅರ್ಥಪೂರ್ಣ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕ ಕೆ.ಹರೀಶ್‌ಗೌಡ ವಿಷಾದ

ಮೈಸೂರು, ಸೆ.5(ಬಿಎಲ್‌ಯು)– ಹಾಸ್ಟೆಲ್ ಕೊರತೆಯ ಕಾರಣ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ ಎಂದು ಶಾಸಕ ಕೆ.ಹರೀಶ್‌ಗೌಡ ಅಸಮಾಧಾನ ವ್ಯಕ್ತಪಡಿಸಿದರು.

ನಗರದ ಕಲಾಮಂದಿರದಲ್ಲಿ ಇಂದು ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮ ದಿನಾಚರಣೆ ಅಂಗವಾಗಿ ಜಿಲ್ಲಾ ಪಂಚಾಯತ್ ಮತ್ತು ಶಾಲಾ ಶಿಕ್ಷಣ ಇಲಾಖೆ ಸಂಯುಕ್ತವಾಗಿ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳಿಗೆ ಶಿಕ್ಷಣ ಪಡೆಯುವ ಉತ್ಸಾಹವಿದೆ. ಆದರೆ ಹಾಸ್ಟೆಲ್ ಕೊರತೆಯಿಂದ ಶಿಕ್ಷಣ ಮೊಟಕುಗೊಳಿಸಿ ಊರಿಗೆ ವಾಪಸ್ ಆಗುತ್ತಿದ್ದಾರೆ ಎಂದು ಹೇಳಿದರು.

ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಮೈಸೂರು ಜಿಲ್ಲೆಯಲ್ಲಿ ಹೊಸದಾಗಿ 13 ವಿದ್ಯಾರ್ಥಿನಿಲಯ ನಿರ್ಮಾಣಕ್ಕೆ ಅನುಮೋದನೆ ನೀಡಿದೆ. ಈಗಾಗಲೇ ಮೈಸೂರು ನಗರದಲ್ಲಿ 171 ಕೋಟಿ ವೆಚ್ಚದಲ್ಲಿ ಮಹಾರಾಣಿ ಕಾಲೇಜು ಮತ್ತು ಹಾಸ್ಟೆಲ್ ನಿರ್ಮಾಣ ಮಾಡಿದ್ದು, ಸಾವಿರಾರು ವಿದ್ಯಾರ್ಥಿನಿಯರು ಶಿಕ್ಷಣ ಪಡೆಯುತ್ತಿದ್ದಾರೆ ಎಂದು ಹರೀಶ್‌ಗೌಡ ತಿಳಿಸಿದರು.

ಯಾವ ಮಕ್ಕಳೂ ಶಿಕ್ಷಣದಿಂದ ವಂಚಿತರಾಗಬಾರದು, ಪ್ರತಿಯೊಬ್ಬರು ಶಿಕ್ಷಿತರಾಗಬೇಕು. ಈ ಹಿನ್ನೆಲೆಯಲ್ಲಿ ಮಕ್ಕಳನ್ನು ಶಾಲೆಗೆ ಕರೆ ತರುವ ಪ್ರಮುಖ ಜವಾಬ್ದಾರಿಯನ್ನು ಶಿಕ್ಷಕರು ಹೊರಬೇಕು. ಈ ಮೂಲಕ ಸಾಕ್ಷರತೆ ಪ್ರಮಾಣ ಹೆಚ್ಚಾಗಬೇಕು ಎಂದು ಸಲಹೆ ನೀಡಿದರು.

ಶಿಕ್ಷಕರು ನಿದ್ರೆ ಮಾಡಿದರೆ, ದೇಶವೇ ನಿದ್ರೆಗೆ ಜಾರುತ್ತದೆ. ಈ ಹಿನ್ನೆಲೆಯಲ್ಲಿ ಶಿಕ್ಷಕರ ಮೇಲೆ ದೊಡ್ಡ ಜವಾಬ್ದಾರಿ ಇದೆ.



ಮೈಸೂರಿನ ಹಳೇ ಡಿಸಿ ಕಚೇರಿಯಲ್ಲಿ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಶಿಕ್ಷಕರ ಮೆರವಣಿಗೆಗೆ ಚಾಲನೆ ನೀಡಿದರು. (ಬಲಚಿತ್ರ) ಮೈಸೂರಿನ ಕಲಾಮಂದಿರದಲ್ಲಿ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಿದರು.

ಸಿದ್ದರಾಮಯ್ಯ ಸರ್ಕಾರ ಶಿಕ್ಷಣ, ಆರೋಗ್ಯ ಕ್ಷೇತ್ರಕ್ಕೆ ಮನ್ನಣೆ ನೀಡುತ್ತಿಲ್ಲ

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಶಿಕ್ಷಣ ಹಾಗೂ ಆರೋಗ್ಯ ಇಲಾಖೆಗೆ ಹೆಚ್ಚಿನ ಮನ್ನಣೆ ನೀಡುತ್ತಿಲ್ಲ ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಆರೋಪಿಸಿದರು. ಯಾವುದೇ ಸರ್ಕಾರಗಳು ಶಿಕ್ಷಣ ಇಲಾಖೆ ಹಾಗೂ ಆರೋಗ್ಯ ಇಲಾಖೆ ಮರೆತರೆ ಅದೊಂದು ದೊಡ್ಡ ದುರಂತ ಎಂದು ಎಚ್ಚರಿಸಿದರು. ಶಿಕ್ಷಣ ಮತ್ತು ಆರೋಗ್ಯ ಮನುಷ್ಯನ ಜೀವನಕ್ಕೆ ತುಂಬಾ ಅತ್ಯವಶ್ಯವಾಗಿದೆ. ಶಿಕ್ಷಣ ಹಾಗೂ ಆರೋಗ್ಯ ಸೇವೆಯಿಂದ ವಂಚಿತರಾದ ರಾಜ್ಯ ಹಾಗೂ ದೇಶ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ಈ ಹಿನ್ನೆಲೆ ಈ ಎರಡು ಕ್ಷೇತ್ರಕ್ಕೆ ಹೆಚ್ಚಿನ ಮನ್ನಣೆ ನೀಡಿ ಎಂದು ಆಗ್ರಹಿಸಿದ್ದೆ. ಆದರೆ ಇದಕ್ಕೆ ಸಿದ್ದರಾಮಯ್ಯ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಲಿಲ್ಲ ಎಂದು ಆಪಾದಿಸಿದರು. ಯಾವುದೇ ಇಲಾಖೆಯಲ್ಲಿ ರಾಜಕಾರಣ ಮಾಡಲಿ. ಆದರೆ ಶಿಕ್ಷಣ ಮತ್ತು ಆರೋಗ್ಯ ಇಲಾಖೆಯಲ್ಲಿ ರಾಜಕಾರಣ ಮಾಡಬಾರದು. ಈ ಹಿನ್ನೆಲೆ ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಈ ಎರಡೂ ಕ್ಷೇತ್ರಕ್ಕೆ ಪ್ರಾಮುಖ್ಯತೆ ನೀಡಬೇಕು ಎಂದು ವಿಶ್ವನಾಥ್ ಸಲಹೆ ನೀಡಿದರು.


ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಸಾಧಕ ಶಿಕ್ಷಕರು ಹಾಗೂ ನಿವೃತ್ತ ಶಿಕ್ಷಕರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಮಕ್ಕಳನ್ನು ಭವಿಷ್ಯತ್ತಿನ ಉತ್ತಮ ಪ್ರಜೆಗಳನ್ನಾಗಿ ಮಾಡುವ ಹೊಣೆಗಾರಿಕೆ ಶಿಕ್ಷಕರ ಮೇಲಿದೆ ಎಂದು ಅಭಿಪ್ರಾಯಪಟ್ಟರು.

ನಗರದ ಮಹಾರಾಜ ಹಾಗೂ ಮಹಾರಾಣಿ ಕಾಲೇಜಿನಲ್ಲಿ ಉತ್ತಮ ಫಲಿತಾಂಶ ಬರುತ್ತಿದೆ. ಈ ವರ್ಷ ಮಹಾರಾಣಿ ಕಾಲೇಜಿಗೆ ಹೆಚ್ಚುವರಿಯಾಗಿ 300 ವಿದ್ಯಾರ್ಥಿಗಳು ಹೊಸದಾಗಿ ಸೇರ್ಪಡೆಯಾಗಿದ್ದಾರೆ ಎಂದು ಹೇಳಿದರು.

ಉತ್ತಮ ಶಿಕ್ಷಕ ಪ್ರಶಸ್ತಿ: ಈ ವೇಳೆ 33 ಶಿಕ್ಷಕರಿಗೆ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ನೀಡಿ, ಸನ್ಮಾನಿಸಲಾಯಿತು. ಜೊತೆಗೆ ನಿವೃತ್ತ ಶಿಕ್ಷಕರನ್ನು ಸನ್ಮಾನಿಸಿ, ಗೌರವಿಸಲಾಯಿತು. ಇದಕ್ಕೂ ಮೊದಲ ಹಳೆ ಡಿಸಿ ಕಚೇರಿಯಿಂದ ಹೊರಟ ಶಿಕ್ಷಕರ ಮೆರವಣಿಗೆಗೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಚಾಲನೆ ನೀಡಿದರು. ಆದರೆ ತುರ್ತಾಗಿ ಬೆಂಗಳೂರಿಗೆ ತೆರಳಬೇಕಿದ್ದ ಕಾರಣ ಡಾ.ಮಹದೇವಪ್ಪ ಸಮಾರಂಭದಲ್ಲಿ ಗೈರಾಗಿದ್ದರು. ವಿಧಾನಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ವಿವೇಕಾನಂದ, ಸಿ.ಎನ್.ಮಂಜೇಗೌಡ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ, ಡಿಡಿಪಿಐ ಜವರೇಗೌಡ, ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಗೋವಿಂದರಾಜು ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚನೆ ದಸರಾ ಮೇಲೆ ಪರಿಣಾಮ ಬೀರಲ್ಲ

ಸಂಸದ ಯದುವೀರ್ ಒಡೆಯರ್ ಸ್ಪಷ್ಟನೆ

ಮೈಸೂರು, ಸೆ.5(ಎಂಟಿವೈ)– ರಾಜ್ಯ ಸರ್ಕಾರ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚನೆಯಿಂದ ಉಂಟಾಗಿರುವ ಸಂಘರ್ಷ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಮೇಲೆ ಯಾವುದೇ ದುಷ್ಪರಿಣಾಮ ಬೀರಲ್ಲ ಎಂದು ರಾಜವಂಶಸ್ಥ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿ ಬಳಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚನೆಯಿಂದ ರಾಜಮನೆತನ ಮತ್ತು ರಾಜ್ಯ ಸರ್ಕಾರದ ನಡುವೆ ಸಂಘರ್ಷ ಉಂಟಾಗಿರುವುದು ನಿಜ. ಆದರೆ, ಇದು ದಸರಾ ಆಚರಣೆ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಈ ಬಾರಿಯೂ ಸಂಪ್ರದಾಯದಂತೆ ನಾಡಹಬ್ಬ ನಡೆಯಲಿದೆ. ದಸರಾ ಯಶಸ್ಸಿಗೆ ಅರಮನೆ ವತಿಯಿಂದ ಈ ಹಿಂದಿನಂತೆ ಸಹಕಾರ ನೀಡಲಾಗುತ್ತದೆ ಎಂದರು.

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ಕೈಗೊಂಡಿರುವ ಕೆಲವು ನಿರ್ಣಯಗಳಿಗೆ ನಮ್ಮ ಆಕ್ಷೇಪವಿದೆ. ಪ್ರಾಧಿಕಾರದ ರಚನೆ ವಿಚಾರವಾಗಿ ಈಗಾಗಲೇ ಕೋರ್ಟ್ ತಡೆಯಾಜ್ಞೆ ನೀಡಿದ್ದರೂ ಮುಖ್ಯಮಂತ್ರಿ ಸಮ್ಮುಖದಲ್ಲಿ ಕೆಲವು ನಿರ್ಣಯಗಳನ್ನು ತೆಗೆದುಕೊಂಡಿರುವುದು ಕಾನೂನುಬಾಹಿರ. ಆ ನಿರ್ಣಯಗಳು ಊರ್ಜಿತವಾಗುವುದಿಲ್ಲ. ನಾವು ಕಾನೂನಾತ್ಮಕ ಹೋರಾಟ ಮುಂದುವರಿಸುತ್ತೇವೆ. ನಮ್ಮ ಮುಂದಿನ ನಡೆ ಏನು ಎಂದು ಶೀಘ್ರದಲ್ಲೇ ಪ್ರಕಟಿಸಲಾಗುವುದು ಎಂದು ತಿಳಿಸಿದರು.

ಸೆ.10ರಂದು ಶ್ರೀ ವೀರಭದ್ರಸ್ವಾಮಿ ಜಯಂತ್ಯುತ್ಸವ

ಮೈಸೂರು, ಸೆ. 5– ಭಾದ್ರಪದ ಮಾಸದ ಮೊದಲನೆಯ ಮಂಗಳವಾರದಂದು ಶ್ರೀ ವೀರಭದ್ರಸ್ವಾಮಿ ಜನ್ಮತಾಳಿದ ಐತಿಹಾಸಿಕ ಮತ್ತು ಧಾರ್ಮಿಕ ಹಿನ್ನೆಲೆ ಇರುವುದ ರಿಂದ ಇದೇ ಭಾದ್ರಪದ ಮಾಸದ ಮೊದಲನೆಯ ಮಂಗಳವಾರ ಅಂದರೆ, ಸೆ.10ರಂದು ಶ್ರೀ ವೀರಭದ್ರಸ್ವಾಮಿ ಜಯಂತ್ಯುತ್ಸವವನ್ನು ನಾಡಿನಾದ್ಯಂತ ಆಚರಿಸಲಾಗುತ್ತದೆ.

ಸುತ್ತೂರು ಶ್ರೀಕ್ಷೇತ್ರದಲ್ಲಿರುವ ಶ್ರೀ ವೀರಭದ್ರಸ್ವಾಮಿ ದೇವಸ್ಥಾನ (ಗುಡ್ಡ) ಹಾಗೂ ಶ್ರೀಮಠದ ಆವರಣದಲ್ಲಿರುವ ಶ್ರೀ ವೀರಭದ್ರಸ್ವಾಮಿ ದೇವಸ್ಥಾನಗಳಲ್ಲಿ ಸದರಿ ದಿನ ದಂದು ವಿಶೇಷ ಪೂಜೆ ಸಲ್ಲಿಸುವ ಮೂಲಕ ಜಯಂತ್ಯುತ್ಸವವನ್ನು ಆಚರಿಸಲಾಗುತ್ತಿದೆ.

ಗೌರಿ–ಗಣೇಶ ಹಬ್ಬ: ಮೈಸೂರು ಮಾರುಕಟ್ಟೆ ಗಿಜಿಗಿಜಿ...!

ತುಸು ಬೆಲೆ ಏರಿಕೆಯಾದರೂ ಖರೀದಿ ಉತ್ಸಾಹಕ್ಕೆ ಕುಂದಿಲ್ಲ


ಗೌರಿ–ಗಣೇಶ ಹಬ್ಬದ ಹಿನ್ನೆಲೆ ದೇವರಾಜ ಮಾರುಕಟ್ಟೆ ಚಿಕ್ಕಗಡಿಯಾರದ ಸುತ್ತಮುತ್ತಲಿನ ಜನಸ್ತೋಮ

ಮೈಸೂರು, ಸೆ.5(ಎಂಕೆ)– ಮೈಸೂರು ನಗರದಲ್ಲಿ ಗೌರಿ–ಗಣೇಶ ಹಬ್ಬದ ಸಡಗರ–ಸಂಭ್ರಮ ಮಡುಗಟ್ಟಿದ್ದು, ಮಾರುಕಟ್ಟೆಗಳು ಜನಜಂಗುಳಿಯಿಂದ ತುಂಬಿ ತುಳುಕುತ್ತಿವೆ...

ಸಯ್ಯಾಜಿರಾವ್ ರಸ್ತೆಯಲ್ಲಿರುವ ದೇವರಾಜ ಮಾರುಕಟ್ಟೆ, ಚಿಕ್ಕಗಡಿಯಾರ, ಅಗ್ರಹಾರ ಮಾರುಕಟ್ಟೆ, ಎಂಜಿ ರಸ್ತೆ ಮಾರುಕಟ್ಟೆ, ಮಂಡಿ ಮೊಹಲ್ಲಾ ಚಿಕ್ಕ ಮಾರುಕಟ್ಟೆ ಸೇರಿದಂತೆ ಧನ್ವಂತರಿ ರಸ್ತೆ, ಶಿವರಾಂಪೇಟೆ ರಸ್ತೆ ಸೇರಿದಂತೆ ಹಲವೆಡೆ ಗೌರಿ–ಗಣೇಶ ಹಬ್ಬದ ಖರೀದಿ ಭರ್ಜರಿಯಾಗಿದ್ದು, ಎತ್ತ ನೋಡಿದರೂ ಜನಸಂದಣಿಯೇ ಕಾಣುತ್ತಿದೆ. ಅದರಲ್ಲೂ ದೇವರಾಜ ಮಾರುಕಟ್ಟೆ ಒಳಗೆ ಹಾಗೂ ಹೊರಗಿನ ಚಿಕ್ಕಗಡಿಯಾರದ ಸುತ್ತಮುತ್ತ ಜನಸ್ತೋಮವೇ ಕಾಣುತ್ತಿದ್ದು, ಹೆಣ್ಣು ಮಕ್ಕಳಿಗೆ ತವರು ಮನೆಯಿಂದ ನೀಡುವ ಬಾಗಿನ ಪದಾರ್ಥಗಳು, ಹೂವು–ಹಣ್ಣು, ಬಳೆ ಬಾಳೆಹಣ್ಣು, ತೆಂಗಿನಕಾಯಿ ಸೇರಿದಂತೆ ಪೂಜಾ ಸಾಮಗ್ರಿಗಳ ಜೊತೆಗೆ ಬಾಳೆ ಗಿಡ, ಬೆಲ್ಲದ ಹಣ್ಣು, ಗರಿಕೆ ಹುಲ್ಲು ಹಾಗೂ ಇನ್ನಿತರೆ ವಸ್ತುಗಳ ಮಾರಾಟ ಜೋರಾಗಿದೆ.

ತುಸು ಬೆಲೆ ಏರಿಕೆ: ಹಬ್ಬದ ಹಿನ್ನೆಲೆ ಹೂ–ಹಣ್ಣು, ತರಕಾರಿಗಳ ಬೆಲೆಯಲ್ಲಿ ತುಸು ಏರಿಕೆಯಾಗಿದೆ. ಹೂಗಳಲ್ಲಿ ಕನಕಾಂಬರ, ಸೇವಂತಿಗೆ, ಮಲ್ಲಿಗೆ, ಗುಲಾಬಿ, ಚೆಂಡು ಹೂವುಗಳ ಬೆಲೆ ಏರಿಳಿತ ಸಾಮಾನ್ಯವಾಗಿದ್ದು, ಪರಿಸ್ಥಿತಿಗೆ ಅನುಗುಣವಾಗಿ ಬೆಲೆ ಹೆಚ್ಚಾದಂತೆ ಬೇಡಿಕೆಯೂ ಹೆಚ್ಚಿದೆ. ಸೇವಂತಿಗೆ ಹೂ ಒಂದು ಮಾರ್‌ಗೆ 80–100, ಬಿಡಿ ಸೇವಂತಿಗೆ 250 ಗ್ರಾಂಗೆ 50–60, ಸಣ್ಣ ಗುಲಾಬಿ ಬಿಡಿ ಹೂ 250 ಗ್ರಾಂಗೆ 60–70 ರೂನಂತೆ ಮಾರಾಟವಾಗುತ್ತಿದೆ.

ತರಕಾರಿಗಳಲ್ಲಿ ಕ್ಯಾರೆಟ್ ಕೆಜಿಗೆ 60–80 ರೂ. ಬಿನಿಸ್ ಕೆಜಿ 80–100, ಬಿಟ್ರೋಟ್ 50–60, ಟೊಮ್ಯಾಟೊ 20–30, ಈರುಳ್ಳಿ 30–40, ಬದನೆಕಾಯಿ, ಹಿರೇಕಾಯಿ, ಹೂ ಕೋಸು, ಬೂದು ಕುಂಬಳ, ನುಗ್ಗೆಕಾಯಿ ಇನ್ನಿತರೆ ತರಕಾರಿಗಳ ಬೆಲೆ ಯಥಾಸ್ಥಿತಿಯಲ್ಲಿದೆ.

ಹೊಸ ಆಕರ್ಷಣೆ: ಗೌರಿ–ಗಣೇಶ ಹಬ್ಬದ ಪೂಜಾ ಸಾಮಗ್ರಿಗಳ ಪ್ಲಾಸ್ಟಿಕ್‌ನಿಂದ ತಯಾರಿಸಿದ ಅಲಂಕಾರಿಕ ಹೂವು, ಬಾಗಿಲ ತೋರಣಗಳು ಆಕರ್ಷಕ ವಿನ್ಯಾಸಗಳ, ಗಣಪತಿ ಚಿತ್ರವುಳ್ಳ ಕೇಸರಿ ಬಾವುಟಗಳು, ಶಾಲುಗಳಿಗೆ ಬಾರೀ ಬೇಡಿಕೆ ಇದ್ದು, ಹೊಸ ಆಕರ್ಷಣೆಯಾಗಿ ಕಂಡು ಬಂದವು. ಅಲ್ಲದೆ ಮಹಿಳೆಯರು, ಯುವತಿಯರು ಗೌರಿಮೂರ್ತಿಯನ್ನು ಚೌಕಾಸಿ ದರದಲ್ಲಿ ಖರೀದಿಸುತ್ತಿದ್ದು, ಕುಟುಂಬ ಸಮೇತರಾಗಿ ಬಂದಿದ್ದ ಜನರು ಪೂಜಾ ಸಾಮಗ್ರಿಗಳ ಖರೀದಿಯ ಜೊತೆಗೆ ಹೊಸಬಟ್ಟೆಗಳನ್ನೂ ಖರೀದಿಸುತ್ತಿರುವುದು ಸಾಮಾನ್ಯವಾಗಿತ್ತು.

ವಾಹನಗಳ ದಟ್ಟಣೆ, ಜನಾವೃತ..!: ಗೌರಿ–ಗಣೇಶ ಹಬ್ಬದ ಮುನ್ನಾ ದಿನವೇ ಚಿಕ್ಕಗಡಿಯಾರದ ಸುತ್ತಲೂ ಜನಾವೃತವಾಗಿದ್ದು, ವಾಹನಗಳ ಸಂಚಾರಕ್ಕೆ ತೀವ್ರ ತೊಂದರೆಯಾಗಿತ್ತು. ಶಿವರಾಂಪೇಟೆ ಕಡೆಯಿಂದ ಚಿಕ್ಕಗಡಿಯಾರದ ಕಡೆಗೆ, ಕೆ.ಆರ್.ವೃತ್ತದಿಂದ ಆಯುರ್ವೇದಿಕ್ ವೃತ್ತದವರೆಗಿನ ಸಯ್ಯಾಜಿರಾವ್ ರಸ್ತೆ, ಧನ್ವಂತರಿ ರಸ್ತೆ, ಡಿ.ದೇವರಾಜ ಅರಸು ರಸ್ತೆ ವಾಹನಗಳ ದಟ್ಟಣೆ ಹೆಚ್ಚಾಗಿತ್ತು. ಇದರ ನಡುವೆ ಸಂಜೆ ವೇಳೆ ರಾಜಮಾರ್ಗದಲ್ಲಿ ಸಾಗುವ ದಸರಾ ಆನೆಗಳು ನೋಡುಗರ ಕಣ್ಣಿಗೆ ಮುದ ನೀಡುತ್ತಿರುವುದು ವಿಶೇಷವಾಗಿದೆ.

ಹಿಜಾಬ್ ನಿರ್ಬಂಧಿಸಿದ್ದ ಶಿಕ್ಷಕನ ಪ್ರಶಸ್ತಿ ತಡೆ ಹಿಡಿದ ಸರ್ಕಾರದ ವಿರುದ್ಧ ಕಿಡಿ

ಮೈಸೂರು, ಸೆ.5(ಎಂಟಿವೈ)– ಹಿಜಾಬ್ ನಿರ್ಬಂಧಿಸಿದ್ದ ಏಕೈಕ ಕಾರಣ ಮುಂದಿಟ್ಟುಕೊಂಡು ಶಿಕ್ಷಣ ಇಲಾಖೆ ಉಡುಪಿ ಕುಂದಾಪುರದ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಬಿ.ಜಿ.



ರಾಮಕೃಷ್ಣ ಅವರಿಗೆ ರಾಜ್ಯಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರಕಟಿಸಿ, ನಂತರ ತಡೆ ಹಿಡಿದಿರುವುದು ಖಂಡನೀಯ ಎಂದು ಸಂಸದ ಯದವೀರ್ ಒಡೆಯರ್ ಹಾಗೂ ಶಾಸಕ ಟಿ.ಎಸ್.ಶ್ರೀವತ್ಸ ಕಿಡಿಕಾರಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಸಂಸದ ಯದುವೀರ್ ಮಾತನಾಡಿ, ಶಿಕ್ಷಕರು ಎಲ್ಲ ವಿದ್ಯಾರ್ಥಿಗಳನ್ನು ಸಮಾನತೆಯ ದೃಷ್ಟಿಯಿಂದ ಕಾಣುತ್ತಾರೆ. ಹೀಗಾಗಿ ಎಲ್ಲರೂ ಸಮವಸ್ತ್ರ ಧರಿಸಿಕೊಂಡು ಬನ್ನಿ ಎಂದು ಹೇಳಿದ್ದಾರೆ. ಆದರೆ ಇದನ್ನೇ ಮುಂದಿಟ್ಟುಕೊಂಡು ಪ್ರಕಟಿಸಿದ್ದ ಪ್ರಶಸ್ತಿಯನ್ನು ತಡೆಹಿಡಿದಿರುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ನಮ್ಮನ್ನು ಕೋಮುವಾದಿ ಎನ್ನುತ್ತಾರೆ. ಹಿಜಾಬ್ ಧರಿಸಿಕೊಂಡು ಶಾಲೆಗೆ ಬರಬೇಡಿ ಎಂದು ಹೇಳಿದ್ದ ಶಿಕ್ಷಕರಿಗೆ ಪ್ರಶಸ್ತಿ ತಡೆ ಹಿಡಿದಿದ್ದಾರೆ. ಈ ಮೂಲಕ ನಿಜವಾದ ಕೋಮುವಾದಿ ಯಾರು ಎಂದು ತೋರಿಸಿದೆ. ಈ ಕೂಡಲೇ ಪ್ರಶಸ್ತಿ ತಡೆದಿರುವುದನ್ನು ರದ್ದು ಮಾಡಬೇಕು. ಆ ಶಿಕ್ಷಕರಿಗೆ ಪ್ರಶಸ್ತಿ ಕೊಡಬೇಕು, ಇಲ್ಲದಿದ್ದರೆ ನಾವು ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಗಣೇಶ ಪ್ರತಿಷ್ಠಾಪನೆಗೆ ಪೊಲೀಸರ ನಿರ್ಬಂಧ ಸರಿಯಲ್ಲ

ಮೈಸೂರು, ಸೆ.5(ಎಂಟಿವೈ)– ಗಣೇಶ ಹಬ್ಬದ ಅಂಗವಾಗಿ ವಿವಿಧೆಡೆ ಗಣೇಶನ ಮೂರ್ತಿಗಳ ಪ್ರತಿಷ್ಠಾಪನೆ ಪೊಲೀಸರು ನಿರ್ಬಂಧ ಹೇರುತ್ತಿರುವುದು ಸರಿಯಲ್ಲ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು.



ಗಣಪತಿ ಮೂರ್ತಿಗಳನ್ನು ಸಾರ್ವಜನಿಕರಿಗೆ ತೊಂದರೆ ಆಗದಂತೆ ಪ್ರತಿಷ್ಠಾಪನೆ ಮಾಡಬೇಕು. ವಿದ್ಯುತ್ ಕಂಬಗಳಿಂದ ಅಕ್ರಮವಾಗಿ ಸಂಪರ್ಕ ಪಡೆದುಕೊಳ್ಳಬಾರದು. ಇದನ್ನು ಹೊರತುಪಡಿಸಿ, ಪೊಲೀಸರು ಮೂರ್ತಿ ಪ್ರತಿಷ್ಠಾಪನೆಗೆ ಅಡ್ಡಿಪಡಿಸಿದರೆ ನನ್ನ ಗಮನಕ್ಕೆ ತನ್ನಿ. ಜನರು ಮುಕ್ತವಾಗಿ ಗಣಪತಿ ಹಬ್ಬ ಆಚರಿಸಲು ಅನುವು ಮಾಡಿಕೊಡಬೇಕು. ಈ ಹಿಂದಿನಿಂದಲೂ ಗಣೇಶ ಹಬ್ಬವನ್ನು ಸಂಭ್ರಮದಿಂದ, ಶಾಂತಿಯುತವಾಗಿ ಆಚರಿಸಿಕೊಂಡು ಬರಲಾಗುತ್ತಿದೆ. ಆದರೆ, ಈ ವರ್ಷ ಗಣೇಶ ಮೂರ್ತಿ ಪ್ರತಿಷ್ಠಾಪನೆಗೆ ಅಡ್ಡಿಪಡಿಸುತ್ತಿರುವುದು ಖಂಡನೀಯ. ಹಬ್ಬ ಆಚರಿಸಲು ಪೊಲೀಸರು ತೊಂದರೆ ನೀಡಬಾರದು ಎಂದು ಸೂಚಿಸಿದರು.

ದೇಶ - ವಿದೇಶ

ಗಡಿಪಾರಿಗೆ ಬಾಂಗ್ಲಾ ಮನವಿ ಸಲ್ಲಿಸುವವರೆಗೂ ಹಸೀನಾ ಭಾರತದಲ್ಲಿ ಸುಮ್ಮನಿರಬೇಕು

ಢಾಕಾ: ಭಾರತದಲ್ಲಿರುವ ಶೇಖ್ ಹಸೀನಾ ಅಲ್ಲಿ ಕುಳಿತುಕೊಂಡು ರಾಜಕೀಯ ಹೇಳಿಕೆಗಳನ್ನು ನೀಡುವುದು ಉಭಯ ದೇಶಗಳಿಗೂ ಅನಾನುಕೂಲತೆ ಉಂಟು ಮಾಡುತ್ತದೆ. ಆದ್ದರಿಂದ ಬಾಂಗ್ಲಾದೇಶ ಅವರ ಗಡಿಪಾರಿಗೆ ಮನವಿ ಸಲ್ಲಿಸುವವರೆಗೂ ಶೇಖ್ ಹಸೀನಾ ಭಾರತದಲ್ಲಿ ಸುಮ್ಮನಿರಬೇಕು ಎಂದು ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನಸ್ ಹೇಳಿದ್ದಾರೆ.



ಭಾರತದಲ್ಲಿ ಆಕೆಯ ನಿಲುವುಗಳು ಯಾರಿಗೂ ಹಿತಕರವಾಗಿಲ್ಲ. ಏಕೆಂದರೆ, ಆಕೆ ಭಾರತದಲ್ಲಿದ್ದಾರೆ ಮತ್ತು ಕೆಲವೊಮ್ಮೆ ಮಾತನಾಡುತ್ತಾರೆ. ಇದು ಸಮಸ್ಯಾತ್ಮಕವಾಗಿದೆ. ಆಕೆ ಸುಮ್ಮನಿದ್ದರೆ, ನಾವು ಅದನ್ನು ಮರೆತುಬಿಡುತ್ತಿದ್ದೆವು. ಶೇಖ್ ಹಸೀನಾ ತಮ್ಮದೇ ಆದ ಪ್ರಪಂಚದಲ್ಲಿ ಇರುತ್ತಿದ್ದ ಹಿನ್ನೆಲೆಯಲ್ಲಿ ಜನರೂ ಆಕೆಯನ್ನು ಮರೆತುಬಿಡುತ್ತಿದ್ದರು. ಆದರೆ ಆಕೆ ಮಾತನಾಡುತ್ತಾರೆ. ಅದು ಯಾರಿಗೂ ಇಷ್ಟವಾಗುವುದಿಲ್ಲ ಎಂದು ಹೇಳಿದ್ದಾರೆ. ಯೂನಸ್ ಅವರು ಆ.13 ರಂದು ಹಸೀನಾ ಅವರ ಹೇಳಿಕೆಯನ್ನು ಉಲ್ಲೇಖಿಸಿ ಈ ಹೇಳಿಕೆ ನೀಡಿದ್ದಾರೆ. ಆ.13ರ ಹೇಳಿಕೆಯಲ್ಲಿ ಶೇಖ್ ಹಸೀನಾ, ನ್ಯಾಯಕ್ಕಾಗಿ ಒತ್ತಾಯಿಸಿದ್ದರು.

ರೋಗಿ ಪತಿಯನ್ನು ಆಚೆ ತಳ್ಳಿ ಆಂಬುಲೆನ್ಸ್‌ನಲ್ಲೇ ಲೈಂಗಿಕ ಕಿರುಕುಳ

ಗೋರಖ್‌ಪುರ: ಪತಿಯನ್ನು ಆಸ್ಪತ್ರೆಗೆ ಕರೆದೊಯ್ಯುತ್ತಿದ್ದ ಮಹಿಳೆಗೆ ಆಂಬುಲೆನ್ಸ್‌ನಲ್ಲೇ ಲೈಂಗಿಕ ಕಿರುಕುಳ ನೀಡಿದ ಘಟನೆ ಉತ್ತರ ಪ್ರದೇಶದಲ್ಲಿ ನಡೆದಿದೆ.



ಆಂಬುಲೆನ್ಸ್ ಚಾಲಕ ಮತ್ತು ಆತನ ಸಹಾಯಕ ಈ ಕೃತ್ಯವೆಸಗಿದ್ದಾರೆ. ಆಕೆ ವಿರೋಧಿಸಿದಾಗ ಪತಿಯ ಆಕ್ಸಿಜನ್ ಸಂಪರ್ಕ ಕಡಿತಗೊಳಿಸಿದ್ದಾರೆ. ನಂತರ ರೋಗಿ ಪತಿಯನ್ನು ವಾಹನದಿಂದ ಹೊರಗೆ ತಳ್ಳಿದ್ದಾರೆ. ಉತ್ತರ ಪ್ರದೇಶದ ಸಿದ್ಧಾರ್ಥನಗರ ಜಿಲ್ಲೆಯಲ್ಲಿ ಈ ಘಟನೆ ನಡೆದಿದ್ದು, ಮಹಿಳೆ ಪತಿ ಗೋರಖ್‌ಪುರ ವೈದ್ಯಕೀಯ ಕಾಲೇಜಿನಲ್ಲಿ ಚಿಕಿತ್ಸೆ ವೇಳೆ ಸಾವನ್ನಪ್ಪಿದ್ದಾರೆ. ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ತನ್ನ ಪತಿಯನ್ನು ಸಮೀಪದ ಬಸ್ತಿ ವೈದ್ಯಕೀಯ ಕಾಲೇಜಿಗೆ ಮಹಿಳೆ ಕರೆದುಕೊಂಡು ಹೋಗಿದ್ದರು. ಅವರ ಸ್ಥಿತಿ ಹದಗೆಟ್ಟಿದ್ದರಿಂದ ಆಸ್ಪತ್ರೆಯ ವೈದ್ಯರು ಅವರನ್ನು ಬೇರೆ ಆಸ್ಪತ್ರೆಗೆ ಕಳುಹಿಸಿದ್ದಾರೆ. ರೋಗಿ ಪತಿಯನ್ನು ಆಂಬುಲೆನ್ಸ್‌ನಲ್ಲಿ ಕರೆದೊಯ್ಯುವಾಗ, ಮಹಿಳೆಯನ್ನು ತನ್ನ ಮುಂದೆ ಕುಳಿತುಕೊಳ್ಳುವಂತೆ ಚಾಲಕ ಒತ್ತಾಯಿಸಿದನು. ಜೊತೆಗೆ ಅವನ ಸಹಾಯಕನೊಂದಿಗೆ ಸೇರಿಕೊಂಡು ಲೈಂಗಿಕ ಕಿರುಕುಳ ನೀಡಿದ್ದಾನಂತೆ. ಆಕೆ ಪ್ರತಿಭಟಿಸಲು ಯತ್ನಿಸಿದಾಗ, ಅವರು ಪತಿಗೆ ನೀಡಿದ್ದ ಆಮ್ಲಜನಕ ಪೂರೈಕೆಯನ್ನು ನಿಲ್ಲಿಸಿ, ಆಂಬುಲೆನ್ಸ್‌ನಿಂದ ಹೊರಕ್ಕೆ ಎಸೆದರು.

ಸುಡಾನ್‌ನಲ್ಲಿ ಭೀಕರ ಆಹಾರ ಕ್ಷಾಮ: ಎಲೆ, ಕೀಟ ತಿಂದು ಜೀವನ ಸಾಗಿಸುತ್ತಿರುವ ಜನ

ಖಾರ್ಟೂಮ್: ಸುಡಾನ್ ಈ ಹಿಂದೆ ಎಂದೂ ಕಾಣದಷ್ಟು ಭೀಕರ ಹಸಿವಿನ ಬರ ಎದುರಿಸುತ್ತಿದೆ ಎಂದು ಮೂರು ಅಂತಾರಾಷ್ಟ್ರೀಯ ನೆರವು ಸಂಸ್ಥೆಗಳು ಗಂಭೀರ ಎಚ್ಚರಿಕೆ ನೀಡಿವೆ. ಸುಡಾನ್ ಬಗ್ಗೆ ಅಂತಾರಾಷ್ಟ್ರೀಯ ಸಮುದಾಯದ ಸಂಪೂರ್ಣ ನಿರ್ಲಕ್ಷ್ಯದ ಮಧ್ಯೆ ಅಲ್ಲಿನ ಜನ ಹಸಿವಿನಿಂದ ಸಾಯುತ್ತಿದ್ದಾರೆ ಎಂದು ನಾರ್ವೇಜಿಯನ್ ನಿರಾಶ್ರಿತರ ಮಂಡಳಿ, ಡ್ಯಾನಿಶ್ ನಿರಾಶ್ರಿತರ ಮಂಡಳಿ ಮತ್ತು ಮರ್ಸಿ ಕಾರ್ಪ್ಸ್ ಜಂಟಿ ಹೇಳಿಕೆಯಲ್ಲಿ ತಿಳಿಸಿವೆ.



ಇತ್ತೀಚಿನ ತಿಂಗಳುಗಳಲ್ಲಿ ಸುಡಾನ್ ಜನರು ಅನುಭವಿಸಿದ ಯಾತನೆಯ ಮಟ್ಟವನ್ನು ಕೇವಲ ಪದಗಳಿಂದ ವ್ಯಕ್ತಪಡಿಸಲು ಸಾಧ್ಯವಿಲ್ಲ ಎಂದು ಮಾನವೀಯ ನೆರವು ಸಂಘಟನೆಗಳು ತಿಳಿಸಿವೆ. ಸುಡಾನ್ ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚು ಅಂದರೆ 25 ದಶಲಕ್ಷಕ್ಕೂ ಹೆಚ್ಚು ಜನ ತೀವ್ರ ಆಹಾರ ಕೊರತೆ ಎದುರಿಸುತ್ತಿದ್ದಾರೆ. ಅನೇಕ ಕುಟುಂಬಗಳು ದಿನಕ್ಕೆ ಒಂದೇ ಒಂದು ಊಟ ಮಾಡಿ ಬದುಕುವಂತಾಗಿದೆ. ಅಲ್ಲದೇ ಇನ್ನೂ ಕೆಲ ಕುಟುಂಬಗಳು ಎಲೆ ಅಥವಾ ಕೀಟಗಳನ್ನು ತಿಂದು ಬದುಕುವ ಸ್ಥಿತಿ ನಿರ್ಮಾಣವಾಗಿದೆ ಎಂದು ಮಾನವೀಯ ನೆರವು ಸಂಘಟನೆಗಳು ಕಳವಳ ವ್ಯಕ್ತಪಡಿಸಿವೆ.

ಹನಿಟ್ರ್ಯಾಪ್‌ಗೆ ಸಿಲುಕಿ ಕೋಟಿ ರೂ. ಕಳೆದುಕೊಂಡ ನಿವೃತ್ತ ಅಧಿಕಾರಿ

ಭೋಪಾಲ್: ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್‌ನ ನಿವೃತ್ತ ಉನ್ನತ ಅಧಿಕಾರಿ, ಹನಿಟ್ರ್ಯಾಪ್‌ಗೆ ಒಳಗಾಗಿದ್ದಾರೆ ಮತ್ತು ಅದರಿಂದ ಪಾರಾಗಲು ಭಾರೀ ಮೊತ್ತದ ಹಣ ಪಾವತಿಸಿರುವುದು ಬೆಳಕಿಗೆ ಬಂದಿದೆ.



ಹನಿಟ್ರ್ಯಾಪ್ ತಂಡವು ಹೋಟೆಲ್ ಒಂದರಲ್ಲಿ ರಷ್ಯಾ ಮೂಲದ ಮಹಿಳೆ ಜೊತೆಗೆ ನಿವೃತ್ತ ಅಧಿಕಾರಿಯ 27ಕ್ಕೂ ಅಧಿಕ ಅಶ್ಲೀಲ ವಿಡಿಯೋಗಳನ್ನು ಚಿತ್ರೀಕರಣ ಮಾಡಿಕೊಂಡಿದೆ. ನಂತರ ಆ ವಿಡಿಯೋಗಳನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡುವುದಾಗಿ ಅಧಿಕಾರಿಯನ್ನು ಬ್ಲಾಕ್‌ಮೇಲ್ ಮಾಡಿದ್ದಾರೆ. ಬ್ಲಾಕ್‌ಮೇಲ್‌ಗೆ ಒಳಗಾದ ನಿವೃತ್ತ ಅಧಿಕಾರಿ 1 ಕೋಟಿ ಹಣವನ್ನು ಆ ತಂಡಕ್ಕೆ ನೀಡಿದ್ದಾರೆ. ಬ್ಲಾಕ್‌ಮೇಲ್ ತಂಡದ ಒಬ್ಬ ಸದಸ್ಯ ತಾನು ಮಧ್ಯಪ್ರದೇಶದ ಅಪರಾಧ ವಿಭಾಗದ ಅಧಿಕಾರಿ ಎಂದು ನಿವೃತ್ತ ಅಧಿಕಾರಿಯನ್ನು ಬಂಧಿಸುವ ಬೆದರಿಕೆಯನ್ನು ಹಾಕಿದ್ದಾನೆ. ಹನಿಟ್ರ್ಯಾಪ್ ತಂಡದಿಂದ ಬೆದರಿಕೆಗಳು ಹೆಚ್ಚಾದ ಬೆನ್ನಲ್ಲೆ ನಿವೃತ್ತ ಅಧಿಕಾರಿ ಸ್ಥಳೀಯ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಹನಿಟ್ರ್ಯಾಪ್ ತಂಡದ ಸದಸ್ಯರು ಮತ್ತು ರಷ್ಯಾ ಮಹಿಳೆಗಾಗಿ ಬಲೆ ಬೀಸಿದ್ದಾರೆ.

ಹೈಸ್ಕೂಲ್‌ನಲ್ಲಿ ವಿದ್ಯಾರ್ಥಿಯಿಂದ ಗುಂಡಿನ ದಾಳಿ: ನಾಲ್ವರು ಸಾವು

ವಿಂಡರ್: ಹೈಸ್ಕೂಲ್‌ನಲ್ಲಿ 14 ವರ್ಷದ ವಿದ್ಯಾರ್ಥಿಯೊಬ್ಬ ಗುಂಡಿನ ದಾಳಿ ನಡೆಸಿ ನಾಲ್ವರನ್ನು ಹತ್ಯೆಗೈದ ಘಟನೆ ಬುಧವಾರ ಜಾರ್ಜಿಯಾ ದೇಶದಲ್ಲಿ ನಡೆದಿದೆ. ದಾಳಿಯಲ್ಲಿ ಗಾಯಗೊಂಡ 8 ವಿದ್ಯಾರ್ಥಿಗಳು ಮತ್ತು ಓರ್ವ ಶಿಕ್ಷಕ ಸೇರಿ 19 ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಅಟ್ಲಾಂಟಾ ಹತ್ತಿರದ ವಿಂಡರ್ ನಗರದ ಅಪಾಲಾಚಿ ಹೈಸ್ಕೂಲ್‌ನಲ್ಲಿ ನಡೆದ ಈ ಘಟನೆಯಲ್ಲಿ ಇಬ್ಬರು ವಿದ್ಯಾರ್ಥಿಗಳು ಮತ್ತು ಇಬ್ಬರು ಶಿಕ್ಷಕರು ಮೃತಪಟ್ಟಿದ್ದಾರೆ.



ಗುಂಡಿನ ದಾಳಿ ವೇಳೆ ಶಾಲೆಯಲ್ಲಿದ್ದ ವಿದ್ಯಾರ್ಥಿಗಳು ರಕ್ಷಿಸಿಕೊಳ್ಳಲು ತರಗತಿ ಕೊಠಡಿಗಳಲ್ಲಿ ಓಡಾಡಿದ್ದಾರೆ. ಬಳಿಕ ವಿದ್ಯಾರ್ಥಿಗಳನ್ನು ಹತ್ತಿರ ಫುಟ್ಬಾಲ್ ಕ್ರೀಡಾಂಗಣಕ್ಕೆ ಸ್ಥಳಾಂತರಿಸಲಾಗಿದೆ. ಗುಂಡಿನ ದಾಳಿ ಮಾಡಿದ ವಿದ್ಯಾರ್ಥಿಯನ್ನು ತಕ್ಷಣವೇ ಶಾಲೆಯ ಭದ್ರತಾ ಸಿಬ್ಬಂದಿ ವಶಕ್ಕೆ ಪಡೆದಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಶಂಕಿತ ವಿದ್ಯಾರ್ಥಿ ಗುಂಡಿನ ದಾಳಿಯಲ್ಲಿ ಬಳಸಿದ ಬಂದೂಕನ್ನು ಹೇಗೆ ಪಡೆದುಕೊಂಡನು ಮತ್ತು ಶಾಲೆಗೆ ಹೇಗೆ ಒಳ ನುಗ್ಗಿದ್ದಾನೆ ಎಂಬುದನ್ನು ತನಿಖೆ ಮಾಡಲಾಗುತ್ತಿದೆ. ದಾಳಿಗೆ ವಿದ್ಯಾರ್ಥಿ ಯಾವ ಬಂದೂಕು ಬಳಸಿದ್ದಾನೆ ಎಂಬುದನ್ನು ಅಧಿಕಾರಿಗಳು ಬಹಿರಂಗಪಡಿಸಿಲ್ಲ.

ಶಾಲಾ ಶಿಕ್ಷಣ ಇಲಾಖೆಯಲ್ಲಿ ಹಲವು ಬದಲಾವಣೆ

● ಶಾಸಕ ಮಂತರ್‌ಗೌಡ ಮಾಹಿತಿ ● ಶಿಕ್ಷಕರ ದಿನಾಚರಣೆಯಲ್ಲಿ ಅತ್ಯುತ್ತಮ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ



ಮಡಿಕೇರಿ ಕೊಡಗುಗೌಡ ಸಮಾಜದ ಮುಖ್ಯ ಸಭಾಂಗಣದಲ್ಲಿ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ಅತ್ಯುತ್ತಮ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು ಶಾಸಕ ಮಂತರ್‌ಗೌಡ, ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ ಮತ್ತಿತರರಿದ್ದರು.

> ಸಮಾಜದ ಅಭಿವೃದ್ಧಿಗೆ ಅನ್ನದಾನ ಮತ್ತು ವಿದ್ಯಾದಾನ ಮಹತ್ತುವಾಗಿದ್ದು, ವಿದ್ಯಾದಾನ ಮಾಡುತ್ತಿರುವ ಶಿಕ್ಷಕರ ವೃತ್ತಿ ಹೆಚ್ಚಿನ ಮೌಲ್ಯ ಹೊಂದಿದೆ. ಅಜ್ಞಾನದಿಂದ ಸುಜ್ಞಾನದೆಡೆಗೆ, ಕತ್ತಲೆಯಿಂದ ಬೆಳಕಿನೆಡೆಗೆ ಮಾರ್ಗದರ್ಶನ ತೋರುವುದೇ ಶಿಕ್ಷಕರ ವೃತ್ತಿ.
> –ಆರ್.ಐಶ್ವರ್ಯ, ಅಪರ ಜಿಲ್ಲಾಧಿಕಾರಿ

> ಶಿಕ್ಷಕರ ನಿಜವಾದ ಆಸ್ತಿ ವಿದ್ಯಾರ್ಥಿಗಳು, ಮಹಾನ್ ಕಾರ್ಯ ಮಾಡುವವರು ಮಾತ್ರ ದೊಡ್ಡವರಲ್ಲ, ಮಹಾನ್ ಕಾರ್ಯ ಮಾಡಲು ಪ್ರೇರೇಪಿಸುವ ಶಿಕ್ಷಕರು ಕೂಡ ಮಹಾತ್ಮರು ಎಂದರೆ ತಪ್ಪಾಗಲಾರದು. ಜಗತ್ತನ್ನು ಬದಲಾಯಿಸಬಲ್ಲ ಶಕ್ತಿಶಾಲಿ ಸಾಧನ ಎಂದರೆ ಶಿಕ್ಷಣ ಮಾತ್ರ.
> –ನೀಲಗಿರಿ ಎಂ.ತಳವಾರ್, ಮೈಸೂರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿವೃತ್ತ ಪ್ರಾಧ್ಯಾಪಕ

ಮಡಿಕೇರಿ, ಸೆ.5–ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಬಡ್ತಿ ಸಂಬಂಧ ಹಲವು ಮಹತ್ತರ ಬದಲಾವಣೆಗೆ ಮುಂದಾಗಿದೆ ಎಂದು ಶಾಸಕ ಡಾ.ಮಂತರ್‌ಗೌಡ ತಿಳಿಸಿದರು.

ನಗರದ ಕೊಡಗುಗೌಡ ಸಮಾಜದ ಮುಖ್ಯ ಸಭಾಂಗಣದಲ್ಲಿ ಗುರುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಸಂಯುಕ್ತಾಶ್ರಯದಲ್ಲಿ ನಡೆದ ಶಿಕ್ಷಕರ ದಿನಾಚರಣೆ ಹಾಗೂ ಜಿಲ್ಲಾ ಅತ್ಯುತ್ತಮ ಶಿಕ್ಷಕರ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರ್ಕಾರ ಪ್ರತಿಯೊಂದು ಕ್ಷೇತ್ರದಲ್ಲೂ ಬದಲಾವಣೆ ಮತ್ತು ಸುಧಾರಣೆಗೆ ಪ್ರಯತ್ನಿಸಿದೆ. ಜೊತೆಗೆ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ 7ನೇ ವೇತನ ಆಯೋಗ ಜಾರಿಗೊಳಿಸಿದೆ. ಶಿಕ್ಷಣ ಕ್ಷೇತ್ರದಲ್ಲಿ ಕೊಡಗು ಜಿಲ್ಲೆಯನ್ನು ಮತ್ತಷ್ಟು ಉತ್ತುಂಗಕ್ಕೆ ಕೊಂಡೊಯ್ಯುವ ನಿಟ್ಟಿನಲ್ಲಿ ಶಿಕ್ಷಕರು ಸೇರಿದಂತೆ ಎಲ್ಲರೂ ಶ್ರಮಿಸಬೇಕಿದೆ ಎಂದರು.

ಕೊಡಗು ಜಿಲ್ಲೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ನಾಲ್ಕನೇ ಸ್ಥಾನ ಪಡೆದಿರುವುದು ಹಾಗೂ ಗುಣಮಟ್ಟದ ಶಿಕ್ಷಣದಲ್ಲಿ ಪ್ರಥಮ ಸ್ಥಾನ ಪಡೆದಿರುವುದು ಶ್ಲಾಘನೀಯ. ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಪ್ರೀತಿ ಮತ್ತು ವಿಶ್ವಾಸ ಮೂಡಿಸಿ ಶಿಕ್ಷಣ ನೀಡುವಂತಾಗಬೇಕು. ಶಿಕ್ಷಕರ ವೃತ್ತಿಗೆ ತನ್ನದೆ ಗೌರವವಿದ್ದು, ಪ್ರತಿಯೊಬ್ಬರೂ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರನ್ನು ಸದಾ ಸ್ಮರಿಸುತ್ತಾರೆ ಎಂದು ಅಭಿಪ್ರಾಯಪಟ್ಟರು.

ಶಿಕ್ಷಕರು ಮಕ್ಕಳ ಹೃದಯದಲ್ಲಿ ಸದಾ ಇರುತ್ತಾರೆ. ಆದ್ದರಿಂದ ಮಕ್ಕಳ ಮನಸ್ಸಿನಿಂದ ಶಿಕ್ಷಕರನ್ನು ತೆಗೆಯಲು ಸಾಧ್ಯವಿಲ್ಲ. ಶಿಕ್ಷಕರ ವೃತ್ತಿ ಹೆಚ್ಚಿನ ಜವಾಬ್ದಾರಿ ಹೊಂದಿದೆ. ಆ ದಿಸೆಯಲ್ಲಿ ಶಿಕ್ಷಕರು ಮಕ್ಕಳಲ್ಲಿ ಹೆಚ್ಚಿನ ಪ್ರಭಾವ ಬೀರುತ್ತಾರೆ. ಶಿಕ್ಷಕರ ಪ್ರತಿಯೊಂದು ಗುಣಗಳು ಮಕ್ಕಳ ಮೇಲೆ ಪರಿಣಾಮ ಬೀರುತ್ತದೆ. ಗುರುಗಳ ಮಾರ್ಗದರ್ಶನ ಸದಾ ಸ್ಮರಣೀಯವಾಗಿದೆ ಎಂದರು.

ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ ಮಾತನಾಡಿ, ರಾಷ್ಟ್ರದ ಅಭಿವೃದ್ಧಿಗೆ ಶಿಕ್ಷಕರ ಪಾತ್ರ ಮಹತ್ತರವಾಗಿದೆ. ಮಕ್ಕಳ ಮೇಲೆ ಶಿಕ್ಷಕರು ಹೆಚ್ಚಿನ ಪ್ರಭಾವ ಮತ್ತು ಪರಿಣಾಮ ಬೀರುತ್ತಾರೆ. ಆ ನಿಟ್ಟಿನಲ್ಲಿ ಗುಣಾತ್ಮಕ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕು ಎಂದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಅತ್ಯುತ್ತಮ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಎಎಸ್‌ಪಿ ಸುಂದರ್ ರಾಜ್, ಡಿವೈಎಸ್‌ಪಿ ಮಹೇಶ್ ಕುಮಾರ್, ಕೂಡಿಗೆ ಡಯಟ್ ಪ್ರಾಂಶುಪಾಲ ಎಂ.ಚಂದ್ರಕಾಂತ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪ ನಿರ್ದೇಶಕ ಸಿ.ರಂಗಧಾಮಪ್ಪ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕಿ ಮಂಜುಳಾ, ನೋಡಲ್ ಅಧಿಕಾರಿ ಎಂ.ಮಹದೇವಸ್ವಾಮಿ, ಕ್ಷೇತ್ರ ಶಿಕ್ಷಣಾಧಿಕಾರಿ ಡಾ.ಬಿ.ಸಿ.ದೊಡ್ಡೇಗೌಡ, ದೈಹಿಕ ಶಿಕ್ಷಣ ಜಿಲ್ಲಾಧಿಕಾರಿ ಗಾಯತ್ರಿ, ರಾಜ್ಯ ಸರ್ಕಾರಿ ನೌಕರರ ಸಂಘದ ಕೊಡಗು ಜಿಲ್ಲಾಧ್ಯಕ್ಷ ಪೊನ್ನಚ್ಚನ ಶ್ರೀನಿವಾಸ್, ಪದವಿಪೂರ್ವ ಕಾಲೇಜು ಸಂಘದ ಜಿಲ್ಲಾಧ್ಯಕ್ಷ ಪಿ.ಎಂ.ದೇವಕಿ, ಉಪನ್ಯಾಸಕರ ಸಂಘದ ಜಿಲ್ಲಾಧ್ಯಕ್ಷರಾದ ಫಿಲಿಪ್ ವಾಸು, ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷರಾದ ಕೆ.ಪಿ.ಗುರುರಾಜ, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಸಿ.ಟಿ.ಸೋಮಶೇಖರ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಹೆಚ್.ಎನ್.ಮಂಜುನಾಥ್ ಮತ್ತಿತರರಿದ್ದರು.

ನಾಳೆ ಅಜ್ಜಮಾಡ ಬಿ.ದೇವಯ್ಯ ಪುಣ್ಯಸ್ಮರಣೆ



ಮಡಿಕೇರಿ, ಸೆ.5– ಭಾರತ–ಪಾಕಿಸ್ತಾನ ನಡುವೆ 1965ರಲ್ಲಿ ನಡೆದ ಯುದ್ಧದಲ್ಲಿ ವೀರ ಮರಣ ಹೊಂದಿದ ಮಹಾವೀರ ಚಕ್ರ (ಮರಣೋತ್ತರ) ಪ್ರಶಸ್ತಿ ಪುರಸ್ಕೃತ ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ಬಿ.ದೇವಯ್ಯ ಅವರ 59ನೇ ಪುಣ್ಯಸ್ಮರಣೆ ಸೆ.7ರಂದು ನಗರದಲ್ಲಿ ನಡೆಯಲಿದೆ ಎಂದು ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ತಿಳಿಸಿದ್ದಾರೆ.

ಕೊಡವ ಮಕ್ಕಡ ಕೂಟ, ಅಜ್ಜಮಾಡ ಒಕ್ಕ (ಕುಟುಂಬಸ್ಥರ) ಹಾಗೂ ಅಜ್ಜಮಾಡ ದೇವಯ್ಯ ಟ್ರಸ್ಟ್‌ನ ಸಹಯೋಗದಲ್ಲಿ ಅಂದು ಬೆಳಗ್ಗೆ 11 ಗಂಟೆಗೆ ದೇವಯ್ಯ ವೃತ್ತದಲ್ಲಿ ಪುಣ್ಯಸ್ಮರಣೆ ಆಚರಿಸಲಾಗುವುದು. ಶಾಸಕರಾದ ಎ.ಎಸ್.ಪೊನ್ನಣ್ಣ, ಡಾ.ಮಂತರ್‌ಗೌಡ, ಎಂಎಲ್‌ಸಿ ಸುಜಾ ಕುಶಾಲಪ್ಪ ಏರ್ ಮಾರ್ಷಲ್ ಕೊಡಂದೇರ ನಂದಾ ಕಾರ್ಯಪ್ಪ, ಮಾಜಿ ಸಚಿವ ಎಂ.ಪಿ.ಅಪ್ಪಚ್ಚು ರಂಜನ್, ಮಾಜಿ ಶಾಸಕ ಕೆ.ಜಿ.ಬೋಪಯ್ಯ, ಮಾಜಿ ಎಂಎಲ್‌ಸಿ ವೀಣಾ ಅಚ್ಚಯ್ಯ, ಡಿಸಿ ವೆಂಕಟ್ ರಾಜಾ, ಎಸ್‌ಪಿ ಕೆ.ರಾಮರಾಜನ್, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಹಾಗೂ ಜನರಲ್ ತಿಮ್ಮಯ್ಯ ಫೋರಂನ ಅಧ್ಯಕ್ಷ ಕರ್ನಲ್ ಕಂಡ್ರತಂಡ ಸುಬ್ಬಯ್ಯ, ಮಡಿಕೇರಿ ಕೊಡವ ಸಮಾಜದ ಅಧ್ಯಕ್ಷ ಮಂಡುವಂಡ ಮುತ್ತಪ್ಪ, ಸ್ಕ್ವಾಲೀ ಅಜ್ಜಮಾಡ ಬಿ.ದೇವಯ್ಯ ಮೆಮೋರಿಯಲ್ ಟ್ರಸ್ಟ್ ಅಧ್ಯಕ್ಷ ಅಜ್ಜಮಾಡ ಕಟ್ಟಿ ಮಂದಯ್ಯ ಭಾಗವಹಿಸಲಿದ್ದಾರೆ ಎಂದು ಬೊಳ್ಳಜಿರ ಅಯ್ಯಪ್ಪ ತಿಳಿಸಿದ್ದಾರೆ.

ಮೂರ್ನಾಡುವಿನಲ್ಲಿ ಕೈಲ್ ಮುಹೂರ್ತ ಕ್ರೀಡಾಕೂಟ



ಮೂರ್ನಾಡು ಮುದ್ದಯ್ಯ ಕ್ರೀಡಾಂಗಣದಲ್ಲಿ ನಡೆದ ಕ್ರೀಡಾಕೂಟಕ್ಕೆ ಎಎಸ್‌ಪಿ ಸುಂದರ್ ರಾಜ್ ತೆಂಗಿನ ಕಾಯಿಗೆ ಗುಂಡು ಹೊಡೆಯುವ ಮೂಲಕ ಚಾಲನೆ ನೀಡಿದರು.

ಮೂರ್ನಾಡು: ಇಲ್ಲಿನ ನಂ.439ನೇ ಸಹಕಾರ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ಕೈಲ್ ಮುಹೂರ್ತ ಹಬ್ಬದ ಶತಮಾನೋತ್ಸವ ಸಂಭ್ರಮದ ಕ್ರೀಡಾಕೂಟ ಯಶಸ್ವಿಯಾಗಿ ಜರುಗಿತು.

ಮೂರ್ನಾಡು ವಿದ್ಯಾಸಂಸ್ಥೆಯ ಬಾಚೆಟ್ಟಿರ ಲಾಲು ಮುದ್ದಯ್ಯ ಕ್ರೀಡಾಂಗಣದಲ್ಲಿ ನಡೆದ ವಿವಿಧ ಆಟೋಟ ಕಾರ್ಯಕ್ರಮಕ್ಕೆ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರ್ ರಾಜ್ ತೆಂಗಿನ ಕಾಯಿಗೆ ಗುಂಡು ಹೊಡೆಯುವ ಮೂಲಕ ಚಾಲನೆ ನೀಡಿದರು.

ನಂತರ ಮಾತನಾಡಿದ ಎಎಸ್‌ಪಿ, ಕೊಡಗು ಜಿಲ್ಲೆಯಲ್ಲಿ ಕೈಲ್ ಮುಹೂರ್ತವನ್ನು ಸಂಭ್ರಮದಿಂದ ಆಚರಿಸಲಾಗುತ್ತದೆ. ಹಬ್ಬದ ದಿನದಂದು ಎಲ್ಲರೂ ಒಟ್ಟಾಗಿ ಸೇರುವ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು ಸಂತೋಷದ ವಿಷಯ ಎಂದರು.

ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಮಾತನಾಡಿ, ಕೊಡಗಿನ ಹಬ್ಬಗಳ ಆಚರಣೆಗಳು ವಿಶೇಷ, ವೈಶಿಷ್ಟ್ಯಗಳಿಂದ ಕೂಡಿದೆ. ಕ್ರೀಡೆಗೆ ಹೆಸರುವಾಸಿಯಾದ ಜಿಲ್ಲೆಯ ಜನತೆ ಗ್ರಾಮೀಣ ಮಟ್ಟದಲ್ಲಿ ಹಲವಾರು ಕ್ರೀಡೆಗಳನ್ನು ಆಯೋಜಿಸಿ, ಭಾಗವಹಿಸುವುದು ಕೂಡ ವಿಶೇಷ ಎಂದು ಅಭಿಪ್ರಾಯಪಟ್ಟರು.

ಪುರುಷರು, ಮಹಿಳೆಯರು, ಶಾಲಾ–ಕಾಲೇಜು ವಿದ್ಯಾರ್ಥಿಗಳು ವಿವಿಧ ಓಟದ ಸ್ಪರ್ಧೆ, ಗುಂಡು ಎಸೆತ, ನಿಂಬೆ ಹಣ್ಣು–ಚಮಚ ಓಟ, ವಯಸ್ಕರ ಓಟ, ಕಾಲುಕಟ್ಟಿ ಓಟ, ವಾದ್ಯದ ಕುಣಿತ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಕಾಂತೂರು ಮೂರ್ನಾಡು ಗ್ರಾಮ ಪಂಚಾಯಿತಿಗೆ ಸಂಬಂಧಪಟ್ಟ 6 ಗ್ರಾಮಗಳ ಪುರುಷರು ಮತ್ತು ಮಹಿಳೆಯರ ತಂಡಗಳ ಮಧ್ಯೆ ನಡೆದ ಹಗ್ಗಜಗ್ಗಾಟದಲ್ಲಿ ಕಿಗ್ಗಾಲು ಗ್ರಾಮದ ಪುರುಷರ ತಂಡ, ಬಾಡಗ ಗ್ರಾಮದ ತಂಡವನ್ನು ಸೋಲಿಸಿ ಪ್ರಥಮ ಸ್ಥಾನ ಪಡೆಯಿತು. ಮಹಿಳೆಯರ ವಿಭಾಗದಲ್ಲಿ ಕಿಗ್ಗಾಲು ಗ್ರಾಮದ ತಂಡ, ಮುತ್ತಾರ್‌ಮುಡಿ ಗ್ರಾಮದ ತಂಡವನ್ನು ಸೋಲಿಸಿತು. ನಂತರ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಇದೇ ಸಂದರ್ಭ ಭತ್ತ ಬೆಳೆ ಸಂಸ್ಥೆಯ 34 ಸದಸ್ಯರನ್ನು ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಸಹಕಾರ ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ಮುಂಡಂಡ ಪವಿ ಸೋಮಣ್ಣ, ಕಾರ್ಯದರ್ಶಿ ಮೇರ್ಕಜೆ ಲೋಹಿತ್ ಸೋಮಯ್ಯ, ನಿರ್ದೇಶಕರಾದ ಪುದಿಯೊಕ್ಕಡ ಪೊನ್ನು ಮುತ್ತಪ್ಪ ಕೋಟೇರ ಮೇದಪ್ಪ ಬೈಲೆ ತಿಮ್ಮಯ್ಯ, ಪುದಿಯೊಕ್ಕಡ ಕಾಶಿ ಕರುಂಬಯ್ಯ, ಪೆಮ್ಮಂಡ ಪವಿತ್ರ, ಕ್ಲಬ್ ಮಾಜಿ ಅಧ್ಯಕ್ಷರಾದ ಚೇನಂಡ ಅಶೋಕ್, ಪಳಂಗಂಡ ಅಪ್ಪಣ್ಣ ಮತ್ತು ಪುದಿಯೊಕ್ಕಡ ಬೆಲ್ಲುಸೋಮಯ್ಯ ಉಪಸ್ಥಿತರಿದ್ದರು.

ಜಿಲ್ಲಂಡ ಸಿ.ತನುಗೆ ಸುಬೇದಾರ್ ಬಡ್ತಿ

ಮಡಿಕೇರಿ: ಕೊಡಗು ಜಿಲ್ಲೆಯ ಅಮ್ಮತ್ತಿ ಒಂಟಿಯಂಗಡಿ ಹಚ್ಚಿನಾಡು ಗ್ರಾಮದ ಜಿಲ್ಲಂಡ ಸಿ.ತನು ಭಾರತೀಯ ಸೇನೆಯಲ್ಲಿ ಸುಬೇದಾರ್ ಆಗಿ ಬಡ್ತಿ ಹೊಂದಿದ್ದಾರೆ.



ಭಾರತೀಯ ಸೇನೆಯ ಎಎಂಸಿಯಲ್ಲಿ ಕಳೆದ 23 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ತನು ದೆಹಲಿ, ಕೋಲ್ಕತ್ತಾ, ಜಮ್ಮು ಹಾಗೂ ಶ್ರೀಲಂಕಾ, ದಕ್ಷಿಣ ಆಫ್ರಿಕಾದಲ್ಲಿಯೂ ಕರ್ತವ್ಯ ನಿರ್ವಹಿಸಿದ್ದಾರೆ. ಇದೀಗ ಸುಬೇದಾರ್ ಆಗಿ ಬಡ್ತಿ ಹೊಂದಿ ಮಹಾರಾಷ್ಟ್ರ ಪುಣೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಜಿಲ್ಲಂಡ ಸಿ.ತನು ಅವರ ತಂದೆ ಹಚ್ಚಿನಾಡು ಗ್ರಾಮದ ಜಿಲ್ಲಂಡ ಸಿ.ಚಂಗಪ್ಪ, ತಾಯಿ ಸರೋಜ, ಪತ್ನಿ ಗಾಯತ್ರಿ, ಪುತ್ರರಾದ ಹರನ್ ಕಾಳಪ್ಪ ಹಾಗೂ ಸೋಹನ್ ಮಾದಪ್ಪ ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ತನು ಕೊಡಗಿನ ನಟಿ, ನಿರ್ಮಾಪಕಿ, ಈರಮಂಡ ಹರಿಣಿ ವಿಜಯ್ ಅವರ ಸಹೋದರರಾಗಿದ್ದಾರೆ.

ಶಿಕ್ಷಕರು ಉತ್ತಮ ಪ್ರಜೆಗಳನ್ನು ದೇಶಕ್ಕೆ ಕೊಡುಗೆ ನೀಡಬೇಕು



ವಿರಾಜಪೇಟೆ ಸಂತ ಅನ್ನಮ್ಮ ವಿದ್ಯಾಸಂಸ್ಥೆ ದ್ವಿಶತಮಾನೋತ್ಸವ ಸಭಾಂಗಣದಲ್ಲಿ ನಿವೃತ್ತ ಶಿಕ್ಷಕರನ್ನು ಸನ್ಮಾನಿಸಲಾಯಿತು.

ವಿರಾಜಪೇಟೆ, ಸೆ.5–ಶಿಕ್ಷಕರು ಬೋಧನೆ ಮೂಲಕ ಉತ್ತಮ ಪ್ರಜೆಗಳನ್ನು ರೂಪಿಸಿ ದೇಶಕ್ಕೆ ಕೊಡುಗೆ ನೀಡಬೇಕು ಎಂದು ಶಾಸಕ ಎ.ಎಸ್.ಪೊನ್ನಣ್ಣ ಹೇಳಿದರು.

ಪಟ್ಟಣದ ಸಂತ ಅನ್ನಮ್ಮ ವಿದ್ಯಾಸಂಸ್ಥೆಯ ದ್ವಿಶತಮಾನೋತ್ಸವ ಸಭಾಂಗಣದಲ್ಲಿ ಗುರುವಾರ ಶಾಲಾ ಶಿಕ್ಷಣ ಇಲಾಖೆ ಹಾಗೂ ತಾಲೂಕು ಶಿಕ್ಷಕರ ದಿನಾಚರಣೆ ಸಮಿತಿ ವತಿಯಿಂದ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆಯಲ್ಲಿ ಮಾತನಾಡಿದ ಅವರು, ಶಾಲೆಯಲ್ಲಿ ಎಷ್ಟು ವಿದ್ಯಾರ್ಥಿಗಳಿದ್ದಾರೆ? ಎಷ್ಟು ಮಂದಿ ಪಾಸಾಗಿದ್ದಾರೆ? ಅನ್ನುವುದಕ್ಕಿಂತ ವಿದ್ಯಾರ್ಥಿಗಳಿಗೆ ಮುಖ್ಯವಾಹಿನಿಯಲ್ಲಿ ಎದುರಾಗುವ ಸಮಸ್ಯೆಗಳನ್ನು ಎದುರಿಸಲು ಮುಖ್ಯವಾಗಿ ಶಕ್ತರಾಗುವ ಶಿಕ್ಷಣದ ಆಗತ್ಯವಿದೆ ಎಂದರು.

ವಿದ್ಯಾರ್ಥಿ ಜೀವನದಲ್ಲಿ ಸವಾಲುಗಳನ್ನು ನಿರಂತರವಾಗಿ ಎದುರಿಸುವಂತೆ ಶಿಕ್ಷಕರು ಕಲಿಸಿದಾಗ ಮಾತ್ರ ಶಿಕ್ಷಣಕ್ಕೆ ಯಶಸ್ಸು ಸಿಗುತ್ತದೆ. ದೇಶದ ಮುಂದಿನ ಭವಿಷ್ಯ ರೂಪಿಸಲು ಉತ್ತಮ ಪ್ರಜೆಗಳನ್ನು ನೀಡುವುದು ಶಿಕ್ಷಕರ ಕರ್ತವ್ಯವಾಗಲಿ. ವಿದ್ಯಾರ್ಥಿಗಳಿಗೆ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದೆ. ಬದಲಾದ ಶಿಕ್ಷಣ ವ್ಯವಸ್ಥೆಗೆ ತಕ್ಕಂತೆ ಶಿಕ್ಷಕರು ಮಕ್ಕಳಿಗೆ ಬೋಧಿಸಬೇಕು ಎಂದು ತಿಳಿಸಿದರು.

ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಮಾತನಾಡಿ, ಸದೃಢ ದೇಶ ನಿರ್ಮಾಣಕ್ಕೆ ಶಿಕ್ಷಕರ ಕೊಡುಗೆ ಅಪಾರ. ಜೊತೆಗೆ ಉತ್ತಮ ರಾಷ್ಟ್ರ ನಿರ್ಮಾಣಕ್ಕೆ ವಿದ್ಯಾರ್ಥಿಗಳ ಪಾತ್ರವೂ ಪ್ರಮುಖವಾಗಿದೆ. ಆದ್ದರಿಂದ ಶಿಕ್ಷಕರು ವ್ಯಕ್ತಿ ವಿಕಸನದಲ್ಲಿ ಮುಖ್ಯ ಪಾತ್ರ ನಿರ್ವಹಿಸಬೇಕು. ಸಾಮಾಜಿಕ ಕಳಕಳಿ ಇರುವ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಗುರುಗಳು ಶಕ್ತಿ ಆಗಬೇಕು ಎಂದರು.

ಮೈಸೂರಿನ ಮರ್ಕೋಡು ಗೇಟ್ ಕಾಲೇಜಿನ ಪ್ರಾಂಶುಪಾಲ ದೇವರಾಜು ಪಿ.ಚಿಕ್ಕಹಳ್ಳಿ (ದೇಚಿ) ಮಾತನಾಡಿದರು. ಸಮಾರಂಭದಲ್ಲಿ ತಾಲೂಕಿನ ನಿವೃತ್ತ ಶಿಕ್ಷಕರನ್ನು ಸನ್ಮಾನಿಸಲಾಯಿತು. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಶಿಕ್ಷಕರ ಮಕ್ಕಳು ಹಾಗೂ ಶಿಕ್ಷಕರ ಕ್ರೀಡಾಕೂಟದ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಪ್ರಕಾಶ್, ತಾಪಂ ಇಓ ಕೆ.ಸಿ.ಅಪ್ಪಣ್ಣ, ತಹಸೀಲ್ದಾರ್‌ಗಳಾದ ಹೆಚ್.ಎನ್.ರಾಮಚಂದ್ರ, ಮೋಹನ್ ಕುಮಾರ್, ಸಂತ ಅನ್ನಮ್ಮ ವಿದ್ಯಾಸಂಸ್ಥೆ ವ್ಯವಸ್ಥಾಪಕ ಜೆಮ್ಸ್ ಡೊಮಿನಿಕ್, ಪ್ರಾಂಶುಪಾಲರಾದ ಮದುಲೈ ಮುತ್ತು, ಪ್ರಧಾನಮಂತ್ರಿ ಪೋಷಣ್ ಶಕ್ತಿ ನಿರ್ಮಾಣ ನಿರ್ದೇಶಕ ಕೆ.ಆರ್.ರಾಜೇಶ್, ಶಿಕ್ಷಣ ಕಲ್ಯಾಣ ಸಮಿತಿ ಅಧ್ಯಕ್ಷ ಮಾದಂಡ ತಿಮ್ಮಯ್ಯ, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಕೆ.ಆರ್.ಬಿಂದು, ಬಿಆರ್‌ಪಿ ವಾಮನ, ಚಂದನ, ಭಾಗ್ಯವತಿ ಮತ್ತಿತರರಿದ್ದರು.

ನಂಜಮ್ಮ ದೇವಯ್ಯ ನಿಧನ

ಸುಂಟಿಕೊಪ್ಪ, ಸೆ.5–ಕೊಡಗರಹಳ್ಳಿ



ಗ್ರಾಮದ ದಿವಂಗತ ನಡಿಕೇರಿಯಂಡ ದೇವಯ್ಯ ಅವರ ಪತ್ನಿ ನಡಿಕೇರಿಯಂಡ ನಂಜಮ್ಮ ದೇವಯ್ಯ (105) ಗುರುವಾರ ನಿಧನರಾದರು. ಮೃತರು ನಾಲ್ವರು ಪುತ್ರಿಯರು, ಪುತ್ರ ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಮೃತರ ಸ್ವಗ್ರಾಮದಲ್ಲಿ ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ.

ಸಮಾಜದಲ್ಲಿ ಶಿಕ್ಷಕ ವೃತ್ತಿ ಅತ್ಯಂತ ಶ್ರೇಷ್ಠ

● ಶಾಸಕ ಪುಟ್ಟರಂಗಶೆಟ್ಟಿ ಅಭಿಮತ ● ಕಾಂಗ್ರೆಸ್ ಕಚೇರಿಯಲ್ಲಿ ಶಿಕ್ಷಕರ ದಿನಾಚರಣೆ



ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ರಾಧಾಕೃಷ್ಣ ಭಾವಚಿತ್ರಕ್ಕೆ ಶಾಸಕ ಪುಟ್ಟರಂಗಶೆಟ್ಟಿ ಪುಷ್ಪಾರ್ಚನೆ ಮಾಡಿದರು.

ಚಾಮರಾಜನಗರ, ಸೆ.5–ಸಮಾಜದಲ್ಲಿ ಶಿಕ್ಷಣ ವೃತ್ತಿಗೆ ಬಹಳ ಗೌರವವಿದ್ದು, ಶಿಕ್ಷಕರ ವೃತ್ತಿ ಅತ್ಯಂತ ಶ್ರೇಷ್ಠವಾದದ್ದು, ಅಂತಹ ವೃತ್ತಿಯಲ್ಲಿದ್ದ ಡಾ.ಸರ್ವಪಲ್ಲಿ ರಾಧಾಕೃಷ್ಣ ಅವರು ಎಲ್ಲರಿಗೂ ಮಾರ್ಗದರ್ಶಕರಾಗಿದ್ದಾರೆ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಬಣ್ಣಿಸಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಗುರುವಾರ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಡಾ.ಸರ್ವಪಲ್ಲಿ ರಾಧಾಕೃಷ್ಣ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ರಾಧಾಕೃಷ್ಣನ್ ಅವರು ಅತ್ಯುತ್ತಮ ಶಿಕ್ಷಕರಾಗಿದ್ದರು. ತಮ್ಮ ಬದುಕಿನ ಮೂಲಕ ಶಿಕ್ಷಕ ವೃತ್ತಿ ಮಹತ್ವವನ್ನು ಜಗತ್ತಿಗೆ ತಿಳಿಸಿಕೊಟ್ಟರು. ಅವರ ಜೀವನಕ್ರಮ ಶಿಕ್ಷಕರ ಜವಾಬ್ದಾರಿಯನ್ನು ತಿಳಿಸುತ್ತದೆ. ಶಿಕ್ಷಕ ವೃತ್ತಿ ಧರ್ಮಪಾಲನೆಯಿಂದ ಸಾವಿರಾರು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಜವಾಬ್ದಾರಿಯನ್ನು ಡಾ.ರಾಧಾಕೃಷ್ಣನ್ ಸಮರ್ಥವಾಗಿ ನಿಭಾಯಿಸಿದರು ಎಂದರು.

ಇವತ್ತು ನಾವು ಈ ಸ್ಥಾನದಲ್ಲಿದ್ದೇವೆ ಎಂದರೆ ನಮಗೆ ಪಾಠ ಹೇಳಿಕೊಟ್ಟ ಗುರುಗಳು ಕಾರಣ. ಪ್ರತಿಯೊಬ್ಬರ ಜೀವನದಲ್ಲಿ ಗುರುಗಳು ಇದ್ದೇ ಇರುತ್ತಾರೆ. ಇಂತಹ ವೃತ್ತಿಯಲ್ಲಿರುವ ಶಿಕ್ಷಕರು ಸಮಾಜ ಪರಿವರ್ತನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಉತ್ತಮ ಸಮಾಜ ನಿರ್ಮಿಸಬೇಕು. ಈ ನಿಟ್ಟಿನಲ್ಲಿ ಸರ್ಕಾರ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದೆ. ನಾನು ಸಹ ಕ್ಷೇತ್ರದಲ್ಲಿ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿ, ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದೇನೆ ಎಂದು ತಿಳಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ.ಎಸ್.ಗುರುಸ್ವಾಮಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವ್, ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ಎಪಿಎಂಸಿ ಅಧ್ಯಕ್ಷ ಸೋಮೇಶ್, ನಿರ್ದೇಶಕ ಆಲೂರು ಪ್ರದೀಪ್, ತಾಪಂ ಮಾಜಿ ಸದಸ್ಯರಾದ ಎಸ್.ರಾಜು, ಪುಟ್ಟಸ್ವಾಮಿ, ಮುಖಂಡರಾದ ಎಹೆಚ್‌ಎನ್ ಖಾನ್, ಪಿ.ರಾಜಣ್ಣ, ಕಾಗಲವಾಡಿ ಚಂದ್ರು, ಪುಟ್ಟಸ್ವಾಮಿ, ಅರುಣ್‌ಕುಮಾರ್, ಅಯೂಬ್‌ಖಾನ್, ಕರಿನಂಜನಪುರ ಸ್ವಾಮಿ, ರವಿಗೌಡ, ನಾಗರ್ಜುನ ಪೃಥ್ವಿ, ನಾಗು ಮೋಹನ್, ಮಹದೇವ್, ಡಿ.ಪಿ.ಪ್ರಕಾಸ್, ಮಹದೇವಯ್ಯ, ರೂಪೇಶ್, ದೊಡ್ಡರಾಯಪೇಟೆ ಕುಮಾರ್, ಮರಿಯಾಲ ಮನು ಇದ್ದರು.

ಕೊಳ್ಳೇಗಾಲ ನಗರಸಭೆ ಅಧ್ಯಕ್ಷರಾಗಿ ರೇಖಾ, ಉಪಾಧ್ಯಕ್ಷರಾಗಿ ಶಂಕರ್ ಆಯ್ಕೆ



ಕೊಳ್ಳೇಗಾಲ ನಗರಸಭೆ ಅಧ್ಯಕ್ಷೆ ರೇಖಾ ರಮೇಶ್ ಹಾಗೂ ಉಪಾಧ್ಯಕ್ಷ ಎ.ಪಿ.ಶಂಕರ್ ಅವರನ್ನು ಸಂಸದ ಸುನೀಲ್ ಬೋಸ್, ಶಾಸಕ ಎ.ಆರ್.ಕೃಷ್ಣಮೂರ್ತಿ ಅಭಿನಂದಿಸಿದರು.

ಕೊಳ್ಳೇಗಾಲ, ಸೆ.5– ಕೊಳ್ಳೇಗಾಲ ನಗರಸಭೆ ಅಧ್ಯಕ್ಷರಾಗಿ ಕಾಂಗ್ರೆಸ್‌ನ ರೇಖಾ ರಮೇಶ್ ಹಾಗೂ ಉಪಾಧ್ಯಕ್ಷರಾಗಿ ಎ.ಪಿ.ಶಂಕರ್ ಅವಿರೋಧವಾಗಿ ಆಯ್ಕೆಯಾದರು.

ಗುರುವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ರೇಖಾ ರಮೇಶ್, ಎ.ಪಿ. ಶಂಕರ್ ಇಬ್ಬರೇ ಮಾತ್ರ ನಾಮಪತ್ರ ಸಲ್ಲಿಸಿದ್ದರು. ನಂತರ ಚುನಾವಣಾಧಿಕಾರಿ ಮಹೇಶ್ ಅವಿರೋಧ ಆಯ್ಕೆ ಘೋಷಿಸಿದರು.

ಬಳಿಕ ನೂತನ ಅಧ್ಯಕ್ಷ, ಉಪಾಧ್ಯಕ್ಷರಿಗೆ ಸಂಸದ ಸುನೀಲ್ ಬೋಸ್, ಶಾಸಕ ಎ.ಆರ್.ಕೃಷ್ಣಮೂರ್ತಿ ಶುಭಕೋರಿದರು. ಮಾಜಿ ಅಧ್ಯಕ್ಷ ರಮೇಶ್, ಬಸ್ತೀಪುರ ಶಾಂತರಾಜು, ಕೊಪ್ಪಾಳಿನಾಯಕ, ಮಂಜುನಾಥ್ ಮತ್ತಿತರರು ಪಟ್ಟಣದ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು.

ಇದೇ ವೇಳೆ ಶಾಸಕ ಕೃಷ್ಣಮೂರ್ತಿ ಮಾತನಾಡಿ, ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳ ಮೂಲಕ ಜನಪರ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದೆ. ಇದರಿಂದ ವಿವಿಧ ಪಕ್ಷಗಳ ಮುಖಂಡರು ಕಾಂಗ್ರೆಸ್ ಸೇರುತ್ತಿದ್ದಾರೆ. ಈಗಾಗಲೇ ಕಾಂಗ್ರೆಸ್ ಗುಂಡ್ಲುಪೇಟೆ ಪುರಸಭೆ, ಕೊಳ್ಳೇಗಾಲ ನಗರಸಭೆ ಹಾಗೂ ಯಳಂದೂರು ಪಟ್ಟಣ ಪಂಚಾಯಿತಿ ಅಧಿಕಾರದ ಗದ್ದುಗೆ ಹಿಡಿದಿದ್ದು, ಮುಂದಿನ ದಿನ ಚಾಮರಾಜನಗರ ನಗರಸಭೆಯಲ್ಲೂ ಅಧಿಕಾರ ಹಿಡಿಯುವುದು ನಿಶ್ಚಿತ ಎಂದರು.

ಈ ವೇಳೆ ನಗರಸಭೆ ಮಾಜಿ ಉಪಾಧ್ಯಕ್ಷರಾದ ಅಕ್ಮಲ್ ಪಾಷ, ಸುಶೀಲ ಶಾಂತರಾಜು, ಸುಮೇರಾ ಬೇಗಂ, ಪ್ರಶಾಂತ್, ವರದರಾಜು, ಗುರು, ರಾಜೇಂದ್ರ, ಪೈರೋಜ್, ಅನ್ಸರ್ ಬೇಗ್ ಇದ್ದರು.

ಸರ್ವಪಲ್ಲಿ ರಾಧಾಕೃಷ್ಣನ್ ಭಾರತದ ಪ್ರಸಿದ್ಧ ತತ್ವಜ್ಞಾನಿ

ನಿವೃತ್ತ ಪ್ರಾಂಶುಪಾಲ ಪ್ರೊ.ಎಸ್.ಲಿಂಗಣ್ಣ ಸ್ಮರಣೆ



ಭೋಗಾಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ನಿವೃತ್ತ ಪ್ರಾಂಶುಪಾಲ ಪ್ರೊ.ಎಸ್.ಲಿಂಗಣ್ಣ ಉದ್ಘಾಟಿಸಿದರು.

ಚಾಮರಾಜನಗರ: ಡಾ.ಸರ್ವಪಲ್ಲಿ ರಾಧಾಕೃಷ್ಣ ಭಾರತದ ಪ್ರಸಿದ್ಧ ತತ್ವಜ್ಞಾನಿ ಹಾಗೂ ಅನನ್ಯ ಶಿಕ್ಷಕರಾಗಿದ್ದರು ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೊ.ಎಸ್.ಲಿಂಗಣ್ಣ ಸ್ಮರಿಸಿದರು.

ತಾಲೂಕಿನ ಭೋಗಾಪುರ ಪರಿಶಿಷ್ಟ ಜಾತಿ, ಪಂಗಡದ ವಸತಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಾವಿತ್ರಿಬಾಯಿ ಫುಲೆ ಸಭಾಂಗಣದಲ್ಲಿ ಗುರುವಾರ ಶಿಕ್ಷಕರ ದಿನಾಚರಣೆ ಪ್ರಯುಕ್ತ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರಾಧಾಕೃಷ್ಣ ಅವರು ಮಹಾನ್ ವಿದ್ವಾಂಸರು, ತತ್ವಜ್ಞಾನಿ ಮತ್ತು ರಾಜನೀತಿ ಹೊಂದಿದ್ದರು. ಅವರು ಕೆಲಸದ ಮೂಲಕ ಪಾಶ್ಚಿಮಾತ್ಯ ಜಗತ್ತಿಗೆ ಭಾರತೀಯ ತತ್ವಶಾಸ್ತ್ರ ಪರಿಚಯಿಸಲು ಸಹಾಯ ಮಾಡಿದರು ಎಂದರು.

ಅವರು ಬುದ್ಧಿವಂತಿಕೆ ಮತ್ತು ಭಾರತೀಯ ಸಂಸ್ಕೃತಿಯ ಆಳವಾದ ತಿಳುವಳಿಕೆಗೆ ಹೆಸರುವಾಸಿಯಾಗಿದ್ದರು. ಅವರ ಪರಂಪರೆ ಭಾರತೀಯ ಶಿಕ್ಷಣ ಮತ್ತು ತತ್ವಶಾಸ್ತ್ರದಲ್ಲಿ ಜೀವಿಸುತ್ತದೆ. ಶಿಕ್ಷಕನ ಮೌಲ್ಯ ಪ್ರತಿಪಾದನೆಗೆ ಕ್ರಾಂತಿಕಾರಿ ಬದಲಾವಣೆ ತಂದರು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ರಾಜ್ಯಶಾಸ್ತ್ರ ಉಪನ್ಯಾಸಕಿ ಜಿ.ಸುಮಿತ್ರ, ಪ್ರಾಧ್ಯಾಪಕರಾದ ಸುದರ್ಶನ್, ರವಿಶಂಕರ್ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಆನೆ ದಾಳಿಗೆ ಅಂಗಡಿ ಮುಂಗಟ್ಟು ಧ್ವಂಸ



ಬಿಳಿಗಿರಿರಂಗನ ಬೆಟ್ಟದ ಅಂಗಡಿ ಮುಂಗಟ್ಟುಗಳನ್ನು ಕಾಡಾನೆ ಧ್ವಂಸಗೊಳಿಸಿರುವುದು.

ಯಳಂದೂರು, ಸೆ.5–ತಾಲೂಕಿನ ಬಿಳಿಗಿರಿರಂಗನ ಬೆಟ್ಟದಲ್ಲಿ ಬುಧವಾರ ರಾತ್ರಿ ಒಂಟಿ ಸಲಗ ದಾಳಿ ನಡೆಸಿ ಅಂಗಡಿ ಮುಂಗಟ್ಟುಗಳನ್ನು ಧ್ವಂಸಗೊಳಿಸಿದೆ.

ರಾತ್ರಿ ಸುಮಾರು 3 ಗಂಟೆಯಲ್ಲಿ ಬೆಟ್ಟದ ದೇವಾಲಯದ ತೇರಿನ ಬೀದಿಗೆ ಕಾಡಾನೆ ಬಂದು, ಅಂಗಡಿ ಮುಂಗಟ್ಟುಗಳು ಹಾಗೂ ರಥದ ಬಳಿ ಕೆಲ ಸಾಮಗ್ರಿಗಳನ್ನು ಧ್ವಂಸಗೊಳಿಸಿದೆ.

ಕೆಲ ದಿನಗಳಿಂದ ಸಾರಿಗೆ ಬಸ್ ಹಾಗೂ ಶಾಲೆ ಬಳಿ ಕಾಡಾನೆ ಉಪಟಳ ನೀಡುತ್ತಿದ್ದು, ಶಾಲೆಗೆ ಹೋಗಿ ಬರುವ ಮಕ್ಕಳಿಗೆ ತೊಂದರೆ ಉಂಟಾಗುತ್ತಿದೆ. ಈ ಆನೆ ಯಾವ ಸಮಯದಲ್ಲಿ ಯಾವ ಕಡೆಗೆ ಬರುತ್ತದೆ ಎಂದು ಹೇಳಲಾಗದು. ಕೆಲ ದಿನಗಳಿಂದ ಕಾಡಾನೆ ಇಲ್ಲೇ ಓಡಾಡುತ್ತಿದ್ದು, ಬುಧವಾರ ರಾತ್ರಿ ದೇವಸ್ಥಾನದ ದಾಸೋಹ ಭವನದ ಬಳಿ ದಾಳಿ ನಡೆಸಿದೆ.

ಸೋಲಿಗರು ತಮ್ಮ ಮನೆಂ ಅಕ್ಕಪಕ್ಕದ ಕಾಫಿ ಬೆಳೆಯನ್ನು ಪ್ರತಿದಿನ ಬೆಳೆಯನ್ನೆಲ್ಲ ನಾಶ ಮಾಡುತ್ತಿದೆ. ಹಾಗಾಗಿ ಜನಸಾಮಾನ್ಯರು ಓಡಾಡುವ ಪ್ರದೇಶದಲ್ಲಿ ಪ್ರತಿದಿನ ಆನೆ ಹಾವಳಿ ನೀಡುತ್ತಿದ್ದು

ಈ ಭಾಗದಲ್ಲಿ ಕಾಡಾನೆ ಹಾವಳಿ ಮಿತಿ ಮೀರಿದ್ದು, ಸದಾ ಆತಂಕದಲ್ಲಿ ಇರಬೇಕಾದ ಪರಿಸ್ಥಿತಿ ಎದುರಾಗಿದೆ. ಕೂಡಲೇ ಅರಣ್ಯ ಇಲಾಖೆ ಕಾಡಾನೆ ಹಾವಳಿ ತಪ್ಪಿಸಬೇಕು ಎಂದು ಬಿಳಿಗಿರಿರಂಗನಬೆಟ್ಟದ ಗ್ರಾಮ ಪಂಚಾಯಿತಿ ಅಧ್ಯಕ್ಷ ಪ್ರದೀಪ್ ಕುಮಾರ್ ಹಾಗೂ ನಾಯಕ ಸಮುದಾಯ ಯಜಮಾನ ನಾಗೇಶ್ ಹಾಗೂ ಸೋಲಿಗರು ಒತ್ತಾಯಿಸಿದ್ದಾರೆ.

ನನ್ನ ಬಿಟ್ಟು ಹೋದ ಸದಸ್ಯರಿಗೆ ಒಳ್ಳೆಯದಾಗಲಿ

ಮಾಜಿ ಸಚಿವ ಎನ್.ಮಹೇಶ್ ಭಾವುಕ



ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ಎನ್.ಮಹೇಶ್ ಮಾತನಾಡಿದರು.


ಕೊಳ್ಳೇಗಾಲ, ಸೆ.5–ನನ್ನ ಬಿಟ್ಟು ಹೋದ ನಗರಸಭೆ ಬಿಜೆಪಿ ಸದಸ್ಯರಿಗೆ ಒಳ್ಳೆಯದಾಗಲಿ ಎಂದು ನನ್ನ ಪತ್ನಿ ವಿಜಯಾ ಸಮಾಧಿ ಎದುರು ಪ್ರಾರ್ಥಿಸುವೆ ಎಂದು ಮಾಜಿ ಸಚಿವ ಎನ್.ಮಹೇಶ್ ಭಾವುಕರಾಗಿ ಹೇಳಿದರು.

ಪಟ್ಟಣದ ಮಾಜಿ ಶಾಸಕ ಎಸ್.ಬಾಲರಾಜು ನಿವಾಸದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನನ್ನ ಪತ್ನಿ ನಿಧನದ ದಿನವೇ ನಗರಸಭೆ ಬಿಜೆಪಿ 7 ಸದಸ್ಯರ ಸದಸ್ಯತ್ವ ಅನರ್ಹವಾಯಿತು. ವಿಚಾರ ತಿಳಿಯುತ್ತಿದ್ದಂತೆ ಮರುದಿನವೇ ವಕೀಲರನ್ನು ಭೇಟಿ ಮಾಡಿ, ಇವರ ಸದಸ್ಯತ್ವ ಉಳಿಸಲು ಹೋರಾಟ ನಡೆಸಿದೆ. ಆದರೆ, ಹೈಕೋರ್ಟ್ ಜಿಲ್ಲಾಧಿಕಾರಿ ಆದೇಶವನ್ನೇ ಆಧಾರವಾಗಿಟ್ಟುಕೊಂಡು 7 ಸದಸ್ಯರ ಸದಸ್ಯತ್ವವನ್ನು ರದ್ದುಗೊಳಿಸಿತು ಎಂದರು.

ನಮ್ಮ ಹೋರಾಟದ ಫಲವಾಗಿ ಅನರ್ಹಗೊಂಡ 7 ಸದಸ್ಯರು ಉಪಚುನಾವಣೆಯಲ್ಲಿ ಸ್ಪರ್ಧಿಸಬಹುದು ಎಂದು ಕೋರ್ಟ್ ಆದೇಶ ನೀಡಿತು. ನಂತರ ನಡೆದ ನಗರಸಭೆ ಉಪಚುನಾವಣೆಯಲ್ಲಿ ಎಲ್ಲಾ 7 ಮಂದಿಗೂ ಬಿಜೆಪಿಯಿಂದ ಟಿಕೆಟ್ ಕೊಡಿಸಿದೆ. ಟಿಕೆಟ್ ಹಂಚಿಕೆ ವಿಚಾರವಾಗಿ ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ ಬೇಸರದಿಂದ ಪಕ್ಷದಿಂದ ಹೊರನಡೆದರು. ಬಳಿಕ 7 ಮಂದಿ ಗೆಲುವಿಗೆ ಹಗಲಿರುಳು ಶ್ರಮಿಸಿದೆ. ಇದರಲ್ಲಿ 6 ಮಂದಿ ಗೆಲುವು ಸಾಧಿಸಿದರು. ಆದರೆ, ಅವರು ಈಗ ನನ್ನ ಜೊತೆ ಇಲ್ಲ ಎಂದು ಭಾವುಕರಾದರು.

ಇದು ನನಗೆ ಪಾಠವಾಗಿದೆ. ನನಗೆ ದ್ರೋಹ ಮಾಡಿದರನ್ನು, ಕ್ಷಮಿಸು ಎಂದು ನನ್ನ ಪತ್ನಿ ಸಮಾಧಿ ಎದುರು ಪ್ರಾರ್ಥಿಸುವೆ. ನನ್ನಿಂದ ದೂರವಾದವರೆಲ್ಲರಿಗೂ ಶುಭವಾಗಲಿ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಎಸ್.ಬಾಲರಾಜು, ನಗರಸಭೆ ಬಿಜೆಪಿ ಸದಸ್ಯರು ಹಾಗೂ ಪಕ್ಷದ ಮುಖಂಡರು ಇದ್ದರು.





ಸ್ಯಾಂಡಲ್‌ವುಡ್‌ನಲ್ಲೂ ಲೈಂಗಿಕ ದೌರ್ಜನ್ಯ ಸದ್ದು; FIRE

ಕೇರಳದಲ್ಲಿ ಕೆ.ಹೇಮಾ ಸಮಿತಿ ವರದಿಯು ಭಾರತೀಯ ಚಲನ ಚಿತ್ರೋದ್ಯಮದಲ್ಲಿ ಆಘಾತ ತರಂಗ ಗಳನ್ನು ರವಾನಿಸಿದ ಎರಡು ವಾರಗಳ ನಂತರ, ಕನ್ನಡ ಚಲನಚಿತ್ರೋದ್ಯಮದ (ಕೆಎಫ್‌ಐ) ಕಲಾವಿದರು ತೀವ್ರಾಘಾತ ಕಾರಿಯಾಗಿಯೇ ಪ್ರತಿಕ್ರಿಯಿಸಿದ್ದಾರೆ. ನಟಿ ಶ್ರುತಿ ಹರಿಹರನ್, ಸ್ಯಾಂಡಲ್ ವುಡ್‌ನಲ್ಲಿಯೂ ಹೇಮಾ ಸಮಿತಿ ಯಂತೆಯೇ ಸಮಿತಿ ರಚನೆಗೆ ಒತ್ತಾ ಯಿಸಿದ ನಂತರ, ಚಲನಚಿತ್ರೋದ್ಯಮ ದಲ್ಲಿನ ಹಕ್ಕುಗಳು ಮತ್ತು ಸಮಾನತೆ (Film Industry for Right and Equality-FIRE) ಸದಸ್ಯರು ಕನ್ನಡ ಚಿತ್ರರಂಗದಲ್ಲಿ ಮಹಿಳೆಯರು ಎದು ರಿಸುತ್ತಿರುವ ಸಮಸ್ಯೆಗಳ ಅಧ್ಯಯನ ಮತ್ತು ವರದಿ ಮಾಡಲು ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಸಮಿತಿ ಯನ್ನು ರಚಿಸುವಂತೆ ಕರ್ನಾಟಕ ಸರ್ಕಾರವನ್ನು ಕೋರಿದ್ದಾರೆ.

ಉದ್ಯಮದಲ್ಲಿ ಲೈಂಗಿಕ ಕಿರುಕುಳ ಮತ್ತು ಕಾಸ್ಟಿಂಗ್ ಕೌಚ್ ಅನ್ನು ನಿಭಾಯಿಸಲು ಸೊಸೈಟೀಸ್ ಆಕ್ಟ್ ಅಡಿಯಲ್ಲಿ ಲಾಭೋದ್ದೇಶವಿಲ್ಲದ ಸಂಸ್ಥೆ, FIRE ಸಮಿತಿಯ ಅಧ್ಯಕ್ಷೆ, ಚಲನಚಿತ್ರ ನಿರ್ಮಾಪಕಿ ಕವಿತಾ ಲಂಕೇಶ್ ನೇತೃತ್ವ ವಹಿಸಿದ್ದಾರೆ. ನಟ ಚೇತನ್ ಅಹಿಂಸಾ ಕಾರ್ಯದರ್ಶಿ ಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಬುಧವಾರ ಮುಖ್ಯಮಂತ್ರಿ ಸಿದ್ದ ರಾಮಯ್ಯ ಅವರಿಗೆ ಫೈರ್ ಸಂಬಂಧ ಮನವಿ ಪತ್ರವನ್ನು ಸಲ್ಲಿಸಿದೆ. ಉದ್ಯಮ ದಲ್ಲಿ ಎಲ್ಲಾ ಮಹಿಳೆಯರಿಗೆ ಸುರಕ್ಷಿತ ಮತ್ತು ಸಮಾನವಾದ ಕೆಲಸದ ವಾತಾ ವರಣವನ್ನು ಸೃಷ್ಟಿಸಲು ಅಗತ್ಯವಿರುವ ಸಮಗ್ರ ಕ್ರಮಗಳ ಒತ್ತಾಯಿಸುತ್ತದೆ. 153 ಸದಸ್ಯರ ಸಮಿತಿಯಲ್ಲಿ ನಟರಾದ ಸುದೀಪ್, ರಮ್ಯಾ, ಕಿಶೋರ್, ವಿನಯ್ ರಾಜ್‌ಕುಮಾರ್, ಶ್ರುತಿ ಹರಿಹರನ್, ಶ್ರದ್ಧಾ ಶ್ರೀನಾಥ್, ಪೂಜಾ ಗಾಂಧಿ, ಐಂದ್ರಿತಾ ರೇ, ದಿಗಂತ್ ಮಂಚಾಳೆ, ಚೈತ್ರಾ ಜೆ ಆಚಾರ್, ಸಂಯುಕ್ತ ಹೆಗ್ಡೆ ಮತ್ತು ಚಲನಚಿತ್ರ ನಿರ್ಮಾಪಕರಾದ ಬಿ ಸುರೇಶ, ಮನ್ಸೋರೆ, ಜಯತೀರ್ ಕೆ.ಎಂ.ಚೈತನ್ಯ ಮತ್ತು ಪವನ್ ಕುಮಾರ್ ಮುಂತಾದ ಪ್ರಮುಖ ಹೆಸರುಗಳಿವೆ.

ಹಿಂದಿನಿಂದಲೂ ಚಿತ್ರರಂಗದಲ್ಲಿ ಮಹಿಳೆ ಯರು ಕಿರುಕುಳ ಎದುರಿಸುತ್ತಿದ್ದಾರೆ ಎಂದು ಕವಿತಾ ಹೇಳಿದ್ದಾರೆ. ಪ್ರಭಾವಿ ವ್ಯಕ್ತಿಗಳ ಹುಚ್ಚಾಟಿಕೆಗಳಿಗೆ ಸಹಕರಿಸದವ ರನ್ನು ಉದ್ಯಮದಿಂದ ಹೊರಹಾಕಲಾ ಯಿತು. ಅನ್ಯಾಯವನ್ನು ಪ್ರಶ್ನಿಸುವ ಮಹಿಳೆಯರು ಅವಕಾಶಗಳನ್ನು ಕಳೆದುಕೊಳ್ಳುವ ಅಪಾಯವನ್ನು ಎದು ರಿಸುತ್ತಾರೆ. ಶ್ರುತಿ ವಿಷಯದಲ್ಲೂ ಹೀಗೇ ಆಯಿತು ಎಂದರು.


ಅರ್ಜುನ್ ಸರ್ಜಾ ವಿರುದ್ಧ ದೂರು ನೀಡಿದ ಮೂರು ವರ್ಷಗಳ ನಂತರ, ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ ಪೊಲೀಸರು ತನಿಖೆಯನ್ನು ಮುಚ್ಚಿದರು. ಮಹಿಳೆಯರು ಈ ಹಿಂದೆ ದೂರು ನೀಡಿ ದ್ದರು, ಆದರೆ ಉದ್ಯಮದ ಪ್ರಮುಖರು ಅವರನ್ನು ಶಾಂತಗೊಳಿಸಿದ್ದಾರೆ. ಕೆಲವು ಮಹಿಳಾ ಕಲಾವಿದರು ಕಾನೂನು ಹೋರಾಟದಲ್ಲಿ ತೊಡಗುತ್ತಾರೆ.

ಅವಳ ಇಲ್ಲವೆ ಅವನ ಸೇವೆಯ ವರ್ಷ ಗಳ ಮೇಲೆ ಲಿಂಗ ನ್ಯಾಯಕ್ಕೆ ಬಲವಾದ ಬದ್ಧತೆಯನ್ನು ಪ್ರದರ್ಶಿಸಿದ ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಾಧೀಶರನ್ನು ಸಮಿತಿಯ ಮುಖ್ಯಸ್ಥ ರನ್ನಾಗಿ ನೇಮಿಸಬೇಕೆಂದು ನಾವು ಪ್ರಸ್ತಾ ಪಿಸುತ್ತೇವೆ. ಚಲನಚಿತ್ರೋದ್ಯಮದಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆ ಗಳ ಬಗ್ಗೆ ಸರ್ಕಾರದಿಂದ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಫೈರ್ ಕೋರಿದೆ.

ಹಲವಾರು ಮಹಿಳೆಯರಿಂದ ಲೈಂಗಿಕ ಕಿರುಕುಳದ ಆರೋಪಗಳು ಮಲಯಾಳಂ ಚಿತ್ರರಂಗವನ್ನು ಬೆಚ್ಚಿಬೀಳಿಸಿದೆ. ತಮಿಳು, ತೆಲುಗು ಮತ್ತು ಹಿಂದಿ ಚಲನಚಿತ್ರೋದ್ಯ ಮದ ಖ್ಯಾತ ಕಲಾವಿದರು ವಿವಾದದ ಬಗ್ಗೆ ಪ್ರತಿಕ್ರಿಯಿಸಿದ್ದಾರೆ, ಮಹಿಳಾ ಕಲಾ ವಿದರಿಗೆ ಸುರಕ್ಷಿತ ಕೆಲಸದ ವಾತಾವರಣದ ಅಗತ್ಯವನ್ನು ಒತ್ತಿ ಹೇಳಿದರು. ಕನ್ನಡ ಚಿತ್ರರಂಗದಲ್ಲಿ ಪ್ರಧಾನವಾಗಿ ಕೆಲಸ ಮಾಡಿದ ಸಿನಿಮಾಟೋಗ್ರಾಫರ್ ಪ್ರೀತಾ ಜಯರಾಮನ್ ಅವರು ಅಧಿಕಾರದಲ್ಲಿ ರುವವರು ತಮ್ಮ ಸ್ಥಾನವನ್ನು ಹೇಗೆ ದುರುಪಯೋಗಪಡಿಸಿಕೊಳ್ಳುತ್ತಾರೆ ಎಂಬುದರ ಕುರಿತು ಮಾತನಾಡಿದರು.

ನಾನು ಯಾವಾಗಲೂ ಮಹಿಳೆಯರಿಗೆ ಎಲ್ಲಾ ಮೂಲಭೂತ ಅಗತ್ಯಗಳ ಲಭ್ಯತೆ ಯೊಂದಿಗೆ ವೃತ್ತಿಪರ ಚಲನಚಿತ್ರ ಸೆಟ್‌ನಲ್ಲಿ ಕೆಲಸ ಮಾಡುತ್ತಿದ್ದರೂ, ನಟಿ ಮತ್ತು ಕಿರಿಯ ಕಲಾವಿದರ ವಿಷಯಕ್ಕೆ ಬಂದಾಗ ದೊಡ್ಡ ಕಿರುಕುಳದ ಅಂಶವಿದೆ ಎಂಬ ಅಂಶವನ್ನು ಯಾರೂ ಅಲ್ಲಗಳೆಯುವಂತಿಲ್ಲ ಎಂದು ಪ್ರೀತಾ ಹೇಳಿದರು. ನಿರ್ಮಾಣ ಅಧಿಕಾರಿಗಳು ನಟಿಯರನ್ನು ಹೇಗೆ ನಡೆಸಿಕೊಳ್ಳುತ್ತಾರೆ ಮತ್ತು ಎಲ್ಲಿ ತಪ್ಪುಗಳು ಸಂಭವಿಸುತ್ತವೆ ಎಂಬುದು ಉದ್ಯಮದಲ್ಲಿ ಹೆಚ್ಚಿನವರಿಗೆ ತಿಳಿದಿದೆ. ಅಧಿಕಾರದ ಸ್ಥಾನ ದಲ್ಲಿರುವ ಜನರು ಚಿತ್ರರಂಗದ ದಿನ ಗೂಲಿ ಕಾರ್ಮಿಕರನ್ನು ಶೋಷಿಸುತ್ತಾರೆ. ಮಹಿಳೆಯರಿಂದ ಅನ್ಯಾಯದ ನಿರೀಕ್ಷೆಗಳ ಬಗ್ಗೆ ನಾವು ಶೂನ್ಯ ಸಹಿಷ್ಣುತೆಯನ್ನು ಹೊಂದಿರಬೇಕು ಎಂದು ಅವರು ಅಭಿ ಪ್ರಾಯಪಟ್ಟಿದ್ದಾರೆ. ಲೇಖಕಿ ಹಾಗೂ ಚಿತ್ರಕಥೆಗಾರ್ತಿ ಸಂಧ್ಯಾ ರಾಣಿ ಮಾತ ನಾಡಿ, ಚಿತ್ರರಂಗದಲ್ಲಿ ಮಹಿಳೆಯರು ಎದುರಿಸುತ್ತಿರುವ ಕಿರುಕುಳ ಗೊತ್ತಿರುವ ಸತ್ಯ. ಇದು ಕೋಣೆಯಲ್ಲಿ ಆನೆಯಾಗಿತ್ತು. ಹೇಮಾ ಸಮಿತಿಯ ವರದಿಯ ನಂತರವೇ ಸಮಸ್ಯೆಯ ಬಗ್ಗೆ ಮುಕ್ತ ಚರ್ಚೆಯಾಗಿದೆ ಎಂದು ಅವರು ಹೇಳಿದರು. ಸಿನಿಮಾ ಉದ್ಯಮದಲ್ಲಿ ಮಹಿಳೆಯರು ದುರ್ಬಲರಾಗಿದ್ದಾರೆ. ಏಕೆಂದರೆ ಫಿಲ್ಮ್ ಸೆಟ್ ನಿಗದಿತ ಸಮಯ ಮತ್ತು ಮಾರ್ಗಸೂಚಿಗ ಳೊಂದಿಗೆ ಕಾರ್ಯನಿರ್ವಹಿಸುವುದಿಲ್ಲ. ಬಲ ವಾದ ಸ್ಥಾನದಲ್ಲಿರುವ ಪುರುಷರು ಗೆರೆ ದಾಟಿದರೂ ಅವರ ಪರವಾಗಿ ಕೆಲಸ ಮಾಡುವ ನಿಯಮಗಳನ್ನು ಮಾಡುತ್ತಾರೆ. ಅದಕ್ಕಾಗಿಯೇ ಆರೋ ಪಿಗಳು ಕೆಲಸ ಪಡೆಯುವುದನ್ನು ಮುಂದುವರಿಸುವುದನ್ನು ನೀವು ನೋಡುತ್ತೀರಿ ಮತ್ತು ಅವರನ್ನು ಪ್ರಶ್ನಿಸು ವವರು ಉದ್ಯಮದಿಂದ ಬದಿಗೆ ಸರಿ ಯುತ್ತಾರೆ ಎಂದು ಅವರು ಹೇಳಿದರು.



















ಹಿರಿಯ ಸಾಮಾಜಿಕ ಕಾರ್ಯಕರ್ತೆ ವಿಜಯಮ್ಮ ನಟ ಚೇತನ್ ಅಹಿಂಸಾ, ನಟಿಯರಾದ ಶೃತಿ ಹರಿಹರನ್, ನೀತು ಅವರನ್ನೊಳಗೊಂಡ ನಿಯೋಗ ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು.

ಸಿನಿಪದಬಂಧ-541



ಉಮ್ಮತ್ತೂರು ಇಂದುಶೇಖರ್

ಮೊ.9880820462



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1.	ವ್ರತವನ್ನು ಆಚರಿಸಲು ಚಿನ್ನವನ್ನು ಹೊತ್ತು ಬರುತಿದ್ದಾಳೆ	4
3.	ಶಿವನೆಂಡತಿಯ ಜೊತೆ ಪುತ್ರನೂ ಇದ್ದಾನೆ	5
5.	ಶಿವನ ಲ್ಯಾಪ್ - ಟಾಪ್ ಸತಿಯರು	4
7.	ಜೈ ಜಗದೀಶ್ ಅಭಿನಯದಲ್ಲಿ ಸೂರ್ಯ ಉದಯಿಸಿದ್ದಾನೆ	6
9.	ಗೌರಿಗೆ ಹೀಗೊಂದು ಹೆಸರು	3
11.	ಪಾರ್ವತಿಯ ಗಂಡ	3
12.	ವಿಷ್ಣುವರ್ಧನ್, ರಮೇಶ್, ಪ್ರೇಮ ಅಭಿನಯದಲ್ಲಿ ಬಂದ ಅಗ್ರ ಪೂಜೆಯವನು	4
14.	ಈ ಮಂಗಳಕರ ಚಿಹ್ನೆ ಗಣೇಶನ ರೂಪವೂ ಹೌದು !	3
15.	ಶಿವನ ಪತ್ನಿ ದುರ್ಗಾಳನ್ನು ಹೀಗೂ ಕರೆಯಿರಿ	3
16.	ಪಾರ್ವತಿಯನ್ನು ಪ್ರೀತಿಯಿಂದ ಕರೆದು ಎಳೆಯಿರಿ	2
17.	ಮಾತಂಗನ ಸ್ತ್ರೀ ರೂಪ	3
18.	"ಹಾರುತ ದೂರ ದೂರ ಮೇಲೇರುವ ಬಾರಾ ಬಾರಾ....", ಗೀತೆಯ ಚಿತ್ರ	5

ಮೇಲಿನಿಂದ ಕೆಳಕ್ಕೆ


1.	ಅನಂತ್ ನಾಗ್ - ಮಹಾಲಕ್ಷ್ಮಿಯ ಚಿನ್ನದಂತ ಕುಟುಂಬ	5
2.	ರಿಯಲ್ ಸ್ಟಾರ್ ಉಪೇಂದ್ರ- ರಮ್ಯ ಅಭಿನಯಕ್ಕೆ ನಾಗಣ್ಣ ನಿರ್ದೇಶಕ	3
3.	ನರಸಿಂಹರಾಜು - ಮೈನಾವತಿ ಅಭಿನಯದಲ್ಲಿ ಶಿವನೆಂಡತಿಯ ಪತಿ	4
4.	ಫಣಿ ರಾಮಚಂದ್ರ ನಿರ್ದೇಶನದಲ್ಲಿ ವಿನಾಯಕ ಬಗೆ ಬಗೆಯೊಂದಿಗೆ ಆಗಮಿಸಿದನೇ ?!	9
6.	ಪಾರ್ವತಿಯೊಂದಿಗೆ ಶಿವ ಸೇರಿಕೊಂಡಿದ್ದಾನೆ	3
8.	ಪ್ರಭಾಕರ್ ಅಭಿನಯದಿ ಇಂಜಿನ್ ಅಲ್ಲದ ಗಣೇಶನ ಮೂಷಿಕ ಬಂಡಿ	7
10.	ಶಾಂತಿಯ ಮೂರ್ತಿರೂಪವಾಗಿರುವ ಮಾತೆಗೆ ಹೀಗೇನ್ನಿ	6
13.	"ಬನ"ದಲ್ಲಿ ಕುಳಿತ "ದೇವತೆ"	3

ಸಿನಿ ಪದಬಂಧ 540ರ ಉತ್ತರ

ರಾ	ಧಾ	ರ	ಮ	ಣ		ಪ	ರಿ	ಚ	ಯ	
ಗ			ನಿ			ಥ		ಲಿ		ಹಂ
ತಾ	ಜ್	ಮ	ಹ	ಲ್				ಸು	ಜಾ	ತ
ಳ			ನಿ		ಅ	ಸಂ	ಭ	ವ		ಕ
	ಸ	ತಿ	ಶ	ಕ್ತಿ		ಶ		ಮೋ		
ಸ	ತ್ಯ		ನಿ		ಡ	ಯಾ	ನ	ಡ	ಯಾ	ನ
	ಸಂ			ಮೌ				ಗ		
ಒಂ	ದೇ	ಗೂ	ಡಿ	ನ	ಹ	ಕ್ಕಿ	ಗ	ಳು		ಕು
	ಶ			ಸಂ			ಡಿ			ಲ
		ಅಂ		ಗ್ರಾ		ಸಿ	ಬಿ	ಐ	ಶಿ	ವ
	ತುಂ	ಬಿ	ದ	ಮ	ನೆ		ಡಿ			ಧು

ವಿಜೇತರು: ಟಿ.ಎಸ್.ರಾಮಚಂದ್ರ, ಎಂಐಜಿ 1/19, ಕೆಹೆಚ್‌ಬಿ ಕಾಲೋನಿ, ನಂಜನಗೂಡು.

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015



'ಭಗೀರಥ' ಚಿತ್ರದಲ್ಲಿ ಮತ್ತೊಂದು ಹಾಡು

ಇತಿಹಾಸದ ಕಥೆಯಲ್ಲಿ ಭಗೀರಥ ಹೇಗೆ ತನ್ನ ತಪಸ್‌ಶಕ್ತಿಯಿಂದ ಆ ಗಂಗೆಯನ್ನೇ ಧರೆಗೆ ಕರೆತಂದನೋ ಅದೇ ರೀತಿ ಈ ಚಿತ್ರದಲ್ಲೂ ಒಂದು ಭಗೀರಥ ಪ್ರಯತ್ನವಿದೆ, ಆ ಕಾರಣಕ್ಕಾಗಿ ನಮ್ಮ ಚಿತ್ರಕ್ಕೆ ಭಗೀರಥ ಎಂಬ ಶೀರ್ಷಿಕೆ ಇಟ್ಟಿದ್ದೇವೆ ಎಂದು ನಿರ್ದೇಶಕ ರಾಮ್ ಜನಾರ್ಧನ್ ಅವರು ಚಿತ್ರದ ಡಾನ್ಸ್ ನಂಬರ್ ಹಾಡಿನ ಬಿಡುಗಡೆ ಸಂದರ್ಭದಲ್ಲಿ ಹೇಳಿದರು. ಬಿಡುಗಡೆಗೆ ಸಿದ್ಧವಾಗಿರುವ ಈ ಚಿತ್ರದಲ್ಲಿ ನಟ ಜಯಪ್ರಕಾಶ್ ಭಗೀರಥ ಪ್ರಯತ್ನ ಮಾಡಿ ಗೆಲ್ಲುವ ಯುವಕನಾಗಿ ಕಾಣಿಸಿಕೊಂಡಿದ್ದಾರೆ. ಈ ಹಿಂದೆ ಜಮಾನ ಚಿತ್ರದಲ್ಲಿ ನಟಿಸಿದ್ದ ಜಯಪ್ರಕಾಶ್ ಅವರಿಗಿದು ಮೂರನೇ ಚಿತ್ರ.

ನಿರ್ದೇಶಕ ರಾಮ್ ಜನಾರ್ದನ್ ಮಾತನಾಡುತ್ತ, ಇದು ನನ್ನ ನಿರ್ದೇಶನದ ಐದನೇ ಚಿತ್ರ. ಸಿನಿಮಾ ರೆಡಿಯಾಗಿ ಬಹಳ ದಿನಗಳಾಯಿತು, ಈ ಹಿಂದೆ ರಿಲೀಸ್ ಮಾಡಲು ಟ್ರೈ ಮಾಡಿದರೂ ಆಗಿರಲಿಲ್ಲ, ಆನಂತರ ಚಿತ್ರಕ್ಕೆ ಏನೋ ಬೇಕಿದೆ ಎನಿಸಿತು, ಈಗ ಸುಂದರವಾದ ಹಾಡೊಂದನ್ನು ಮಾಡಿದ್ದೇವೆ. ಜೊತೆಗೆ ಹೊಸದಾಗಿ ಸೀನ್ ಕೂಡ ಸೇರ್ಪಡೆಯಾಗಿದೆ, ಇಬ್ಬರು ಹುಡುಗಿಯರೂ ಕನ್ನಡದವರೇ ಬೇಕೆಂದು ನಿಸರ್ಗ ಅಣ್ಣಪ್ಪ ಹಾಗೂ ರೂಪಶ್ರೀ ಅವರನ್ನು ಈ ಹಾಡಿಗೆ ಕರೆತಂದಿದ್ದೇವೆ, ಯಾವುದಾದರೂ ಒಂದು ಕೆಲಸವನ್ನು ಮಾಡಲು ಹೊರಟು ಛಲಬಿಡದೆ ಸಾಧಿಸುವುದನ್ನು ಭಗೀರಥ ಪ್ರಯತ್ನ ಎನ್ನುತ್ತಾರೆ. ಈ ಪದಕ್ಕೂ ನಮ್ಮ ಚಿತ್ರದ ಕಥೆಗೂ ಸಂಬಂಧವಿದೆ. ಮುಂದಿನ ತಿಂಗಳು ಚಿತ್ರವನ್ನು ತೆರೆಗೆ ತರಲು ಪ್ರಯತ್ನ ನಡೆಯುತ್ತಿದೆ ಎಂದು ಹೇಳಿದರು.

ನಾಯಕ ಜಯಪ್ರಕಾಶ್ ಮಾತನಾಡಿ, ಈ ಚಿತ್ರದಲ್ಲಿ ನಾನು ಯಾವುದಕ್ಕೂ ಜಗ್ಗದ ವಿಲ್‌ಪವರ್ ಇರುವಂಥ ಧೈರ್ಯಶಾಲಿ ಯುವಕನಾಗಿ ಕಾಣಿಸಿಕೊಂಡಿದ್ದೇನೆ. ಸಂಕಷ್ಟ ದಲ್ಲಿದ್ದ ನಾಯಕಿಯನ್ನು ನಾನು ಹೇಗೆ ರಕ್ಷಿಸುತ್ತೇನೆ ಅನ್ನುವುದೇ ನನ್ನ ಪಾತ್ರ, ಇದು ಚಿತ್ರದ ಟೈಟಲ್‌ಸಾಂಗ್, 3 ದಿನಗಳಲ್ಲಿ ಶೂಟ್ ಮಾಡಿದ್ದೇವೆ ಎಂದರು. ನಾಯಕಿಯರಾದ ನಿಸರ್ಗ ಅಣ್ಣಪ್ಪ ಹಾಗೂ ರೂಪಶ್ರೀ ತಂತಮ್ಮ ಪಾತ್ರಗಳ ಕುರಿತಂತೆ ಸಂಕ್ಷಿಪ್ತವಾಗಿ ವಿವರಿಸಿದರು.

ನಿರ್ಮಾಪಕ ಚೇತನ್ ರಮೇಶ್ ಮಾತನಾಡಿ, ಚಿತ್ರ ಚೆನ್ನಾಗಿ ಬಂದಿದೆ. ಈ ಚಿತ್ರಕ್ಕಾಗಿ ಜನಾರ್ಧನ್ ತುಂಬಾ ಕಷ್ಟಪಟ್ಟಿದ್ದಾರೆ, ಜೆಪಿ ಅವರು ಚೆನ್ನಾಗಿ ಆ್ಯಕ್ಟ್ ಮಾಡಿದ್ದಾರೆ ಎಂದು ಹೇಳಿದರು, ಮತ್ತೊಬ್ಬ ನಿರ್ಮಾಪಕ ಬಿ.ಭೈರಪ್ಪ ಮಾತನಾಡಿ ನಾನು ವಿದ್ಯಾಸಂಸ್ಥೆಯನ್ನು ನಡೆಸುತ್ತಿದ್ದು ಚಿತ್ರದಲ್ಲಿ ವಿಲನ್ ಪಾತ್ರವನ್ನೂ ಮಾಡಿದ್ದೇನೆ ಎಂದರು.

ದೇಶದ ಅಭಿವೃದ್ಧಿಗೆ ಶಿಕ್ಷಕರ ಕೊಡುಗೆ ಅಪಾರ

ಶಿಕ್ಷಕರ ದಿನಾಚರಣೆಯಲ್ಲಿ ಶಾಸಕ ದರ್ಶನ್ ಅಭಿಪ್ರಾಯ



ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕರನ್ನು ಸನ್ಮಾನಿಸಲಾಯಿತು.

ನಂಜನಗೂಡು, ಸೆ.5– ವಿದ್ಯಾರ್ಥಿಗಳ ಜೀವನ ರೂಪಿಸುವ ಮೂಲಕ ದೇಶದ ಅಭಿವೃದ್ಧಿಗಾಗಿ ಶಿಕ್ಷಕರು ನೀಡಿರುವ ಕೊಡುಗೆ ಅಪಾರ ಎಂದು ಶಾಸಕ ದರ್ಶನ್ ಅಭಿಪ್ರಾಯಪಟ್ಟರು.

ನಗರದ ಕಮಲಮ್ಮ ಗುರುಮಲ್ಲಣ್ಣ ಕಲ್ಯಾಣ ಮಂಟಪದಲ್ಲಿ ಗುರುವಾರ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ದುಡಿಯುವ ಶಿಕ್ಷಕರು, ವಿದ್ಯಾರ್ಥಿಗಳಿಗೆ ಉಚಿತವಾಗಿ ಮನೆ ಪಾಠ ಮಾಡಿ, ಉತ್ತೇಜನ ನೀಡಿದ್ದನ್ನು ಕಂಡಿದ್ದೇನೆ. ವೈಯಕ್ತಿಕವಾಗಿ ನಾನು ವಕೀಲ ಹಾಗೂ ಶಾಸಕನಾಗಲು ಹಲವು ಶಿಕ್ಷಕರು ಕಾರಣರಾಗಿದ್ದಾರೆ. ನಾನು ಪಡೆದ ಶಿಕ್ಷಣ, ಅಳವಡಿಸಿಕೊಂಡ ಜೀವನ ಮೌಲ್ಯಗಳಿಗೆ ಶಿಕ್ಷಕರು ಕಾರಣರಾಗಿದ್ದಾರೆ. ದೇಶದ ಅಭ್ಯುದಯಕ್ಕಾಗಿ ಸದಾ ದುಡಿಯುವ ಶಿಕ್ಷಕರಿಗೆ ಸಮಾಜದ ಗೌರವ ಸಲ್ಲುತ್ತದೆ. ಶಿಕ್ಷಕರ ಬೇಡಿಕೆಯಂತೆ ನಗರದಲ್ಲಿ 2 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಗುರುಭವನ ನಿರ್ಮಿಸಲಾಗುವುದು. ಸದ್ಯದಲ್ಲೇ ಕಾಮಗಾರಿ ಆರಂಭವಾಗಲಿದೆ ಎಂದು ಭರವಸೆ ನೀಡಿದರು.

ಶಿಕ್ಷಕ ರಾಮಮೋಹನ ಮಾತನಾಡಿ, ಶಿಕ್ಷಕರ ದಿನದಂದು ಶಿಕ್ಷಣ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆ ನೀಡಿದ ಮಾಜಿ ರಾಷ್ಟ್ರಪತಿ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರನ್ನು ಸ್ಮರಿಸಬೇಕಾಗಿದೆ. ಸಂವಿಧಾನ ರಚನಾ ಸಮಿತಿ ಸದಸ್ಯರಾಗಿ ಅವರ ಸೇವೆ ಸ್ಮರಣೀಯ. ಶಿಕ್ಷಕರ ಬಗ್ಗೆ ಈಗಿನ ಕಾಲದ ಪೋಷಕರು ಅಂತಹ ಗೌರವ ಭಾವನೆ ಹೊಂದಿಲ್ಲ. ನಿಮ್ಮ ಮಕ್ಕಳ ಭವಿಷ್ಯ ರೂಪಿಸುವವರು ಶಿಕ್ಷಕರು. ವಿದ್ಯಾರ್ಥಿಗಳನ್ನು ಉತ್ತಮ ಪ್ರಜೆಯಾಗಿ ರೂಪಿಸುವಲ್ಲಿ ಶಿಕ್ಷಕರ ಶ್ರಮವಿದೆ. ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣಾ ಸಂದರ್ಭ ಶಿಕ್ಷಕರು ಸೇನಾನಿಗಳಂತೆ ದುಡಿದು ಪ್ರಜಾಪ್ರಭುತ್ವ ಎತ್ತಿ ಹಿಡಿದಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು. ಮಾಜಿ ಶಾಸಕ ಕೇಶವಮೂರ್ತಿ, ನಗರಸಭೆ ಅಧ್ಯಕ್ಷ ಶ್ರೀಕಂಠಸ್ವಾಮಿ, ಉಪಾಧ್ಯಕ್ಷೆ ರೆಹನಾ ಭಾನು, ಶಿಕ್ಷಕರ ಸಂಘದ ಅಧ್ಯಕ್ಷ ಧರ್ಮ ರತ್ನಾಕರ, ಬಿಇಓ ಮಹೇಶ್, ರಮೇಶ್, ಮುದ್ದು ಮಾದೇಗೌಡ, ಸೋಮಶೇಖರ್, ಬಾಲರಾಜು, ರಾಜೇಂದ್ರ, ಗಿರೀಶ್, ಸನ್ಮತಿ, ರಾಜುಸ್ವಾಮಿ, ಸತೀಶ್ ದಳವಾಯಿ, ಕುಮಾರಸ್ವಾಮಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ನಾಲ್ವರು ನಗರಸಭಾ ಸದಸ್ಯರ ಉಚ್ಚಾಟನೆ

ನಂಜನಗೂಡು, ಸೆ.5– ನಗರಸಭೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಚುನಾವಣೆಗೆ ಪಕ್ಷದ ವಿಪ್ ಉಲ್ಲಂಘಿಸಿ ಗೈರಾಗುವ ಮೂಲಕ ಪಕ್ಷದ ಅಭ್ಯರ್ಥಿ ಸೋಲಿಗೆ ಕಾರಣರಾದ ನಾಲ್ವರು ಬಿಜೆಪಿ ನಗರಸಭಾ ಸದಸ್ಯರನ್ನು ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಪಕ್ಷದಿಂದ ಉಚ್ಚಾಟನೆ ಮಾಡಿದ್ದಾರೆ.

ಬಿಜೆಪಿ ನಗರಸಭಾ ಸದಸ್ಯರಾದ ಟಿ.ಎಂ.ಗಿರೀಶ್ ಕುಮಾರ್, ಆರ್.ಮೀನಾಕ್ಷಿ, ಎಸ್.ವಿಜಯ ಲಕ್ಷ್ಮಿ ಕುಮಾರ್, ಗಾಯತ್ರಿ ಅವರು ಪಕ್ಷಾಂತರ ನಿಷೇಧ ಕಾನೂನು ಉಲ್ಲಂಘನೆ ಮಾಡಿರುವ ಕಾರಣ 6 ವರ್ಷ ಪಕ್ಷದಿಂದ ಉಚ್ಚಾಟಿಸಲಾಗಿದೆ ಎಂದು ತಿಳಿಸಿದ್ದಾರೆ.

ಇತ್ತೀಚೆಗೆ ನಡೆದ ನಗರಸಭೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಚುನಾವಣೆಯಲ್ಲಿ ಬಿಜೆಪಿ ಹಾಗೂ ಮಿತ್ರಪಕ್ಷ ಜೆಡಿಎಸ್ ಅಭ್ಯರ್ಥಿಗಳಿಗೆ ಮತ ಚಲಾಯಿಸುವಂತೆ ವಿಪ್ ಜಾರಿ ಮಾಡಲಾಗಿತ್ತು. ನಾಲ್ವರು ಸದಸ್ಯರು ಕಾಂಗ್ರೆಸ್‌ನೊಂದಿಗೆ ಒಳಒಪ್ಪಂದ ಮಾಡಿಕೊಂಡು ಚುನಾವಣೆಗೆ ಗೈರಾಗುವ ಮೂಲಕ ಕಾಂಗ್ರೆಸ್ ಅಭ್ಯರ್ಥಿಯ ಗೆಲುವಿಗೆ ಕಾರಣರಾಗಿದ್ದರು.

ಅಕ್ಷರ ಕಲಿಸಿದ ಗುರುಗಳು ದೇವರ ಸಮಾನ

ದೊಡ್ಡೇಕೊಪ್ಪಲು ಗ್ರಾಪಂ ಸದಸ್ಯ ಕೆ.ಪಿ.ಜಗದೀಶ್



ಶಿಕ್ಷಕರ ದಿನಾಚರಣೆ ಅಂಗವಾಗಿ ಶಿಕ್ಷಕರನ್ನು ಎಸ್‌ಡಿಎಂಸಿ ಸದಸ್ಯರು ಸನ್ಮಾನಿಸಿದರು.

ಕೆ.ಆರ್.ನಗರ, ಸೆ.5– ಜಗತ್ತಿನಲ್ಲಿ ಸರ್ವರೂ ಜ್ಞಾನಿಗಳು ಮತ್ತು ಬುದ್ಧಿವಂತರಾಗಲು ಶಿಕ್ಷಕರ ಕೊಡುಗೆ ಅಪಾರ. ನಾವು ಅವರನ್ನು ನಿತ್ಯ ಗೌರವಿಸಿ ಪೂಜ್ಯ ಭಾವನೆಯಿಂದ ನೋಡಬೇಕು ಎಂದು ದೊಡ್ಡೇಕೊಪ್ಪಲು ಗ್ರಾಪಂ ಸದಸ್ಯ ಕೆ.ಪಿ.ಜಗದೀಶ್ ತಿಳಿಸಿದರು.

ಪಟ್ಟಣದ ಕಾಳೇನಹಳ್ಳಿ ಬಳಿಯ ಆದರ್ಶ ವಿದ್ಯಾಲಯದಲ್ಲಿ ಗುರುವಾರ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ಮಾತನಾಡಿದ ಅವರು ನಮಗೆ ಅಕ್ಷರ ಕಲಿಸಿ ತಿದ್ದಿ ತೀಡಿದ ಗುರುಗಳು ದೇವರಿಗೆ ಸಮಾನ ಎಂದರು.

ಎಲ್ಲಾ ಹುದ್ದೆಗಳಿಗಿಂತ ಶಿಕ್ಷಕ ವೃತ್ತಿ ಹೆಚ್ಚು ಎತ್ತರ ಸ್ಥಾನದಲ್ಲಿದ್ದು, ಗುರು ಮತ್ತು ಶಿಷ್ಯರ ಸಂಬಂಧ ಹಾಗೂ ಬಾಂಧವ್ಯಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಹಾಗಾಗಿ ಪೋಷಕರಿಗಿಂತ ಅಗ್ರಸ್ಥಾನವನ್ನು ನಾವು ನಮ್ಮ ಗುರುಗಳಿಗೆ ನೀಡಬೇಕಿದ್ದು, ನಮಗೆ ಸರ್ವಸ್ವವೂ ಅಕ್ಷರ ಕಲಿಸಿದವರು ಎಂದು ಬಣ್ಣಿಸಿದರು.

ಈ ವೇಳೆ ಶಾಲೆಯ ಎಲ್ಲಾ ಶಿಕ್ಷಕರನ್ನು ಎಸ್‌ಡಿಎಂಸಿ ವತಿಯಿಂದ ಸನ್ಮಾನಿಸಲಾಯಿತು. ವಿದ್ಯಾರ್ಥಿಗಳು ತಮ್ಮ ನೆಚ್ಚಿನ ಗುರುಗಳಿಗೆ ನೆನಪಿನ ಕಾಣಿಕೆ ನೀಡಿ ಅವರ ಕಾಲಿಗೆರಗಿ ಆಶೀರ್ವಾದ ಪಡೆದು ಸಂತಸದ ಕ್ಷಣಗಳನ್ನು ಕಣ್ತುಂಬಿಕೊಂಡರು. ಎಸ್‌ಡಿಎಂಸಿ ಸದಸ್ಯರಾದ ಉದಯಶಂಕರ್, ಕೆ.ಚಂದ್ರು, ಗಜೇಂದ್ರ, ಕೆ.ಜೆ.ಮಂಜುನಾಥ, ಶಿಲ್ಪ, ಶೈಲ, ಕೆ.ಸಿ.ಹರೀಶ್, ಕವಿತ, ಚಲುವರಾಜು, ಸಣ್ಣಪ್ಪ, ಮುಖ್ಯ ಶಿಕ್ಷಕಿ ರುಕ್ಮಿಣಿ, ಶಿಕ್ಷಕರಾದ ಶಶಿಕಲಾ, ರಶ್ಮಿ, ಶಾಂತಿಮತಿ, ಪುಷ್ಪಲತಾ, ದೀಪ್ತಿ, ಅನಿತಾ, ಮಮತಾ, ರಿಜಿಕ್, ಲೋಕೇಶ್, ಹರೀಶ್, ಮುರುಳಿ, ಶಿಲ್ಪ. ನವ್ಯ, ಅಂಬಿಕಾ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

ಕಾಡಾನೆ ದಾಳಿ: ಬಾಳೆ ನಾಶ



ಕಾಡಾನೆ ದಾಳಿಯಿಂದ ಬಾಳೆ ಫಸಲು ನಾಶವಾಗಿರುವುದು.

ಮಲ್ಕುಂಡಿ, ಸೆ.5– ಕಾಡಾನೆ ದಾಳಿಗೆ ಬಾಳೆ ಬೆಳೆ ಸಂಪೂರ್ಣ ನಾಶವಾಗಿರುವ ಘಟನೆ ಬುಧವಾರ ರಾತ್ರಿ ಹೆಡಿಯಾಲದಲ್ಲಿ ನಡೆದಿದೆ. ಗ್ರಾಮದ ನಿವಾಸಿ ಫಾರುಖ್ ಖಾನ್ ಅವರಿಗೆ ಸೇರಿದ ಬಾಳೆ ನಾಶವಾಗಿರುವುದು. ಈತ ತಮ್ಮ 6 ಎಕರೆ ಜಮೀನಿನಲ್ಲಿ ಬಾಳೆ ಬೆಳೆದಿದ್ದರು. ಬುಧವಾರ ರಾತ್ರಿ ಜಮೀನಿಗೆ ಲಗ್ಗೆ ಹಾಕಿದ ಕಾಡಾನೆ ಸಂಪೂರ್ಣ ನಾಶ ಮಾಡಿದ್ದು, ಲಕ್ಷಾಂತರ ರೂ. ನಷ್ಟ ಸಂಭವಿಸಿದೆ.

ಗ್ರಾಪಂ ಸದಸ್ಯ ಆಶ್ರಫ್ ಆಲಿ ಮಾತನಾಡಿ, ರೈತರು ಹಗಲು ರಾತ್ರಿ ಎನ್ನದೇ ಸಾಲ ಮಾಡಿ ಬೆಳೆದ ಫಸಲುಗಳನ್ನು ಕಾಡು ಪ್ರಾಣಿಗಳು ತಿಂದು ಹಾಕುತ್ತಿವೆ. ಹೀಗಾದರೆ ಮಾಡಿರುವ ಸಾಲ ತೀರಿಸುವುದಾದರೂ ಹೇಗೆ ಎಂದ ಅವರು ಅರಣ್ಯ ಇಲಾಖೆ ಅಧಿಕಾರಿಗಳು ಕಾಡಾನೆ ಹಾವಳಿ ತಡೆಗಟ್ಟು ಮುಂದಾಗಬೇಕು. ಅಲ್ಲದೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸಬೇಕು ಎಂದು ಒತ್ತಾಯಿಸಿದರು.

ಗೀತಾಗೆ ಪಿಹೆಚ್‌ಡಿ



ಮಲ್ಕುಂಡಿ, ಸೆ.5– ಮೈಸೂರಿನ ಮಹಾರಾಜ ಕಾಲೇಜಿನ ವಾಣಿಜ್ಯ ವಿಭಾಗದ ಪ್ರಾಧ್ಯಾಪಕಿ ಡಾ.ಎ.ಸಿ.ಪ್ರಮೀಳಾ ಅವರ ಮಾರ್ಗದರ್ಶನದಲ್ಲಿ ಮೈಸೂರಿನ ಜೆಎಸ್‌ಎಸ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಎಸ್.ಗೀತಾ ಅವರು ಮಂಡಿಸಿದ ಎಫೆಕ್ಟಿವ್‌ನೆಸ್ ಆಫ್ ಟ್ರೈನಿಂಗ್ ಆಂಡ್ ಡೆವಲಪ್‌ಮೆಂಟ್ ಅನ್ ಎಂಪ್ಲಾಯಿ ಪರ್‌ಫಾರ್ಮೆನ್ಸ್ ಇನ್ ಸೌತ್ ವೆಸ್ಟರ್ನ್ ರೈಲ್ವೆ ಎಂಬ ಮಹಾ ಪ್ರಬಂಧವನ್ನು ಮೈಸೂರು ವಿವಿ ಪಿಹೆಚ್‌ಡಿ ಪದವಿಗೆ ಅಂಗೀಕರಿಸಿದೆ. ಈಕೆ ನಂಜನಗೂಡು ತಾಲೂಕಿನ ಮಡಕೆಹುಂಡಿ ಗ್ರಾಮದ ನಿವಾಸಿ ಗುತ್ತಿಗೆದಾರ ಶಿವಣ್ಣ ಅವರ ಪುತ್ರಿ.

ಲಯನ್ಸ್ ಅಕಾಡೆಮಿ ಶಾಲೆಗೆ ಸಮಗ್ರ ಪ್ರಶಸ್ತಿ



ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿ ಪಡೆದ ಮಕ್ಕಳು.


ಸರಗೂರು, ಸೆ.5– ಸರಗೂರು ವಲಯ ಮಟ್ಟದ ಕ್ರೀಡಾಕೂಟದಲ್ಲಿ ಲಯನ್ಸ್ ಅಕಾಡೆಮಿ ಶಾಲೆ ಸಮಗ್ರ ಪ್ರಶಸ್ತಿಗೆ ಭಾಜನವಾಗಿದೆ.

ತಾಲೂಕಿನ ಎಂ.ಸಿ.ತಳಲು ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ನಡೆದ ಸರಗೂರು ವಲಯ ಮಟ್ಟದ ಕ್ರೀಡಾಕೂಟದಲ್ಲಿ ಲಯನ್ಸ್ ಅಕಾಡೆಮಿ ಶಾಲೆಯ ಮಕ್ಕಳು ಬಾಲ್ ಬ್ಯಾಡ್ಮಿಂಟನ್‌ನಲ್ಲಿ ಪ್ರಥಮ, ವಾಲಿಬಾಲ್‌ನಲ್ಲಿ ದ್ವಿತೀಯ, ರಿಲೇಯಲ್ಲಿ ಹೇಮಂತ್ ತಂಡ ದ್ವಿತೀಯ, ವಿದ್ಯಾರ್ಥಿ ಹೇಮಂತ್ 3 ಸಾವಿರ, 400 ಮೀಟರ್ ಓಟದಲ್ಲಿ ಪ್ರಥಮ, ಎತ್ತರ ಜಿಗಿತ, ಉದ್ದ ಜಿಗಿತ ಶರತ್ ಪ್ರಥಮ, ನಿಖಿತಾ ತೃತಿಯ, ಡಿಂಪಲ್ ಗುಂಡು ಎಸೆತದಲ್ಲಿ ತೃತೀಯ ಬಹುಮಾನ ಪಡೆಯುವ ಮೂಲಕ ಶಾಲೆ ಸಮಗ್ರ ಪ್ರಶಸ್ತಿ ಪಡೆದಿದೆ.

ಈ ವೇಳೆ ಎಂ.ಸಿ.ತಳಲು ಸರ್ಕಾರಿ ಪ್ರೌಢಶಾಲೆ ಮುಖ್ಯಶಿಕ್ಷಕ ರಾಜು, ಗ್ರಾಪಂ ಸದಸ್ಯ ಪ್ರಕಾಶ್ ಚಂದ್ರು, ಭವನೀಶ್, ರಾಜಕುಮಾರ್, ಕೆಂಡನಾಯಕ, ಶಿವಕುಮಾರ್, ಶಿಕ್ಷಕರಾದ ಗುರುಸ್ವಾಮಿ, ಶಾರದಾ, ಅಶೋಕ್, ವಿಜುಕುಮಾರ್, ಪದ್ಮಶ್ರೀ, ಸುನೀಲ್, ಕುಮಾರ್, ರೋಜಾ ಇನ್ನಿತರರಿದ್ದರು.

ಮತ್ತೆ ಕುಡಿತದ ಚಟಕ್ಕೆ ಬಲಿಯಾಗದಿರಿ

ಮದ್ಯವರ್ಜನ ಶಿಬಿರದಲ್ಲಿ ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಪ್ರಭುಸ್ವಾಮಿ



ಕೋಟೆಯಲ್ಲಿ ಮದ್ಯವರ್ಜನ ಶಿಬಿರ ನಡೆಯಿತು.

ಹೆಚ್.ಡಿ.ಕೋಟೆ, ಸೆ.5– ಪಟ್ಟಣದಲ್ಲಿ ಕಳೆದ 8 ದಿನಗಳಿಂದ ನಡೆದ ಮದ್ಯವರ್ಜನ ಶಿಬಿರದಲ್ಲಿ ಸುಮಾರು 40 ಶಿಬಿರಾರ್ಥಿಗಳಿಂದ ಕುಡಿತದ ಚಟ ಬಿಡಿಸಲಾಗಿದೆ ಎಂದು ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಪ್ರಭುಸ್ವಾಮಿ ತಿಳಿಸಿದರು.

ಪಟ್ಟಣದ ಗುರು ಭವನದಲ್ಲಿ ಹೆಚ್.ಡಿ.ಕೋಟೆ ತಾಲೂಕು ಮದ್ಯವರ್ಜನ ಶಿಬಿರ ವ್ಯವಸ್ಥಾಪನಾ ಸಮಿತಿ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬಿಸಿ ಟ್ರಸ್ಟ್ ಸಹಯೋಗದೊಂದಿಗೆ ನಡೆದ 1848ನೇ ಮದ್ಯವರ್ಜನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಕುಡಿತಕ್ಕೆ ದಾಸನಾಗುವುದು ಸುಲಭ. ಆದರೆ ಅದರಿಂದ ಆಗುವ ಅನಾಹುತ ಹಲವು. ಕುಡಿತದಿಂದ ಕುಟುಂಬ ನಿರ್ವಹಣೆಯಿಂದ ಹಿಡಿದು ಸಮಾಜದಲ್ಲೂ ಏರುಪೇರಾಗುತ್ತದೆ. ಕುಡಿತವನ್ನು ಬಿಡಿಸಬೇಕಾದರೆ ತುಂಬಾ ಕಸರತ್ತು ಮಾಡಬೇಕಾಗುತ್ತದೆ. ಆದ್ದರಿಂದ ಈ ಶಿಬಿರದಲ್ಲಿ ಕುಡಿತದಿಂದ ಬಿಡುಗಡೆ ಹೊಂದಿದ ಬಳಿಕ ಮತ್ತೆ ಕುಡಿತಕ್ಕೆ ಬಲಿಯಾಗದಿರಿ ಎಂದು ಕರೆ ನೀಡಿದರು.

ಯೋಜನೆ ಹಿರಿಯ ಜಿಲ್ಲಾ ನಿರ್ದೇಶಕ ವಿಜಯಕುಮಾರ್ ನಾಗನಾಳ ಮಾತನಾಡಿ, ಶಿಬಿರದಲ್ಲಿ ಭಾಗವಹಿಸಿರುವ ಶಿಬಿರಾರ್ಥಿಗಳು ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಕುಡಿದು ಈ ಶಿಬಿರಕ್ಕೆ ಸೇರ್ಪಡೆಗೊಂಡಿದ್ದೀರಿ. ಕಳೆದ 8 ದಿನದಿಂದ ಕುಡಿತ ಚಟ ಬಿಡಿಸಲು ಹಲವು ಮಂದಿ ಹಗಲು ರಾತ್ರಿ ದುಡಿದಿದ್ದಾರೆ. ಆದ್ದರಿಂದ ಅವರ ಶ್ರಮ ವ್ಯರ್ಥವಾಗದ ರೀತಿ ನಡೆದುಕೊಂಡು ಹೋಗಬೇಕು ಕರೆ ನೀಡಿದರು.

ವ್ಯಸನ ಮುಕ್ತ ಸಮಾಜ ನಿರ್ಮಾಣ ಮಾಡಲು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸತತ ಪ್ರಯತ್ನ ಮಾಡುತ್ತಾ ಬಂದಿದೆ. ಮುಂದೆಯೂ ಇದೇ ದಾರಿಯಲ್ಲಿ ಯೋಜನೆ ನಡೆಯಲಿದೆ. ನಮ್ಮ ಮನೆಯ ಸಮಸ್ಯೆಯನ್ನೇ ನಾವು ಬಗೆಹರಿಸಿಕೊಳ್ಳಲು ಸಾಧ್ಯವಿಲ್ಲದ ಸಂದರ್ಭದಲ್ಲಿ ನಮ್ಮ ಸಮಸ್ಯೆ ಬಗೆಹರಿಸಲು ಒಂದು ಸಂಸ್ಥೆ ಮುಂದಾಗಿದೆ. ಆ ಕಾರಣಕ್ಕಾದರೂ ಸಹ ಶಿಬಿರಾರ್ಥಿಗಳು ಶಿಬಿರದ ಪ್ರಯೋಜನ ಪಡೆದು, ದುಶ್ಚಟದಿಂದ ದೂರವಾಗಿ ಎಂದರು.

ಪಡುವಲು ವಿರಕ್ತ ಮಠ ಬಿಡುಗಲು ಮಹದೇವಸ್ವಾಮಿ ಆಶೀರ್ವಚನ ನೀಡಿದರು. ಇದೇ ಸಂದರ್ಭ ಶಿಬಿರಾರ್ಥಿಗಳು ತಮ್ಮ ಅನಿಸಿಕೆ ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಯೋಜನೆ ಪ್ರಾದೇಶಿಕ ನಿರ್ದೇಶಕ ಜಯರಾಮ ಬಿ.ನೆಲ್ಲಿತ್ತಾಯ, ತಾಲೂಕು ಯೋಜನಾಧಿಕಾರಿ ಭಾಸ್ಕರ್, ಸಮಿತಿ ಗೌರವಾಧ್ಯಕ್ಷ ಡೈರಿ ಶ್ರೀಕಾಂತ್, ಅಧ್ಯಕ್ಷ ವೆಂಕಟೇಶ್, ಉಪಾಧ್ಯಕ್ಷೆ ಶಾಂತಮ್ಮ, ಚಾ.ನಂಜುಂಡಮೂರ್ತಿ, ವರ್ತಕರ ಸಂಘದ ಅಧ್ಯಕ್ಷ ವಿನಯ, ನಾಗಣ್ಣ, ನಾಗರಾಜು, ಕಸಾಪ ಅಧ್ಯಕ್ಷ ಪ್ರಮೋದ್, ವೀರಪ್ಪ ರಾಜೇಗೌಡ, ಸ್ವಾಮಿ, ಸೋಮೇಶ್, ಜಯಂತ್, ಶಾಂತಮ್ಮ, ಯಶವಂತ್, ಭಾಸ್ಕರ್, ಪತ್ರಕರ್ತರ ಸಂಘದ ಅಧ್ಯಕ್ಷ ಬೀಚನಹಳ್ಳಿ ಮಂಜು, ಮಾಧವನಾಯಕ, ಆರಕ್ಷಕ ನಿರೀಕ್ಷಕ ಶಬ್ಬೀರ್ ಹುಸೇನ್, ಉಪ ನಿರೀಕ್ಷಕ ಪ್ರಕಾಶ್, ಮೇಲ್ವಿಚಾರಕರಾದ ಪವಿತ್ರ ಭಾರತಿ, ರೇಖಾ, ವರ್ಷ, ಲೋಕೇಶ್, ಸುರೇಶ್, ರಾಜು, ಕೃಷ್ಣಮೂರ್ತಿ, ಆನಂದ, ವೀಣಾ, ಮಲ್ಲಮ್ಮ, ಕಾರ್ಯಕಾರಿ ಮಂಡಳಿ ಸದಸ್ಯರಾದ ರಾಧಾ, ಗೌರಮ್ಮ, ಮಹೇಶ್, ಚಿನ್ನಮ್ಮ, ಲೋಕೇಶ್, ಛಾಯಮಣಿ, ಕೆಂಪಮ್ಮ, ಪ್ರಭ, ವೀಣಾ, ರಶೀದ ಬೇಗಂ, ರಾಧಾ ಹಾಗೂ ಸೇವಾ ಪ್ರತಿನಿಧಿಗಳು ಹಾಜರಿದ್ದರು.

ಸಿಎಂರನ್ನು ಅಭಿನಂದಿಸಿದ ಪುರಸಭೆ ಅಧ್ಯಕ್ಷೆ, ಉಪಾಧ್ಯಕ್ಷೆ

ಪುರಸಭೆ ಅಭಿವೃದ್ಧಿಗೆ ಮುಖ್ಯಮಂತ್ರಿ ಸಲಹೆ



ಬೆಂಗಳೂರಿನಲ್ಲಿ ಸಿಎಂ ಸಿದ್ದರಾಮಯ್ಯನವರನ್ನು ಪುರಸಭೆ ನೂತನ ಅಧ್ಯಕ್ಷೆ ವಸಂತ, ಉಪಾಧ್ಯಕ್ಷೆ ಎಂ.ರಾಜೇಶ್ವರಿ ಅಭಿನಂದಿಸಿದರು.

ತಿ.ನರಸೀಪುರ, ಸೆ.5– ಪಟ್ಟಣದ ಪುರಸಭೆ ನೂತನ ಅಧ್ಯಕ್ಷೆ ಬಿ.ವಸಂತ ಶ್ರೀಕಂಠ, ಉಪಾಧ್ಯಕ್ಷೆ ಎಂ.ರಾಜೇಶ್ವರಿ ರಾಘವೇಂದ್ರ ಅವರು ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಭೇಟಿ ಮಾಡಿ ಅಭಿನಂದಿಸಿದರು.

ಬೆಂಗಳೂರಿನ ತಮ್ಮ ನಿವಾಸದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಸಿಎಂ ಸಿದ್ದರಾಮಯ್ಯ, ತಿ.ನರಸೀಪುರ ಪುರಸಭೆಯನ್ನು ಎಲ್ಲರೂ ಒಟ್ಟಾಗಿ ಸೇರಿ ಸಮಗ್ರವಾಗಿ ಅಭಿವೃದ್ಧಿಗೊಳಿಸಿ. ಪುರಸಭೆ ಅಭಿವೃದ್ಧಿಗೆ ಮಾಸ್ಟರ್ ಪ್ಲಾನ್ ತಯಾರಿಸಿ ಅದನ್ನು ಕಳುಹಿಸಿಕೊಡಿ. ಅದಕ್ಕೆ ಬೇಕಾದ ಅನುದಾನವನ್ನು ಹಂತ ಹಂತವಾಗಿ ಬಿಡುಗಡೆ ಮಾಡುತ್ತೇನೆ. ಪಟ್ಟಣದ ಎಲ್ಲಾ ವಾರ್ಡ್‌ಗಳಲ್ಲಿ ರಸ್ತೆ ಚರಂಡಿಯನ್ನು ಅಭಿವೃದ್ಧಿಪಡಿಸಿ ಎಂದು ತಿಳಿಸಿದರು.

ಪುರಸಭೆಯಲ್ಲಿ ಯಾವುದೇ ಅಹಿತಕರ ಘಟನೆಗಳಿಗೆ ಆಸ್ಪದ ನೀಡದೆ ಕೆಲಸ ನಿರ್ವಹಿಸಿ, ಪುರಸಭೆಗೆ ಬರುವ ನಾಗರಿಕರಿಗೆ ಯಾವುದೇ ತೊಂದರೆಯಾಗದಂತೆ ಕೆಲಸ ಮಾಡಿಕೊಡಿ ಎಂದರು.

ಪುರಸಭೆ ಮಾಜಿ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ, ಎನ್.ಸೋಮು, ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸೈಯದ್ ಅಹಮದ್, ಸದಸ್ಯರಾದ ಸಿ.ಪ್ರಕಾಶ್, ಬಾದಾಮಿ ಮಂಜು, ಎಲ್.ಮಂಜುನಾಥ್, ಮೆಡಿಕಲ್ ನಾಗರಾಜು, ಸಿದ್ದು, ಮಾಜಿ ಸದಸ್ಯ ಎಂ.ರಾಘವೇಂದ್ರ, ತಾಪಂ ಮಾಜಿ ಅಧ್ಯಕ್ಷರಾದ ಎಂ.ರಮೇಶ್, ಎಂ.ಮಲ್ಲಿಕಾರ್ಜುನಸ್ವಾಮಿ, ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಗ್ರಾಪಂ ಮಾಜಿ ಅಧ್ಯಕ್ಷ ಅಕ್ಕೂರು ಗುರುಮೂರ್ತಿ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೆಹುಂಡಿ ಮಹೇಶ್, ನಿರ್ದೇಶಕ ಹೆಚ್.ಸಿ.ಅರುಣ್ ಕುಮಾರ್, ಗುತ್ತಿಗೆದಾರ ರಾಜೇಗೌಡ, ಮುರುಳಿ, ಬಸವೇಶ್ವರ ಗ್ಯಾಸ್ ಜಗದೀಶ್, ಸ್ವಾಮಿ, ಮೂಗೂರು ಹರೀಶ್, ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕ ಅಮ್ಜದ್ ಖಾನ್ ಸೇರಿದಂತೆ ಇತರರಿದ್ದರು.

ಕಪ್ಪನಕಟ್ಟೆ ಹಾಡಿಯಲ್ಲಿ ಸೀಮಂತ ಕಾರ್ಯಕ್ರಮ



ಕಪ್ಪನಕಟ್ಟೆ ಹಾಡಿಯಲ್ಲಿ ಸೀಮಂತ ಕಾರ್ಯಕ್ರಮ ನಡೆಯಿತು.

ಹನಗೋಡು, ಸೆ.5– ಗರ್ಭಿಣಿ ಎಂದು ತಿಳಿದ ಮೇಲೆ ಆಸ್ಪತ್ರೆಗೆ ಆಗಮಿಸಿ ಸೂಕ್ತ ಚಿಕಿತ್ಸೆ ಪಡೆದು ಆರೋಗ್ಯವಂತ ಮಗುವಿಗೆ ಜನ್ಮ ನೀಡುವಂತೆ ದೊಡ್ಡಹೆಜ್ಜೂರು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಸುಧಾಕರ್ ತಿಳಿಸಿದರು.

ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸರಗೂರು ಆಶ್ರಯ ಹಸ್ತ ಟ್ರಸ್ಟ್ ಮತ್ತು ದೊಡ್ಡಹೆಜ್ಜೂರು ಪ್ರಾಥಮಿಕ ಆರೋಗ್ಯ ಕೇಂದ್ರ, ಶಿಶು ಅಭಿವೃದ್ಧಿ ಯೋಜನಾ ಇಲಾಖೆ ಸಹಯೋಗದಲ್ಲಿ ಸಮೀಪದ ಕಪ್ಪನಕಟ್ಟೆ ಹಾಡಿಯಲ್ಲಿ ನಡೆದ ಸೀಮಂತ ಕಾರ್ಯಕ್ರಮವನ್ನು ದೀಪಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಗಿರಿಜನರು ಆಸ್ಪತ್ರೆಗೆ ಬಂದು ತೋರಿಸಿಕೊಂಡು ಆರೋಗ್ಯ ಸೇವೆಗಳನ್ನು ಪಡೆದುಕೊಳ್ಳಬೇಕು. ಗಿರಿಜನ ಮಹಿಳೆಯರಲ್ಲಿ ಗರ್ಭ ಧರಿಸುವ ಪ್ರತಿಯೊಬ್ಬರಲ್ಲೂ ರಕ್ತಹೀನತೆ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತಿದ್ದು, ಹಸಿರು ತರಕಾರಿ, ಹೊಲದಲ್ಲಿ ಬೆಳೆಯುವ ಸೊಪ್ಪು, ಅಂಗನವಾಡಿಯಲ್ಲಿ ಕೊಡುವ ಪೌಷ್ಟಿಕ ಆಹಾರ ಸೇವಿಸಬೇಕು. ಹಾಗೆಯೇ 18 ವರ್ಷಕ್ಕಿಂತ ಕಡಿಮೆ ವಯಸ್ಸಿನಲ್ಲಿ ಮದುವೆ ಮಾಡುವುದರಿಂದ ಆಗುವ ಶಿಕ್ಷೆ ಬಗ್ಗೆ ತಿಳಿಸಿದರು. ಸ್ವಾಮಿ ವಿವೇಕಾನುದ ಯೂತ್ ಮೂವ್‌ಮೆಂಟ್ ಸಮುದಾಯ ಆಧಾರಿತ ಕಾರ್ಯಕ್ರಮಗಳ ಸಂಯೋಜಕ ಶಿವಲಿಂಗ, ವಿವೇಕಾನಂದ ಸ್ಮಾರಕ ಆಸ್ಪತ್ರೆಯಲ್ಲಿರುವ ಆರೋಗ್ಯ ಸೇವೆಗಳ ಬಗ್ಗೆ ತಿಳಿಸಿದರು

ಕಾರ್ಯಕ್ರಮದಲ್ಲಿ 6 ಮಂದಿ ಗರ್ಭಿಣಿಯರಿಗೆ ತಾಂಬೂಲ ನೀಡಲಾಯಿತು. ಈ ವೇಳೆ ಆಶಾ ಕಾರ್ಯಕರ್ತೆ ಪೂರ್ಣಿಮಾ, ಅಂಗನವಾಡಿ ಕಾರ್ಯಕರ್ತೆ ಕುಮಾರಿ, ಹಾಡಿ ಮುಖಂಡರಾದ ವಿಜಯ್, ಸ್ವಾಮಿ ವಿವೇಕಾನಂದ ಯೂತ್‌ಮೂವ್ ಮೆಂಟ್ ಆರೋಗ್ಯ ಕಾರ್ಯಕರ್ತರಾದ ಪವನ್ ಕುಮಾರ್, ಹಾಡಿಯ ಮಹಿಳೆಯರು, ಮಕ್ಕಳು ಇದ್ದರು.

ಪೋಷಕರು ತಮ್ಮ ಮಕ್ಕಳಲ್ಲಿರುವ ಪ್ರತಿಭೆ ಪ್ರೋತ್ಸಾಹಿಸಿ



ಪ್ರತಿಭಾ ಕಾರಂಜಿಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಮಹದೇವ್ ಮಾತನಾಡಿದರು.

ಹಿರೀಕ್ಯಾತನಹಳ್ಳಿ, ಸೆ.5– ಪೋಷಕರು ತಮ್ಮ ಮಕ್ಕಳಲ್ಲಿರುವ ಪ್ರತಿಭೆಯನ್ನು ಪ್ರೋತ್ಸಾಹಿಸಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಮಹದೇವ್ ತಿಳಿಸಿದರು.

ಹುಣಸೂರು ತಾಲೂಕಿನ ಹಿರಿಕ್ಯಾತನಹಳ್ಳಿಯಲ್ಲಿ ಅನುದಾನಿತ ವೇಣುಗೋಪಾಲ ವಿದ್ಯಾಸಂಸ್ಥೆ ಆವರಣದಲ್ಲಿ ನಡೆದ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಉದ್ಘಾಟಿಸಿ ಮಾತನಾಡಿದ ಅವರು, ಪೋಷಕರು ತಮ್ಮ ಮಕ್ಕಳಲ್ಲಿ ಅಡಗಿರುವ ಪ್ರತಿಭೆ ತಿಳಿಯಲು ಇಂತಹ ಕಾರ್ಯಕ್ರಮದಲ್ಲಿ ಭಾಗಿಯಾಗಬೇಕು. ಇದರಿಂದ ತಮ್ಮ ಮಕ್ಕಳ ಪ್ರತಿಭೆಯನ್ನು ಶಿಕ್ಷಕರು ಯಾವ ರೀತಿ ಹೊರ ತಂದಿದ್ದಾರೆ ಎಂಬುದನ್ನು ಮನಗಂಡು ಪೋಷಕರು ಮಕ್ಕಳ ಪ್ರತಿಭೆಗೆ ಮತ್ತಷ್ಟು ಉತ್ತೇಜನ ನೀಡುವಂತಹ ಕೆಲಸವಾಗುತ್ತದೆ ಎಂದರು.

ಪ್ರತಿಭಾ ಕಾರಂಜಿ ವಿದ್ಯಾರ್ಥಿಗಳಿಗೆ ಒಂದು ಸಾಂಸ್ಕೃತಿಕ ಹಬ್ಬವಿದ್ದಂತೆ. ಶಿಕ್ಷಕರು ಪೋಷಕರು ಮಕ್ಕಳಲ್ಲಿರುವ ಪ್ರತಿಭೆ ಬಗ್ಗೆ ಹೆಚ್ಚು ಗಮನ ಹರಿಸಿ ಅಂತಹ ಮಕ್ಕಳನ್ನು ತಯಾರು ಮಾಡಬೇಕು. ಮೂಲಭೂತ ಕರ್ತವ್ಯಗಳಲ್ಲಿ 11ನೇ ಕರ್ತವ್ಯವನ್ನು ಸರ್ಕಾರ ಹೊಸದಾಗಿ ಸೇರಿಸಲ್ಪಟ್ಟಿದೆ. ಕಾರಣ 6 ರಿಂದ 14 ವರ್ಷದೊಳಗಿನ ಯಾವುದೇ ಮಕ್ಕಳು ಶಿಕ್ಷಣ ವಂಚಿತರಾಗಬಾರದು ಮೌಲ್ಯಯುತ ಶಿಕ್ಷಣ ನೀಡಲು ಕಟಿಬದ್ಧರಾಗಬೇಕು ಎಂದು ಶಿಕ್ಷಕರಿಗೆ ಕಿವಿಮಾತು ಹೇಳಿದರು.

ಪ್ರೌಢಶಾಲಾ ಮುಖ್ಯ ಶಿಕ್ಷಕಿ ಸರಳ ಮಾತನಾಡಿದರು. ಕಾರ್ಯಕ್ರಮದಲ್ಲಿ ವೇಣುಗೋಪಾಲ ವಿದ್ಯಾಸಂಸ್ಥೆ ಅಧ್ಯಕ್ಷ ವಿಶ್ವೇಶ್ವರಯ್ಯ, ನಿರ್ದೇಶಕ ಹೆಚ್.ಆರ್.ಸುರೇಶ್, ಗ್ರಾಪಂ ಸದಸ್ಯೆ ಸುಜಾತ, ಡೈರಿ ಮಾಜಿ ಅಧ್ಯಕ್ಷ ಹರೀಶ್, ಸಮನ್ವಯಾಧಿಕಾರಿ ಹೇಮಲತಾ, ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಲೋಕೇಶ್, ಸಿಆರ್‌ಪಿ ತೀರ್ಥಕುಮಾರ್, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಪ್ರಾಂಶುಪಾಲ ರಾಮಶೆಟ್ಟಿ, ವಿವಿಧ ಶಾಲೆಯ ಮುಖ್ಯ ಶಿಕ್ಷಕರಾದ ವೇಣುಗೋಪಾಲ್, ಮಹೇಶ್, ಧರ್ಮರಾಜ್, ಅರವಿಂದ್, ಶಿವಣ್ಣ, ಉಮೇಶ್, ಆನಂದ್, ರಾಚಯ್ಯ ಸೇರಿದಂತೆ ವಿವಿಧ ಶಾಲೆ ಸಹ ಶಿಕ್ಷಕರು, ವಿದ್ಯಾರ್ಥಿಗಳು ಹಾಜರಿದ್ದರು. ಇದೇ ಸಂದರ್ಭ ವಿವಿಧ ಶಾಲೆಗಳಿಂದ ತೀರ್ಪುಗಾರ ಶಿಕ್ಷಕರನ್ನು ಸನ್ಮಾನಿಸಲಾಯಿತು.

ಮೈಮುಲ್‌ನಿಂದ ರೈತರ ಹಾಲಿಗೆ ಅಧಿಕ ದರ

ಸರ್ವ ಸದಸ್ಯರ ಸಭೆಯಲ್ಲಿ ಮೈಮುಲ್ ಅಧ್ಯಕ್ಷ ಆರ್.ಚಲುವರಾಜು



ಯಾಚೇನಹಳ್ಳಿಯಲ್ಲಿ ಮೈಮುಲ್ ಅಧ್ಯಕ್ಷ ಆರ್.ಚಲುವರಾಜು ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಸೆ.5– ರೈತರ ಹಿತ ಕಾಪಾಡಲು, ಹೈನುಗಾರಿಕೆಗೆ ಉತ್ತೇಜನ ನೀಡಲು ರಾಜ್ಯದಲ್ಲೇ ನಮ್ಮ ಒಕ್ಕೂಟದಿಂದ ಹಾಲಿಗೆ ಅಧಿಕ ದರ ನೀಡುತ್ತಿದ್ದು, ಮುಂದಿನ ದಿನಗಳಲ್ಲಿ ಮ್ಯಾಟ್ ಮತ್ತು ಹಾಲು ಕರೆಯುವ ಯಂತ್ರಗಳನ್ನು ನೀಡಲಾಗುವುದು ಎಂದು ಮೈಮುಲ್ ಅಧ್ಯಕ್ಷ ಆರ್.ಚಲುವರಾಜು ತಿಳಿಸಿದರು.

ತಾಲೂಕಿನ ಯಾಚೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ನಡೆದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ರೈತರ ಬೆಳೆಗಳಿಗೆ ವೈಜ್ಞಾನಿಕ ದರ ಸಿಗದಿರುವ ಕಾಲದಲ್ಲಿ ಹಾಲಿಗೆ ನಿಖರ ಬೆಲೆ ಸಿಗುತ್ತಿದೆ. ಮಂಡ್ಯದಲ್ಲಿ 2 ರೂ. ಹಾಗೂ ಪಕ್ಕದ ಚಾಮರಾಜನಗರ ಒಕ್ಕೂಟ 3 ರೂ. ಕಡಿಮೆ ದರ ನೀಡುತ್ತಿವೆ ಎಂದರು.

ಒಕ್ಕೂಟಕ್ಕೆ ಮಾರಾಟಕ್ಕಿಂತಲೂ ಹೆಚ್ಚಿನ ಹಾಲು ಸರಬರಾಜು ಆಗುತ್ತಿದ್ದು, ಹೆಚ್ಚುವರಿ ಹಾಲನ್ನು ಪುಡಿಯಾಗಿ ಪರಿವರ್ತಿಸಿ, ಹೊರ ರಾಜ್ಯ ಹಾಗೂ ವಿದೇಶಗಳಿಗೆ ರಫ್ತು ಮಾಡಲಾಗುತ್ತಿದೆ. ಜಿಲ್ಲೆಯಲ್ಲಿ ತಾಂತ್ರಿಕ ಕಾರಣಗಳಿಂದ ಸ್ಥಗಿತಗೊಂಡಿರುವ ಹೈನುಗಾರಿಕೆ ಯೋಜನೆಗಳನ್ನು ಪುನಾರಂಭಿಸಲು ಆಡಳಿತ ಮಂಡಳಿ ನಿರ್ದೇಶಕರ ಜೊತೆಗೂಡಿ ಚಿಂತನೆ ನಡೆಸಿದ್ದೇನೆ. ಯಾವುದಾದರೂ ಯೋಜನೆ ನೀಡುವುದಾದರೆ ಮೊದಲ ಆದ್ಯತೆ ಯಾಚೇನಹಳ್ಳಿ ಡೈರಿಗೆ ನೀಡುತ್ತೇನೆ ಎಂದು ಭರವಸೆ ನೀಡಿದರು.

ಪಿಎಸಿಎಸ್ ಸಂಸ್ಥಾಪಕ ಅಧ್ಯಕ್ಷ ವೈ.ಎನ್.ಶಂಕರೇಗೌಡ ಮಾತನಾಡಿ, ರೈತರು, ಷೇರುದಾರರು ಅಪಘಾತ ಮತ್ತು ಇನ್ನಿತರ ಸಂದರ್ಭಗಳಲ್ಲಿ ಅಕಾಲಿಕ ಮರಣಕ್ಕೀಡಾದಾಗ ಕುಟುಂಬದ ಸದಸ್ಯರಿಗೆ ಆರ್ಥಿಕ ನೆರವು ನೀಡಲು ಯಾಚೇನಹಳ್ಳಿ ಸಹಕಾರಿ ಸಂಸ್ಥೆಗಳಲ್ಲಿ ಪ್ರಥಮ ಬಾರಿಗೆ ಜೀವ ವಿಮಾ ಸೌಲಭ್ಯ ಕಲ್ಪಿಸಲಾಗಿದೆ. ಸದಸ್ಯರೆಲ್ಲರೂ ದಾಖಲೆ ಸಲ್ಲಿಸಿ, ನೋಂದಣಿ ಮಾಡಿಕೊಳ್ಳಬೇಕು. ಸಚಿವರ ಕಾಳಜಿಯಿಂದ ಗ್ರಾಮದಲ್ಲಿ ಸ್ಥಳೀಯವಾಗಿ ಪ್ರಾಥಮಿಕ ಪಶು ಚಿಕಿತ್ಸಾಲಯ ಆರಂಭಿಸಲಾಗಿದೆ ಎಂದರು.

ಡೈರಿ ಅಧ್ಯಕ್ಷ ವೈ.ಎಂ.ಮಲ್ಲೇಶ್ ಮಾತನಾಡಿ, 2023–24ನೇ ಸಾಲಿನಲ್ಲಿ 8,47,672 ಲೀ. ಹಾಲನ್ನು ಸಂಗ್ರಹಿಸಿ ಮಾರಾಟ ಮಾಡಿ 28,80,000 ರೂ. ವಹಿವಾಟು ನಡೆಸಲಾಗಿದೆ. ವಾರ್ಷಿಕವಾಗಿ 10,11,572 ರೂ. ನಿವ್ವಳ ಲಾಭ ಗಳಿಸಲಾಗಿದೆ ಎಂದರು. ಮೈಮುಲ್ ಮಾರ್ಗ ವಿಸ್ತರಣಾಧಿಕಾರಿ ದಿವ್ಯಶ್ರೀ ಸಂಘದ ವಾರ್ಷಿಕ ವರದಿ ಮಂಡಿಸಿದರು. ಸಂಘಕ್ಕೆ ಗುಣಮಟ್ಟದ ಹಾಲು ಸರಬರಾಜು ಮಾಡಿದ ವೈ.ಕೆ.ಪ್ರಕಾಶ್, ವೈ.ಎಂ.ಕೃಷ್ಣ, ಪುಟ್ಟಸಿದ್ದು, ಜಯರಾಮು, ಲಕ್ಷ್ಮೀ, ಸೋಮಣ್ಣ, ವೈ.ಎಂ. ನಾಗರಾಜು, ವೈ.ಕೆ.ಕೆಂಪೇಗೌಡ ಹಾಗೂ ಚಂದ್ರಮ್ಮ ಅವರನ್ನು ಸನ್ಮಾನಿಸಲಾಯಿತು. ನವದೆಹಲಿಯಲ್ಲಿ ಗಣರಾಜ್ಯೋತ್ಸವದ ಪೆರೇಡ್‌ನಲ್ಲಿ ಗೌರವಾನ್ವಿತ ರಾಷ್ಟ್ರಪತಿಗಳಿಗೆ ವಂದನೆ ಸಲ್ಲಿಸಲು ಭಾಗವಹಿಸಿದ್ದ ಗ್ರಾಮದ ವಿದ್ಯಾರ್ಥಿನಿ ಟಿ. ಭವಾನಿ ಅವರನ್ನು ಸನ್ಮಾನಿಸಲಾಯಿತು.

ಸಭೆಯಲ್ಲಿ ಉಪಾಧ್ಯಕ್ಷ ದೊಡ್ಡಸಿದ್ದೇಗೌಡ, ವೈ.ಎಂ.ಚಂದ್ರು, ನಾಡಗೌಡ ವೈ.ಹೆಚ್.ಹನುಮಂತೇಗೌಡ, ನಿರ್ದೇಶಕರಾದ ವೈ.ಎಸ್. ಶಿವಕುಮಾರ್, ವೈ.ಜಿ.ಪುಟ್ಟರಾಜು, ಬಸವರಾಜು, ವೈ.ಕೆ.ಉಮೇಶ್, ನಾಗಮ್ಮ, ವೈ.ಕೆ.ಪ್ರಕಾಶ್, ನಾಗಮ್ಮ, ದುರ್ಗೇಶ್, ಮಹೇಶ್, ಮಹದೇವ, ಕಾರ್ಯ ನಿರ್ವಾಹಕ ವೈ.ಕೆ.ಕ್ಯಾತೇಗೌಡ, ಕಾರ್ಯದರ್ಶಿ ವೈ.ಎಸ್.ರಾಹುಲ್‌ಗೌಡ, ಹಾಲು ಪರೀಕ್ಷಕ ವೈ.ಕೆ.ಮಹೇಶ, ಸಹಾಯಕರಾದ ವೈ.ಎಸ್. ಆನಂದ, ವೈ.ಡಿ.ಶಶಿದೇವ್, ಸಿದ್ದೇಗೌಡ ಇನ್ನಿತರರಿದ್ದರು.

ಬಿಜೆಪಿಗೆ ಹೆಚ್ಚು ಸದಸ್ಯರನ್ನು ನೋಂದಾಯಿಸಿ; ವಿಕಸಿತ ಭಾರತ ನಿರ್ಮಾಣಕ್ಕೆ ಶ್ರಮಿಸಿ

ಸಂಸದ ಯದುವೀರ್ ಮನವಿ

ಮೈಸೂರು,ಸೆ.5(ಎಂಟಿವೈ)- ಬಿಜೆಪಿ ಸದಸ್ಯತ್ವ ಅಭಿಯಾನವನ್ನು ಪರಿಣಾಮಕಾರಿಯಾಗಿ ನಡೆಸಿ, ಹೆಚ್ಚಿನ ಸದಸ್ಯರನ್ನು ನೋಂದಣಿ ಮಾಡಿಕೊಳ್ಳುವ ಮೂಲಕ ವಿಕಸಿತ ಹಾಗೂ ಶ್ರೇಷ್ಠ ಭಾರತ ನಿರ್ಮಾಣಕ್ಕೆ ಶ್ರಮಿಸಬೇಕು ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮನವಿ ಮಾಡಿದರು.

ಮೈಸೂರಿನ ಚಾಮರಾಜ ಮೊಹಲ್ಲಾದಲ್ಲಿರುವ ಬಿಜೆಪಿ ಕಚೇರಿ ಮುಂಭಾಗ ಬಿಜೆಪಿ ನಗರ ಘಟಕದ ವತಿಯಿಂದ ಗುರುವಾರ ಆಯೋಜಿಸಿದ್ದ 'ಬಿಜೆಪಿ ಸದಸ್ಯತ್ವ ಅಭಿಯಾನ-2024' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರು ವಿಕಸಿತ ಭಾರತ ನಿರ್ಮಾಣದ ಸಂಕಲ್ಪ ಮಾಡಿದ್ದು, ಇದರ ಉದ್ದೇಶದಿಂದ ಬಿಜೆಪಿ ಸದಸ್ಯತ್ವ ಅಭಿಯಾನ ಕೈಗೊಳ್ಳಲಾಗಿದೆ. ಇದನ್ನು ಸಾಕಾರಗೊಳಿಸಲು ಈ ಅಭಿಯಾನಕ್ಕೆ ಎಲ್ಲರೂ ಕೈಜೋಡಿಸಬೇಕು. ಪ್ರಜಾಪ್ರಭುತ್ವ ದೇಶವಾದ ಭಾರತದಲ್ಲಿ ಸಂವಿಧಾನಕ್ಕೆ ಬದ್ಧವಾಗಿ ಆಡಳಿತ ನಡೆಸುತ್ತಿರುವ ಏಕೈಕ ಪಕ್ಷ ಬಿಜೆಪಿ. ತನ್ನದೇ ಆದ ತತ್ವ-ಸಿದ್ಧಾಂತದ ಅಡಿಯಲ್ಲಿ ಕೆಲಸ ಮಾಡುತ್ತಿದೆ. ದೇಶದ ಹಿತ ಕಾಯಲು ವಿವಿಧ ಅಭಿವೃದ್ಧಿ ಕಾರ್ಯಕ್ರಮ ರೂಪಿಸಲಾಗಿದೆ. ಇದರ ಅಂಗವಾಗಿ ಬಿಜೆಪಿ ಸದಸ್ಯತ್ವ ರೂಪಿಸಲಾಗಿದೆ. ಪಕ್ಷದ ಕಾರ್ಯಕರ್ತರು ತಮ್ಮ ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರಿಗೆ ಪಕ್ಷದ ಸದಸ್ಯತ್ವ ಕೊಡಿಸಬೇಕು ಎಂದರು.



ಮೈಸೂರಿನ ಚಾಮರಾಜ ಮೊಹಲ್ಲಾದಲ್ಲಿರುವ ಬಿಜೆಪಿ ಕಚೇರಿ ಮುಂದೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಪ್ರತಿ 6 ವರ್ಷಗಳಿಗೊಮ್ಮೆ ಬಿಜೆಪಿ ಸದಸ್ಯತ್ವ ಅಭಿಯಾನ ನಡೆಯಲಿದ್ದು, ಮೊಬೈಲ್ ಸಂಖ್ಯೆ 88000 02024ಕ್ಕೆ ಮಿಸ್ಡ್ ಕಾಲ್ ಮಾಡುವ ಮೂಲಕ ಸದಸ್ಯತ್ವ ಪಡೆದುಕೊಳ್ಳಬೇಕು. ಪ್ರತಿ ಬೂತ್‌ನಲ್ಲಿ 300ಕ್ಕೂ ಹೆಚ್ಚು ಜನರನ್ನು ಹೊಸದಾಗಿ ಪಕ್ಷಕ್ಕೆ ಸದಸ್ಯತ್ವ ನೋಂದಣಿಗೆ ಗುರಿ ನೀಡಲಾಗಿದೆ. ಕಾರ್ಯಕರ್ತರು, ಪದಾಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ ಸಾರ್ವಜನಿಕರು ಪಕ್ಷದ ಸದಸ್ಯತ್ವ ಪಡೆದುಕೊಳ್ಳುವಂತೆ ಪ್ರೋತ್ಸಾಹಿಸಬೇಕು. ಇದರೊಂದಿಗೆ ಮತದಾನ ಪಟ್ಟಿ ಪರಿಷ್ಕರಣೆ ಕೆಲಸವೂ ಆಗಬೇಕು. ಮುಂದಿನ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಇದು ಮಹತ್ವದ ಪಾತ್ರ ವಹಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಬಿಜೆಪಿ ನಗರಾಧ್ಯಕ್ಷ, ಮಾಜಿ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಸೆ.2 ರಂದು ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರ ಮಟ್ಟದ ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿದ್ದಾರೆ. ರಾಜ್ಯ ಮಟ್ಟ ಅಭಿಯಾನವನ್ನು ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಉದ್ಘಾಟಿಸಿದ್ದಾರೆ. ಜಿಲ್ಲೆಯಲ್ಲಿ ಹೆಚ್ಚಿನ ಸದಸ್ಯತ್ವ ಸೃಷ್ಟಿಸಲು ಅವಕಾಶ ಇದೆ. ಹೀಗಾಗಿ, ಈ ನಿಟ್ಟಿನಲ್ಲಿ ಕಾರ್ಯಕರ್ತರು ಪರಿಶ್ರಮಿಸಬೇಕು. ಮುಂಬರುವ ಪಾಲಿಕೆ, ಜಿಪಂ, ತಾಪಂ, ಗ್ರಾಪಂ ಚುನಾವಣೆಗಳು ಕಾರ್ಯಕರ್ತರ ಚುನಾವಣೆಯಾಗಿದ್ದು, ಇದರಲ್ಲಿ ಯಶಸ್ಸು ಸಿಗಬೇಕಾದರೆ ಸದಸ್ಯತ್ವ ಶಕ್ತಿ ಮುಖ್ಯ ಆದ್ದರಿಂದ ಇದರ ಮಹತ್ವ ಅರಿತು ಕಾರ್ಯಕರ್ತರು ಕೆಲಸ ಮಾಡಬೇಕು ಎಂದರು.

ಅಭಿಯಾನದಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಬಿಜೆಪಿ ಉಪಾಧ್ಯಕ್ಷ ಎಂ.ರಾಜೇಂದ್ರ, ಮಾಜಿ ಮೇಯರ್‌ಗಳಾದ ಸಂದೇಶ್ ಸ್ವಾಮಿ, ಶಿವಕುಮಾರ್, ಮುಖಂಡರಾದ ಬಿ.ಪಿ.ಮಂಜುನಾಥ್, ಎನ್.ವಿ.ಫಣೀಶ್, ಹೆಚ್.ಜಿ.ಗಿರಿಧರ್, ಕವೀಶ್ ಗೌಡ, ರಘು, ಕೇಬಲ್ ಮಹೇಶ್, ಡಾ.ಲಕ್ಷ್ಮೀ ಅಶ್ವಿನಿಗೌಡ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮಧ್ಯಾಹ್ನ ಬಿಜೆಪಿ ಕಚೇರಿಯಲ್ಲಿ ಜಿಲ್ಲಾ ಬಿಜೆಪಿ ವತಿಯಿಂದ ಆಯೋಜಿಸಿದ್ದ ಸದಸ್ಯತ್ವ ಅಭಿಯಾನಕ್ಕೆ ಸಂಸದ ಯದುವೀರ್ ಚಾಲನೆ ನೀಡಿದರು. ಈ ವೇಳೆ ಪಕ್ಷದ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮಾಜಿ ಶಾಸಕ ಹರ್ಷವರ್ಧನ್, ಮುಖಂಡರಾದ ಫಣೀಶ್, ಮಂಗಳಾ ಸೋಮಶೇಖರ್, ಎಸ್.ಮಹದೇವಯ್ಯ, ಮಿರ್ಲೆ ಶ್ರೀನಿವಾಸ ಗೌಡ, ದೇವರಹಳ್ಳಿ ಸೋಮಶೇಖರ್, ಹೊಸಹಳ್ಳಿ ವೆಂಕಟೇಶ್, ಬಾಲಕೃಷ್ಣ, ಕಿರಣ್ ಜಯರಾಮೇಗೌಡ ಹಾಗೂ ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮರ ಬಿದ್ದು ಸ್ಕೂಟರ್ ಸವಾರನಿಗೆ ಗಾಯ

ಮೈಸೂರು, ಸೆ.5(ಆರ್‌ಕೆ)-ಮರ ಬಿದ್ದು ಎಲೆಕ್ಟ್ರಿಕ್ ಸ್ಕೂಟರ್ ಸವಾರ ಗಾಯಗೊಂಡಿರುವ ಘಟನೆ ಮೈಸೂರಿನ ದೇವರಾಜ ಮೊಹಲ್ಲಾದ ದಿವಾನ್ಸ್ ರಸ್ತೆಯಲ್ಲಿ ಬುಧವಾರ ಮಧ್ಯಾಹ್ನ ಸಂಭವಿಸಿದೆ. ಮೈಸೂರಿನ ಕುವೆಂಪುನಗರ ಎಂ-ಬ್ಲಾಕ್ ನಿವಾಸಿ ಸುರೇಂದ್ರ ಕುಮಾರ್(32) ಗಾಯಗೊಂಡವರಾಗಿದ್ದು, ಅವರನ್ನು ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಬುಧವಾರ ಮಧ್ಯಾಹ್ನ ದಿವಾನ್ಸ್ ರಸ್ತೆಯಲ್ಲಿ ಮರವೊಂದು ಉರುಳಿಬಿದ್ದ ಪರಿಣಾಮ ಎರಡು ಕಾರು, ಒಂದು ಆಟೋ ಜಖಂಗೊಂಡಿತ್ತು. ಅದೇ ವೇಳೆ ನಂಜರಾಜ ಬಹದ್ದೂರ್ ಕಲ್ಯಾಣ ಮಂಟಪದ ಕಡೆಯಿಂದ ಬರುತ್ತಿದ್ದ ಸುರೇಂದ್ರ ಕುಮಾರ್ ತಲೆಗೂ ತೀವ್ರ ಗಾಯಗಳಾಗಿತ್ತು. ಪ್ರಕರಣ ದಾಖಲಿಸಿಕೊಂಡಿರುವ ದೇವರಾಜ ಠಾಣೆ ಪೊಲೀಸರು ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡಿದ್ದಾರೆ.

ಮರಿಮಲ್ಲಪ್ಪ ಶಾಲೆಯಲ್ಲಿ ಕಳ್ಳತನ ಮಾಡಿದ್ದ ಖದೀಮರ ಬಂಧನ

ನಗದು, ಸಿಸಿ ಕ್ಯಾಮರಾ ಡಿವಿಆರ್ ವಶಕ್ಕೆ

ಮೈಸೂರು, ಸೆ.5(ಎಸ್‌ಪಿಎನ್)- ಮೈಸೂರಿನ ವಿಜಯನಗರ 4ನೇ ಹಂತದಲ್ಲಿರುವ ಮರಿಮಲ್ಲಪ್ಪ ಶಾಲೆಯಲ್ಲಿ ನಗದು ಸೇರಿದಂತೆ ಇತರೆ ವಸ್ತುಗಳನ್ನು ಕಳ್ಳತನ ಮಾಡಿದ್ದ ನಾಲ್ವರನ್ನು ವಿಜಯನಗರ ಪೊಲೀಸರು ಬಂಧಿಸಿದ್ದು, ಇವರಿಂದ 20 ಸಾವಿರ ನಗದು, ಸಿಸಿ ಕ್ಯಾಮರಾ ಡಿವಿಆರ್ ಬಾಕ್ಸ್ ವಶಕ್ಕೆ ಪಡೆದಿದ್ದಾರೆ.

ಆ.2ರಂದು ಮರಿಮಲ್ಲಪ್ಪ ಶಾಲೆಯ ಬಾಗಿಲು ಮುರಿದು ಹಣ ಮತ್ತು ಸಿಸಿ ಕ್ಯಾಮರಾ ಡಿವಿಆರ್‌ಗಳನ್ನು ಕಳ್ಳತನ ಮಾಡಿದ್ದು, ಖದೀಮರ ಪತ್ತೆಗೆ ಹಿರಿಯ ಅಧಿಕಾರಿಗಳ ಸೂಚನೆ ಮೇರೆಗೆ ವಿಜಯನಗರ ವಿಶೇಷ ಪೊಲೀಸ್ ತಂಡ ರಚಿಸಲಾಗಿತ್ತು.

ತಾಂತ್ರಿಕ ಮತ್ತು ಮಾಹಿತಿದಾರರ ನೆರವಿನೊಂದಿಗೆ ಸೆ.3ರಂದು ವಿಜಯನಗರ 4ನೇ ಹಂತದ ಎವಿಇಐ ಶಾಲೆಯ ಬಳಿ ಕಳ್ಳತನಕ್ಕೆ ಹೊಂಚು ಹಾಕುತ್ತಿದ್ದ ಈ ನಾಲ್ಕು ಮಂದಿ ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಈ ಪ್ರಕರಣದಲ್ಲಿ ಭಾಗಿಯಾಗಿರುವುದು ಬೆಳಕಿಗೆ ಬಂದಿದೆ.

ಇದರಿಂದಾಗಿ ವಿಜಯನಗರ, ಹೆಬ್ಬಾಳ ಹಾಗೂ ಕುವೆಂಪುನಗರ ಠಾಣೆಯ ತಲಾ ಒಂದೊಂದು ಪ್ರಕರಣ ಸೇರಿದಂತೆ ಒಟ್ಟು ಮೂರು ಪ್ರಕರಣಗಳು ಪತ್ತೆಯಾಗಿದ್ದು, ಈ ತಂಡದಿಂದ ಒಟ್ಟು 20 ಸಾವಿರ ನಗದು, ಒಂದು ಡಿವಿಆರ್ ಬಾಕ್ಸ್ ಹಾಗೂ ಕೃತ್ಯಕ್ಕೆ ಬಳಸುತ್ತಿದ್ದ ಬೈಕ್ ಮತ್ತು ಕಬ್ಬಿಣದ ರಾಡ್ ಅನ್ನು ವಶಕ್ಕೆ ಪಡೆದಿದ್ದಾರೆ.

ಈ ಪತ್ತೆ ಕಾರ್ಯವನ್ನು ಎಸಿಪಿ ಜಿ.ಎಸ್.ಗಜೇಂದ್ರಪ್ರಸಾದ್ ನೇತೃತ್ವದಲ್ಲಿ ವಿಜಯನಗರ ಠಾಣೆ ಇನ್ಸ್‌ಪೆಕ್ಟರ್ ಎಸ್.ಡಿ.ಸುರೇಶ್‌ಕುಮಾರ್, ಪಿಎಸ್‌ಐ ಕೆ.ವಿಶ್ವನಾಥ್, ಡಿ.ಕೃಷ್ಣ, ವನಜಾಕ್ಷಿ ಹಾಗೂ ಸಿಬ್ಬಂದಿಗಳಾದ ಶಂಕರ್, ಪ್ರದೀಪ್, ಕೆ.ಎನ್.ಲೋಕೇಶ್, ಕೆ.ಎನ್.ಮಂಜುನಾಥ್ ಎನ್.ವೆಂಕಟೇಶ್, ಶಿವಕುಮಾರ್, ಎ.ಎಂ.ಪರಮೇಶ್, ಮಾಯಪ್ಪ ಮತ್ತು ತಾಂತ್ರಿಕ ವಿಭಾಗದ ಕುಮಾರ್ ಇದ್ದರು.

ದಸರಾ ಗಜಪಡೆ ಮಾವುತ, ಕಾವಾಡಿಗಳ ಮಕ್ಕಳಿಗಾಗಿ ಅರಮನೆ ಆವರಣದಲ್ಲಿ ತಾತ್ಕಾಲಿಕ ಶಾಲೆ ಆರಂಭ

ಮೈಸೂರು,ಸೆ.5(ಎಂಟಿವೈ)- ದಸರಾ ಮಹೋತ್ಸವ ರೂವಾರಿಗಳಾದ ಗಜಪಡೆಯ ಮಾವುತ, ಕಾವಾಡಿಗಳ ಮಕ್ಕಳಿಗೆ ಶಿಕ್ಷಣ ನೀಡಲು ಮೈಸೂರು ಅರಮನೆಯ ಆವರಣದಲ್ಲಿ ತಾತ್ಕಾಲಿಕ ಶಾಲೆ ಆರಂಭಿಸಿದ್ದು, ಓರ್ವ ನೋಡಲ್ ಅಧಿಕಾರಿ ಹಾಗೂ ಮೂವರು ಶಿಕ್ಷಕರನ್ನು ನಿಯೋಜಿಸಲಾಗಿದೆ.

ಪ್ರತಿ ವರ್ಷವೂ ದಸರಾ ಗಜಪಡೆಯ ಮಾವುತ, ಕಾವಾಡಿಗಳೊಂದಿಗೆ ಅರಮನೆಗೆ ಆಗಮಿಸಿ ಬೀಡು ಬಿಡುವ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದೆಂಬ ಉದ್ದೇಶದಿಂದ ಸಾರ್ವಜನಿಕ ಶಿಕ್ಷಣ ಇಲಾಖೆ ಟೆಂಟ್ ಶಾಲೆ ಸ್ಥಾಪಿಸಿ ಶಿಕ್ಷಣ ನೀಡಲು ಕ್ರಮ ಕೈಗೊಳ್ಳುತ್ತಿತ್ತು. ಕಳೆದ ಎರಡು ವರ್ಷದಿಂದ ಟೆಂಟ್ ಶಾಲೆಯ ಕಲ್ಪನೆ ಬದಿಗೆ ಸರಿದು, ಜಯ ಮಾರ್ತಾಂಡ ದ್ವಾರದ ಬಳಿಯಿರುವ ಕೊಠಡಿಯಲ್ಲಿ ತಾತ್ಕಾಲಿಕ ಶಾಲೆ ಸ್ಥಾಪಿಸಿ ಗಜಪಡೆಯೊಂದಿಗೆ ಆಗಮಿಸುವ ಮಕ್ಕಳಿಗೆ ಶಿಕ್ಷಣ ನೀಡಲಾಗುತ್ತಿದೆ. ಈ ಬಾರಿಯೂ ತಾತ್ಕಾಲಿಕ ಶಾಲೆ ಸ್ಥಾಪಿಸಿ, ಮಕ್ಕಳಿಗೆ ಶಿಕ್ಷಣ ಒದಗಿಸಲು ಬೇಕಾದ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.



ಮೈಸೂರು ಅರಮನೆಯ ಆವರಣದಲ್ಲಿ ದಸರಾ ಗಜಪಡೆಯ ಮಾವುತ, ಕಾವಾಡಿಗಳ ಮಕ್ಕಳಿಗಾಗಿ ತೆರೆದಿರುವ ತಾತ್ಕಾಲಿಕ ಶಾಲೆಯಲ್ಲಿ ಮಕ್ಕಳೊಂದಿಗೆ ನೋಡಲ್ ಅಧಿಕಾರಿ ಎಸ್.ಕೆ.ಮಂಜುಳಾ, ಶಿಕ್ಷಕಿ ನೂರ್‌ಫಾತಿಮಾ ಅವರು ಮಕ್ಕಳೊಂದಿಗೆ ಸಮಾಲೋಚಿಸಿದರು.

ಡಿಡಿಪಿಐ ಜವರೇಗೌಡ, ದಕ್ಷಿಣ ವಲಯದ ಬಿಇಓ ಸಿ.ಎನ್.ರಾಜು ಮಾರ್ಗದರ್ಶನದಲ್ಲಿ ತಾತ್ಕಾಲಿಕ ಶಾಲೆ ಆರಂಭಿಸಲಾಗುತ್ತಿದ್ದು, ಅದಕ್ಕಾಗಿ ಬಿಆರ್‌ಸಿ ಎಂ.ಡಿ.ಶ್ರೀಕಂಠಸ್ವಾಮಿ, ನೋಡಲ್ ಅಧಿಕಾರಿಯಾಗಿ ಎಸ್.ಕೆ.ಮಂಜುಳಾ ಕಾರ್ಯನಿರ್ವಹಿಸಲಿದ್ದಾರೆ. ಒಂದನೇ ತರಗತಿಯಿಂದ ಹತ್ತನೇ ತರಗತಿಯ ಮಕ್ಕಳಿಗೆ ಪಾಠ ಮಾಡಲು ತಾತ್ಕಾಲಿಕ ಶಾಲೆಯಲ್ಲಿ ಕಾರ್ಯನಿರ್ವಹಿಸಲು ಶಿಕ್ಷಕರಾದ ನೂರ್ ಫಾತಿಮಾ, ಮೌಸೀನ್ ತಾಜ್ ಹಾಗೂ ದಿವ್ಯಾ ಪ್ರಿಯದರ್ಶಿನಿ ಅವರನ್ನು ನಿಯೋಜಿಸಲಾಗಿದೆ.

ಮೊದಲ ದಿನವೇ 12 ಮಕ್ಕಳು ತಾತ್ಕಾಲಿಕ ಶಾಲೆಗೆ ಬಂದಿದ್ದು ಕಲಿಕಾ ಆಸಕ್ತಿ ಪ್ರದರ್ಶಿಸಿದ್ದಾರೆ. ಎರಡನೇ ತಂಡದ ಗಜಪಡೆಯ ಮಾವುತ, ಕಾವಾಡಿಗಳ ಮಕ್ಕಳೂ ಸೇರಿದಂತೆ ಸೋಮವಾರ ಇನ್ನಷ್ಟು ಮಕ್ಕಳು ಅರಮನೆಗೆ ಆಗಮಿಸಲಿದ್ದು, ಈ ಬಾರಿ ತಾತ್ಕಾಲಿಕ ಶಾಲೆಯಲ್ಲಿ 30ರಿಂದ 40 ಮಕ್ಕಳು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಮಕ್ಕಳಿಗೆ ಪ್ರತಿದಿನ ಮಧ್ಯಾಹ್ನ ಇಸ್ಕಾನ್ ಸಂಸ್ಥೆಯಿಂದ ಬಿಸಿಯೂಟ ಪೂರೈಕೆಯಾಗಲಿದೆ.

ಮಕ್ಕಳಿಗೆ ಕಲಿಕಾ ಆಸಕ್ತಿ ಹೆಚ್ಚಿಸುವ ನಿಟ್ಟಿನಲ್ಲಿ ತಾತ್ಕಾಲಿಕ ಶಾಲೆಯಲ್ಲಿ ನಲಿಕಲಿ ವಿಧಾನದಲ್ಲಿ ಪಾಠ ಮಾಡಲು ಬೇಕಾದ ಚಾರ್ಟ್‌ಗಳು, ಚಿತ್ರಗಳು, ಭೂಪಟಗಳು ಹಾಗೂ ಇನ್ನಿತರ ಭಿತ್ತಿಪತ್ರಗಳನ್ನು ತಂದಿಡಲಾಗಿದ್ದು, ಅವುಗಳನ್ನು ನಾಳೆ(ಸೆ.6)ಯಿಂದ ತಾತ್ಕಾಲಿಕ ಶಾಲೆಯಲ್ಲಿ ಅಳವಡಿಸಲಾಗುತ್ತದೆ. ಸೋಮವಾರದಿಂದ ಪೂರ್ಣ ಪ್ರಮಾಣದಲ್ಲಿ ಆರಂಭವಾಗುವ ತಾತ್ಕಾಲಿಕ ಶಾಲೆ ಪ್ರತಿದಿನ ಬೆಳಗ್ಗೆ 9.45ರಿಂದ ಮಧ್ಯಾಹ್ನ 3.30ರವರೆಗೆ ತರಗತಿ ನಡೆಯಲಿದೆ. ದಾಖಲಾಗುವ ಮಕ್ಕಳನ್ನು ತರಗತಿವಾರು ವಿಂಗಡಣೆ ಮಾಡಿ, ಮುಖ್ಯ ವಿಷಯಗಳನ್ನು ಬೋಧಿಸಲು ಕ್ರಮ ಕೈಗೊಳ್ಳಲಾಗಿದೆ.

ಬೀದರ್‌ನಲ್ಲಿ ಯುವತಿ ಮೇಲೆ ಅತ್ಯಾಚಾರ, ಕೊಲೆ: ಮೂವರ ಬಂಧನ



ಬೀದರ್: ಬೀದರ್ ಜಿಲ್ಲೆಯ ಗುಣತೀರ್ಥವಾಡಿ ಗ್ರಾಮದಲ್ಲಿ 19 ವರ್ಷದ ಯುವತಿಯೊಬ್ಬರು ಮನೆಯಿಂದ ನಾಪತ್ತೆಯಾದ ಕೆಲವೇ ದಿನಗಳಲ್ಲಿ ಶವವಾಗಿ ಪತ್ತೆಯಾಗಿದ್ದು, ಆಕೆಯ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆ.29 ರಂದು ನಡೆದ ಈ ಘಟನೆಗೆ ಸಂಬಂಧಿಸಿದಂತೆ ಮೂವರನ್ನು ಬಂಧಿಸಲಾಗಿದೆ. ಯುವತಿ ತಲೆ ಮೇಲೆ ಕಲ್ಲು ಎತ್ತಿಹಾಕಿ ಕೊಂದು ನಂತರ ಆಕೆಯ ದೇಹವನ್ನು ಪೊದೆಗಳಲ್ಲಿ ಎಸೆದಿದ್ದಾರೆ. ದುಷ್ಕರ್ಮಿಗಳು ಹತ್ಯೆಗೂ ಮುನ್ನ ಯುವತಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಶಂಕೆ ವ್ಯಕ್ತವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಆದಾಗ್ಯೂ, ತನಿಖಾಧಿಕಾರಿಗಳು ದೃಢೀಕರಣಕ್ಕಾಗಿ ವೈದ್ಯಕೀಯ ವರದಿಗಾಗಿ ಕಾಯುತ್ತಿದ್ದಾರೆ. ಸಂತ್ರಸ್ತೆ ಆ.29 ರಿಂದ ನಾಪತ್ತೆಯಾಗಿದ್ದು, ಈ ಸಂಬಂಧ ಆಕೆಯ ಪೋಷಕರು ಎರಡು ದಿನಗಳ ನಂತರ ಬಸವಕಲ್ಯಾಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದರು.

ಕದ್ದ ಚಿನ್ನಾಭರಣ ಮಾರಾಟಕ್ಕೆ ಸಹಕರಿಸುತ್ತಿದ್ದ

ಅಶೋಕಪುರಂ ಠಾಣೆ ಹೆಡ್ ಕಾನ್‌ಸ್ಟೇಬಲ್ ವಿರುದ್ಧ ಎಫ್‌ಐಆರ್

ಮೈಸೂರು, ಸೆ.5(ಆರ್‌ಕೆ)-ಕದ್ದ ಚಿನ್ನಾಭರಣ ಮಾರಾಟ ಮಾಡಲು ಸಹಕರಿಸುತ್ತಿದ್ದ ಅಶೋಕಪುರಂ ಠಾಣೆ ಹೆಡ್ ಕಾನ್‌ಸ್ಟೇಬಲ್ ವಿರುದ್ಧ ಮಂಡಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮುಖ್ಯ ಪೇದೆ ರಾಜು, ಚಿನ್ನಾಭರಣ ಮಾರಾಟ ಮಾಡಲು ನೆರವು ನೀಡುತ್ತಿದ್ದ ಆರೋಪಕ್ಕೆ ಗುರಿಯಾಗಿದ್ದಾರೆ.

ಮೈಸೂರಿನ ವಿವಿಧೆಡೆ ನಸರುಲ್ಲಾ ಬಾಬು ಮತ್ತು ಅಲೀಂ ಎಂಬುವರು ಮನೆ ಕಳವು ಮಾಡಿ ಮಂಡಿ ಠಾಣೆ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದರು. ಅವರನ್ನು ತೀವ್ರ ವಿಚಾರಣೆಗೊಳಪಡಿಸಿದಾಗ ಅವರು ಕದ್ದಿದ್ದ 400 ಗ್ರಾಂ ಚಿನ್ನಾಭರಣವನ್ನು ವ್ಯಕ್ತಿಯೊಬ್ಬ ಮಾರಾಟ ಮಾಡಲು ಮುಖ್ಯ ಪೇದೆ ರಾಜು ಸಹಕರಿಸುತ್ತಿದ್ದರು ಎಂಬುದು ಬಯಲಾಯಿತು. ಶ್ರೀರಂಗಪಟ್ಟಣ ಹಾಗೂ ಮೈಸೂರಿನ ವಿವಿಧೆಡೆ ಕಳವು ಮಾಡಿದ್ದ ಆಭರಣಗಳನ್ನು ಹೀಗೆ ಮಾರಾಟ ಮಾಡಲು ರಾಜು ಸಹಕರಿಸುತ್ತಿದ್ದರು ಎಂಬುದು ತಿಳಿಯುತ್ತಿದ್ದಂತೆ ಹೆಡ್ ಕಾನ್‌ಸ್ಟೇಬಲ್ ರಾಜುವನ್ನು ಠಾಣೆಗೆ ಕರೆಸಿ ವಿಚಾರಣೆ ನಡೆಸಿದ ಮಂಡಿ ಪೊಲೀಸರು, ಆತನ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.


ಠಾಣೆ ಹಂತದಲ್ಲೇ ರಾಜುಗೆ ಜಾಮೀನು ನೀಡಲಾಗಿದ್ದು, ಪ್ರಕರಣದಲ್ಲಿ ಆರೋಪಿಯಾಗಿರುವುದರಿಂದ ಆತನನ್ನು ಸೇವೆಯಿಂದ ಅಮಾನತುಗೊಳಿಸುವ ಪ್ರಕ್ರಿಯೆ ನಡೆದಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ರಾಜು ಈ ಹಿಂದೆಯೂ ಚೆಕ್ ಬೌನ್ಸ್ ಸೇರಿದಂತೆ ವಿವಿಧ ಪ್ರಕರಣಗಳಲ್ಲಿ ಶಾಮೀಲಾಗಿದ್ದ ಎಂದು ಹೇಳಲಾಗಿದೆ.

ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತ ಇಳಿಮುಖ

● ಕಳೆದ ವರ್ಷ 147 ಮಂದಿ ಮೃತಪಟ್ಟಿದ್ದರೆ; ಈ ವರ್ಷ 50 ಜನ ಸಾವು ● 97 ಅಮೂಲ್ಯ ಜೀವ ರಕ್ಷಣೆ; ದಂಡ, ಎಫ್‌ಐಆರ್‌ನಿಂದ ಅಪಘಾತಕ್ಕೆ ಕಡಿವಾಣ ● ವಿರುದ್ಧ ದಿಕ್ಕಿನ ವಾಹನ ಚಾಲಕರ ವಿರುದ್ಧ 24,562; ದೋಷಪೂರಿತ ಸಂಖ್ಯಾ ಫಲಕವಿರುವ 27,477 ಪ್ರಕರಣ

ಮೈಸೂರು, ಸೆ.5(ಬಿಎಲ್‌ಯು)- ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ (ಎಐ) ಕ್ಯಾಮರಾ ಅಳವಡಿಸಿ ದಂಡಾಸ್ತ್ರ ಪ್ರಯೋಗ, ಅತೀ ವೇಗದ ಚಾಲನೆಗೆ ಎಫ್‌ಐಆರ್ ದಾಖಲು ಸೇರಿದಂತೆ ಇತರೆ ಕಠಿಣ ಕ್ರಮ ಕೈಗೊಂಡ ಪರಿಣಾಮ ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತಗಳ ಸಂಖ್ಯೆಯಲ್ಲಿ ಗಣನೀಯವಾಗಿ ಕಡಿಮೆಯಾಗಿದೆ ಎಂದು ರಾಜ್ಯ ಸಂಚಾರ ಮತ್ತು ರಸ್ತೆ ಸುರಕ್ಷತಾ ಎಡಿಜಿಪಿ ಅಲೋಕ್ ಕುಮಾರ್ ತಿಳಿಸಿದ್ದಾರೆ.

ಈ ಸಂಬಂಧ ತಮ್ಮ ಎಕ್ಸ್ ಖಾತೆಯಲ್ಲಿ ಮಾಹಿತಿ ನೀಡಿರುವ ಅವರು, ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಕಳೆದ ವರ್ಷ ಅಂದರೆ 2023 ಆಗಸ್ಟ್ ಅಂತ್ಯಕ್ಕೆ 147 ಮಂದಿ ಅಪಘಾತಕ್ಕೆ ಬಲಿಯಾಗಿದ್ದರು. ಈ ವರ್ಷ 50 ಮಂದಿ ಸಾವನ್ನಪ್ಪಿದ್ದಾರೆ ಎಂದು ತಿಳಿಸಿದ್ದಾರೆ. ಈ ಮೂಲಕ 97 ಜನರ ಅಮೂಲ್ಯ ಜೀವ ಉಳಿದಿದೆ ಎಂದು ಅಲೋಕ್ ಕುಮಾರ್ ಹೇಳಿದ್ದಾರೆ.



ಎಕ್ಸ್‌ಪ್ರೆಸ್ ವೇನಲ್ಲಿ ಕಳೆದ ವರ್ಷದ ಜನವರಿಯಲ್ಲಿ 14 ಜನರು ಮೃತಪಟ್ಟಿದ್ದರೆ, ಈ ಜನವರಿಯಲ್ಲಿ 12 ಜನರು ಮೃತಪಟ್ಟಿದ್ದಾರೆ, ಕಳೆದ ಫೆಬ್ರವರಿಯಲ್ಲಿ 17 ಜನರು ಸಾವನ್ನಪ್ಪಿದ್ದರೆ, ಈ ಫೆಬ್ರವರಿಯಲ್ಲಿ 6 ಜನರು ಮೃತಪಟ್ಟಿದ್ದಾರೆ.

ಕಳೆದ ವರ್ಷದ ಮಾರ್ಚ್ ನಲ್ಲಿ 20 ಮಂದಿ ಪ್ರಾಣ ಕಳೆದುಕೊಂಡಿದ್ದರೆ, ಈ ಮಾರ್ಚ್‌ನಲ್ಲಿ 9 ಜನರು ಸಾವನ್ನಪ್ಪಿದ್ದಾರೆ. ಕಳೆದ ವರ್ಷದ ಏಪ್ರಿಲ್‌ನಲ್ಲಿ 20 ಜನರ ಜೀವ ಹೋಗಿದ್ದರೆ, ಈ ವರ್ಷದ ಏಪ್ರಿಲ್‌ನಲ್ಲಿ 3 ಜನರು ಪ್ರಾಣ ತೆತ್ತಿದ್ದಾರೆ, ಕಳೆದ ವರ್ಷದ ಮೇನಲ್ಲಿ 29 ಜನರು ಸಾವನ್ನಪ್ಪಿದ್ದರೆ, ಈ ವರ್ಷದ ಮೇನಲ್ಲಿ 3 ಜನರು ಮೃತಪಟ್ಟಿದ್ದಾರೆ. ಕಳೆದ ವರ್ಷದ ಜೂನ್‌ನಲ್ಲಿ 27 ಜನರ ಪ್ರಾಣ ಪಕ್ಷಿ ಹಾರಿ ಹೋಗಿದ್ದರೆ, ಈ ವರ್ಷದ ಜೂನ್‌ನಲ್ಲಿ 9 ಜನರು ಪ್ರಾಣ ಕಳೆದುಕೊಂಡಿದ್ದಾರೆ. ಕಳೆದ ವರ್ಷದ ಜುಲೈನಲ್ಲಿ 10 ಜನರು ಜೀವ ಕಳೆದುಕೊಂಡಿದ್ದರೆ, ಈ ವರ್ಷದ ಜುಲೈನಲ್ಲಿ 6 ಜನರು ಸಾವನ್ನಪ್ಪಿದ್ದಾರೆ. ಕಳೆದ ವರ್ಷದ ಆಗಸ್ಟ್‌ನಲ್ಲಿ 10 ಮಂದಿ ಜೀವ ಬಲಿಯಾಗಿದ್ದರೆ, ಈ ವರ್ಷದ ಆಗಸ್ಟ್‌ನಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ಒಟ್ಟಾರೆ ಕಳೆದ ವರ್ಷ 147 ಜನರು ಅಪಘಾತದಲ್ಲಿ ಮೃತಪಟ್ಟಿದ್ದಾರೆ, ಈ ವರ್ಷದಲ್ಲಿ 50 ಜನರು ಸಾವನ್ನಪ್ಪಿದ್ದಾರೆ.

ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತ ನಿಯಂತ್ರಣಕ್ಕೆ ಎಐ ಕ್ಯಾಮರಾ ಅಳವಡಿಸಿ ದಂಡ ವಿಧಿಸುವುದರ ಜೊತೆಗೆ 130 ಕಿಲೋಮೀಟರ್‌ಗಿಂತ ಹೆಚ್ಚು ವೇಗದಲ್ಲಿ ವಾಹನ ಚಾಲನೆ ಮಾಡುವ ಚಾಲಕರ ವಿರುದ್ಧ ಎಫ್‌ಐಆರ್ ದಾಖಲಿಸಲಾಗುತ್ತಿದೆ. ಜೊತೆಗೆ ಪಥ (ಲೇನ್) ಬದಲಿಸುವ ವಾಹನ ಸವಾರರಿಗೂ ಕೂಡ ದಂಡ ವಿಧಿಸಲಾಗುತ್ತಿದೆ. ಇದರಿಂದ ಗಣನೀಯವಾಗಿ ಅಪಘಾತಗಳ ಸಂಖ್ಯೆ ಕಡಿಮೆಯಾಗಿದೆ ಎಂದು ಅಲೋಕ್ ಕುಮಾರ್ ತಿಳಿಸಿದ್ದಾರೆ.

ರಾಂಗ್ ಸೈಡ್ (ವಿರುದ್ಧ ದಿಕ್ಕು) ನಲ್ಲಿ ವಾಹನ ಚಾಲನೆ ಮಾಡಿರುವವರ ವಿರುದ್ಧ ಆಗಸ್ಟ್ ತಿಂಗಳಲ್ಲಿ ರಾಜ್ಯಾದ್ಯಂತ 24,562 ಪ್ರಕರಣ ದಾಖಲಿಸಲಾಗಿದೆ. ಇದರಲ್ಲಿ ಮೈಸೂರಿನಲ್ಲಿ 505, ಮೈಸೂರು ಜಿಲ್ಲೆಯಲ್ಲಿ 47, ಮಂಡ್ಯದಲ್ಲಿ 7, ಹಾಸನದಲ್ಲಿ 99, ಚಾಮರಾಜನಗರದಲ್ಲಿ 87 ಹಾಗೂ ಕೊಡಗು ಜಿಲ್ಲೆಯಲ್ಲಿ 7 ಪ್ರಕರಣ ದಾಖಲಿಸಲಾಗಿದೆ ಎಂದು ಅಂಕಿ ಅಂಶಗಳ ಸಹಿತ ಮಾಹಿತಿ ನೀಡಿದ್ದಾರೆ.

ದೋಷಪೂರಿತ ಸಂಖ್ಯಾ ಫಲಕವಿರುವ ವಾಹನ ಸವಾರರ ವಿರುದ್ಧ ರಾಜ್ಯಾದ್ಯಂತ 27,477 ಪ್ರಕರಣ ದಾಖಲಿಸಲಾಗಿದ್ದು, ಮೈಸೂರು ನಗರದಲ್ಲಿ 1,177, ಮೈಸೂರು ಜಿಲ್ಲೆಯಲ್ಲಿ 188, ಮಂಡ್ಯದಲ್ಲಿ 115, ಹಾಸನದಲ್ಲಿ 363, ಚಾಮರಾಜನಗರದಲ್ಲಿ 470, ಕೊಡಗು ಜಿಲ್ಲೆಯಲ್ಲಿ 72 ಪ್ರಕರಣ ದಾಖಲಿಸಲಾಗಿದೆ ಎಂದು ಅಲೋಕ್ ಕುಮಾರ್ ತಿಳಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಭೀಮಾ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಭೀಮಾ (ಕ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೀಮಾ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೀಮಾ (ಕ)	4 ಪ್ರದರ್ಶನಗಳು
ರಾಜಕಮಲ್	
ಸರಿಪೋದಾ ಶನಿವಾರಂ (ತೆ)	4 ಪ್ರದರ್ಶನಗಳು
ಸಂಗಂ	
ಗ್ರೇಟೆಸ್ಟ್ ಆಫ್ ಆಲ್ ಟೈಮ್ (ತ)	4 ಪ್ರದರ್ಶನಗಳು
ಲಿಡೋ	
ಕರಿಯಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಭೀಮಾ (ಕ)	4 ಪ್ರದರ್ಶನಗಳು
ಪ್ರಭಾ	
ಅನ್ನ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ವಾರ್ಝಾ ಬಯೋಪಿಕ್ ಆಫ್ ಎ ಬಿಲಿಯನ್ ಬಾಯ್ಸ್ (ಮ): ಬೆ.10.20ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.12.55ಕ್ಕೆ, ಸಂ.4ಕ್ಕೆ, ಸರಿಪೋದಾ ಶನಿವಾರಂ (ತೆ): ರಾ.7.10ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಪೆಪೆ (ಕ): ಬೆ.11ಕ್ಕೆ, ಸಂ.4.30ಕ್ಕೆ, ಸ್ತ್ರೀ 2 (ಹಿಂ): ಮ.1.30ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ಅಫ್ರೇಡ್ (ಇಂ): ಬೆ.11.30ಕ್ಕೆ, ರಾ.10ಕ್ಕೆ, ಕೊಟೇಷನ್ ಗ್ಯಾಂಗ್ ಪಾರ್ಟ್ 1 (ತ): ಮ.1.30ಕ್ಕೆ, ಸರಿಪೋದಾ ಶನಿವಾರಂ (ತೆ): ಸಂ.4ಕ್ಕೆ, ಲಾಫಿಂಗ್ ಬುದ್ಧ (ಕ): ರಾ.7.20ಕ್ಕೆ.
ಸ್ಕ್ರೀನ್ 4	ಕೃಷ್ಣಂ ಪ್ರಣಯ ಸಖಿ (ತ): ಬೆ.10.05ಕ್ಕೆ, ರಾ.7.05ಕ್ಕೆ, ರಾ.10.10ಕ್ಕೆ, ಭೀಮಾ (ಕ): ಮ.1.15ಕ್ಕೆ, ಅಹೋ ವಿಕ್ರಮಾರ್ಕ (ತೆ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821-2973519

ಸ್ಕ್ರೀನ್ 1	ಕೃಷ್ಣಂ ಪ್ರಣಯ ಸಖಿ (ಕ): ಬೆ.10.30ಕ್ಕೆ, ಪೆಪೆ (ಕ): ಮ.1.35ಕ್ಕೆ, ಲಾಫಿಂಗ್ ಬುದ್ಧ (ಕ): ಸಂ.4.05ಕ್ಕೆ, ವಾರ್ಝಾ ಬಯೋಪಿಕ್ ಆಫ್ ಎ ಬಿಲಿಯನ್ ಬಾಯ್ಸ್ (ಮ): ಸಂ.6.45ಕ್ಕೆ, ಸ್ತ್ರೀ 2 (ಹಿಂ): ರಾ.9.15ಕ್ಕೆ.
ಸ್ಕ್ರೀನ್ 2	ಕೃಷ್ಣಂ ಪ್ರಣಯ ಸಖಿ (ಕ): ಮ.12.30ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ, ಭೀಮಾ (ಕ): ಮ.3.35ಕ್ಕೆ.
ಸ್ಕ್ರೀನ್ 3	ಭೀಮಾ (ಕ): ಮ.12.45ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.3.45ಕ್ಕೆ, ಸ್ತ್ರೀ 2 (ಹಿಂ): ಸಂ.6.45ಕ್ಕೆ, ದೇವಧೂತನ್ (ಮ): ರಾ.9.30ಕ್ಕೆ.
ಸ್ಕ್ರೀನ್ 4	ಪೆಪೆ (ಕ): ಬೆ.10.40ಕ್ಕೆ, ಮ.3.45ಕ್ಕೆ, ಅಹೋ ವಿಕ್ರಮಾರ್ಕ (ತೆ): ಮ.1.05ಕ್ಕೆ, ಸರಿಪೋದಾ ಶನಿವಾರಂ (ತೆ): ಸಂ.6.15ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ರೇಸ್

2ನೇ ದಿನ, ಶುಕ್ರವಾರ, 6-9-2024

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ

I. ವಿರಿಜ ಪ್ಲೇಟ್ ಡಿ.II-1100 ಮೀ. ರೇಟೆಡ್ 00 ರಿಂದ 25. (ಮೈಸೂರು ಬೇಸ್ಡ್ ಹಾರ್ಸ್). ಮಧ್ಯಾಹ್ನ 2.00ಕ್ಕೆ
1. ಎಪ್‌ಸಮ್ ಡೌನ್ಸ್ 2. ಮಿಸ್ಟಿಕಲ್ ಮರ್ಲಿನ್ 3. ದಿ ಆರ್ಟರಿ

II. ಸೋಮನಾಥಪುರ್ ಪ್ಲೇಟ್ ಡಿ.II-1400 ಮೀ. ರೇಟೆಡ್ 20 ರಿಂದ 45. ಮ.2.30ಕ್ಕೆ
1. ಪಿಯಾನಿಕ್ಸ್ ಸರ್‌ಪ್ರೈಸ್ 2. ರಿಯಲ್ ಲೆಜೆಂಡ್ 3. ಸಿ ಆಫ್ ಅಡ್ವೆಂಚರ್

III. ಜೆ.ಹೆಚ್. ಪಾಲಿ ಮೆಮೋರಿಯಲ್ ಟ್ರೋಫಿ-1600 ಮೀ. ರೇಟೆಡ್ 40 ರಿಂದ 65.(ಮೈಸೂರು ಬೇಸ್ಡ್ ಹಾರ್ಸ್) ಮ.3.00ಕ್ಕೆ
1. ನ್ಯಾಚುರಲ್ ಸ್ಪೀಡ್ 2. ಡಿ ರೋಮನ್ ಪವರ್ 3. ಲಕ್ಕಿ ಪಾಯಿಂಟ್

IV. ಉದಗ ಮಂಡಲಮ್ ಕಪ್-1400 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಮ.3.30ಕ್ಕೆ
1. ಗೋಲ್ಡನ್ ಪೀಕಸ್ 2. ಪ್ರೈಮ್ ಅಬ್ಬೀಸ್ 3. ಪೆಯೋ

V. ಹೆಚ್.ಹೆಚ್.ಶ್ರೀಕೃಷ್ಣರಾಜ ಒಡೆಯರ್ ಮೆಮೋರಿಯಲ್ ಟ್ರೋಫಿ-1400 ಮೀ. 4 ವರ್ಷ (ಟರ್ಮ್ಸ್). ಸಂ.4.00ಕ್ಕೆ
1. ನಾಟಿ ಚಾರ್ಮರ್ 2. ರ್‍ಯಾವಿಶಿಂಗ್ ಪಾರ್ಮ್ 3. ಕಲಾಮಿಸ್ಟಿ

VI. ಸೋಮನಾಥಪುರ್ ಪ್ಲೇಟ್ ಡಿ.I-1400 ಮೀ. ರೇಟೆಡ್ 20 ರಿಂದ 45. ಸಂಜೆ.4.30ಕ್ಕೆ
1. ಅಸಗಿರಿ 2. ಜೂನ್ 3. ಡಿ ರೋಮನ್ ರೀಜನ್

VII. ವಿರಿಜ ಪ್ಲೇಟ್ ಡಿ.I-1100 ಮೀ. ರೇಟೆಡ್ 00 ರಿಂದ 25. (ಮೈಸೂರು ಬೇಸ್ಡ್ ಹಾರ್ಸ್). ಸಂ.5.00ಕ್ಕೆ
1. ಫ್ಲೈಯಿಂಗ್ ಫಾಲ್ಕನ್ 2. ಸ್ಕ್ವೇರ್ ಕಟ್ 3. ಕ್ವೀನ್ ಸ್ಟಾರ್

ದಿನದ ಅತ್ಯುತ್ತಮ	ನಾಟಿ ಚಾರ್ಮರ್
ಡಬ್ಬಲ್	ಗೋಲ್ಡನ್ ಪೀಕಸ್, ಅಸಗಿರಿ
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರಿಬಲ್	2, 3 ಮತ್ತು 4
II ಟ್ರಿಬಲ್	5, 6 ಮತ್ತು 7
ಎಕ್ಸ್‌ಆಕ್ಟ್	1 ರಿಂದ 7

ಟಿಪ್‌ಸ್ಟರ್ ಪಿಜೆಸಿ

WANTED

For Authorised Service center
TATA PLAY LIMITED
CUSTOMER CALLING
Salary starts from 10000+
99803 50806
88849 11199

LAND FOR SALE

1 Acre, 15 Km from Manipal Hospital Junction
9845930303

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಇವರು ದಿ: 27-08-2024 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 06-09-2024ನೇ ಶುಕ್ರವಾರ ಮಧ್ಯಾಹ್ನ : 1-00 ಗಂಟೆಗೆ ನಂ. 404, ನ್ಯಾಯಾಂಗ ಬಡಾವಣೆ, ಬೋಗಾದಿ ಪೋಸ್ಟ್, ದಟ್ಟಗಳ್ಳಿ, ಮೈಸೂರು ಇಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಶ್ರೀಮತಿ ಪಿ. ಗೀತಾ ರವರು
ನಿವೃತ್ತ ಶಿರಸ್ತೆದಾರರು


ಇಂತಿ ದುಃಖತಪ್ತರು : ಪತಿ ಶ್ರೀ ಎಸ್. ನಾರಾಯಣ
ಮಗ ಚಿ॥ ಜೀವನ್ ನಾರಾಯಣ್. ಎನ್
ಹಾಗೂ ಕುಟುಂಬವರ್ಗದವರು

ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸವಿನೆನಪು



ಎನ್.ನಂಜಪ್ಪ
ಮತ್ತು ಆರ್.ಸಿದ್ದಮ್ಮ

ಮರಣ: 6.9.2010

ನೀವು ನಮ್ಮನ್ನಗಲಿ ಇಂದಿಗೆ 14 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ಮಗ-ಸೊಸೆ, ಹೆಣ್ಣು ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು

Newly Constructed House For Sale


Two Storey, 2 BHK on each floor with interiors built on 20x30 Site.
At Sathagalli B Zone.
Opp. VTU College
Price: 80 lakhs
(Slightly negotiable)
Contact: 82966 58879

ತಕ್ಷಣ ಬೇಕಾಗಿದ್ದಾರೆ

ಭದ್ರತಾ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸಲು ಹಾಗೂ ತೋಟಗಾರಿಕೆಯಲ್ಲಿ ಅನುಭವ ವಿರುವ ಗಂಡ ಮತ್ತು ಹೆಂಡತಿ ಬೇಕಾಗಿದ್ದಾರೆ ವಾಸವಿರಲು ವಸತಿ ಸೌಲಭ್ಯವಿದೆ.
ಸ್ಥಳ: ಮೈಸೂರು ಕೊಲಂಬಿಯ ಆಸ್ಪತ್ರೆಯಿಂದ ನಗುವನಹಳ್ಳಿಗೇಟ್ ಹತ್ತಿರ, ಶ್ರೀರಂಗಪಟ್ಟಣ, ಮೈಸೂರು
8861871926

ESS & ESS INFRASTRUCTURE PVT. LTD.

ESS & ESS INFRASTRUCTURE PVT. LTD. 100+ Projects



ಗೌರಿ – ಗಣೇಶ ಹಬ್ಬದ ಶುಭಾಶಯಗಳು

MUDA APPROVED — BUY THE BEST MUDA APPROVED PLOTS IN MYSURU NOW — RERA REGISTERED

ಗೌರಿ ಗಣೇಶ ಹಬ್ಬವನ್ನು ಆಚರಿಸಿ
ನಿಮ್ಮ ಕನಸಿನ ನಿವೇಶನವನ್ನು ನಿಮ್ಮದಾಗಿಸಿ

ನೋಂದಣಿಗೆ ಸಿದ್ಧವಾಗಿರುವ ನಿವೇಶನಗಳು
ಹಬ್ಬದ ಆಕರ್ಷಕ SPOT OFFERS ಪಡೆಯಿರಿ.

30X40, 30X50, 40X60 & BIGGER DIMENSIONS

- ಉತ್ತನಹಳ್ಳಿ RING ROAD ಹತ್ತಿರ, ಚಾಮುಂಡಿ ಬೆಟ್ಟದ ಹಿಂಭಾಗ, ಮೈಸೂರು
- ಇಲವಾಲ ರಸ್ತೆ, ಬೆಳವಾಡಿ, ಮೈಸೂರು
- ಬೋಗಾದಿ – ಗದ್ದಿಗೆ ರಸ್ತೆ, ಕೆ. ಹೆಮ್ಮನಹಳ್ಳಿ, ಮೈಸೂರು

essandess.in 9901164444
ಶೇ 80% ವರೆಗೆ ಬ್ಯಾಂಕ್ ಲೋನ್ ಲಭ್ಯವಿದೆ

HOUSE FOR SALE

Independent house
2BHK,
2 Floors, 30x40 SBM
Layout - Muda
9844612333
9741967776



ಮೈಸೂರಿನಲ್ಲಿ ನೂತನವಾಗಿ ಶುಭಾರಂಭಗೊಂಡಿರುವ THE LION RESTAURANT

ಕಾರ್ಯನಿರ್ವಹಿಸಲು ಕೆಲಸಗಾರರು ಬೇಕಾಗಿದ್ದಾರೆ.

POSITIONS:
- Chef
- House Keepers
- Room Attendant
- Resturant Manager
- Front Office Staff
- Event Planner
- Director of Purchasing
- Parking Attendant
- Porter
- Banquet Manager
- Concierge

ಸಂಬಳ 20,000 to 1,50,000



ಆಸಕ್ತಿ ಉಳ್ಳವರು ತಕ್ಷಣವೇ ಸಂಪರ್ಕಿಸಿ
88845 77771
B.E.M.L. Nagar, Srirampura 2nd Stage, Mysore - 570023


MUDA APPROVED

Festival Offers
₹20 Lakhs Only
(20 x 30 Site)
HERITAGE CITY
Uttanahalli, Mysuru
PRM/KA/RERA/1268/PR/160124/006555
READY FOR REGISTRATION
Available Plots 20x30 & 30x40
98448 24772 / 9739695610

IMKTA TEACHER TRAINING COURSES INDIA MYSORE

IMKTA Since 2003 www.imkta.in
WISHES
HAPPY TEACHER'S DAY

21 years of success in PreSchool Teacher Training and Placements



CELEBRATING 21ST YEARS ANNIVERSARY

Diploma in Montesssori/ Primary
& Diploma in Special Education
- Learning Disability
- Autism
- Slow Learners
- ADHD Syndrome

Online Course available
For SSLC, PUC or any degree candidates
DOWNLOAD IMKTA APP — Google play
Alpha International School
Manandavadi Road, Near Ring Road Signal Junction, Srirampura, Mysore
+91 7829937469

VILLA PLOTS FOR SALE

30x40 & 30x50
READY FOR CONSTRUCTION
Beside Suvarna Nagara Bogadi, Gaddige Road, Mysore
Free Site Visit Call Now
88614 40528 / 97314 00249

ಸ್ಥಾಪನೆ: 1923

ದಿ ಗ್ರ್ಯಾಜ್ಯುಯೇಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಚಾಮರಾಜ ಜೋಡಿ ರಸ್ತೆ, ಮೈಸೂರು-570024
ದೂರವಾಣಿ: 0821-2442864 ಮೊಬೈಲ್: 9972039899

100ನೇ ವಾರ್ಷಿಕ ಮಹಾಸಭೆಯ ಸೂಚನಾ ಪ್ರಕಟಣೆ

ಮಾನ್ಯ ಸದಸ್ಯರುಗಳೇ,

ಈ ಬ್ಯಾಂಕಿನ 2023-24 ನೇ ಸಾಲಿನ 100ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ 08.09.2024 ರಂದು ಭಾನುವಾರ ಬೆಳಿಗ್ಗೆ 10.00 ಗಂಟೆಗೆ ಸರಿಯಾಗಿ ಮೈಸೂರು ನಗರದ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ನಡೆಸಲು ಏರ್ಪಾಡು ಮಾಡಲಾಗಿರುತ್ತದೆ.

ನಮ್ಮ ಬ್ಯಾಂಕಿನ ಅಧ್ಯಕ್ಷರಾದ
ಶ್ರೀ ಎನ್. ಶ್ರೀನಿವಾಸ ಬಿ.ಕಾಂ., ಎಲ್.ಎಲ್.ಬಿ.
ಇವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಿರುತ್ತದೆ

ಈಗಾಗಲೇ ಮಾನ್ಯ ಸದಸ್ಯರುಗಳಿಗೆ ವಾರ್ಷಿಕ ಮಹಾಸಭೆಯ ಸೂಚನಾ ಪ್ರಕಟಣೆಯನ್ನು ಅಂಚೆ ಮೂಲಕ ಕಳುಹಿಸಲಾಗಿದ್ದು, ಒಂದು ವೇಳೆ ಸೂಚನಾ ಪ್ರಕಟಣೆಯು ತಲುಪದೇ ಇದ್ದಲ್ಲಿ ಇದನ್ನೇ ಆಹ್ವಾನವೆಂದು ಪರಿಗಣಿಸಿ ಮಾನ್ಯ ಸದಸ್ಯರುಗಳು ತಮ್ಮ ಷೇರು ಪಾಸ್ ಪುಸ್ತಕವನ್ನು ಕಡ್ಡಾಯವಾಗಿ ತಂದು ಮಹಾಸಭೆಯಲ್ಲಿ ಭಾಗವಹಿಸಲು ಕೋರಲಾಗಿದೆ.

ದಿನಾಂಕ: 02-09-2024

ಸಹಿ:- ಶ್ರೀ.ಟಿ.ವಿ.ಮಹೇಶ್
ಪ್ರಭಾರ ವ್ಯವಸ್ಥಾಪಕರು

ಅಧ್ಯಕ್ಷರು : ಶ್ರೀ.ಎನ್.ಶ್ರೀನಿವಾಸ ಉಪಾಧ್ಯಕ್ಷರು : ಶ್ರೀ.ಆರ್.ಅನಂತರಾಮು
ನಿರ್ದೇಶಕರುಗಳಾದ: ಪ್ರೊ॥ಪಿ.ವಿ.ನರಹರಿ, ಶ್ರೀ.ಕೆ.ಜಿ.ಸತೀಶ್, ಶ್ರೀಮತಿ.ಎಂ.ಎ.ಹೇಮಲತ, ಶ್ರೀ.ಟಿ.ಎಸ್.ರವಿಶಂಕರ್, ಶ್ರೀ.ಎಸ್.ಎನ್.ಜಗದೀಶ್, ಶ್ರೀಮತಿ.ಸುಜಾತವೆಂಕಟರಾಜು, ಡಾ॥ಕೆ.ವಿ.ಲಕ್ಷ್ಮೀದೇವಿ, ಡಾ॥ಸುಜಾತ.ಎಸ್.ರಾವ್, ಶ್ರೀಮತಿ.ಸಿ.ಕಮಲಮ್ಮ, ಶ್ರೀ.ಎಲ್.ಸೋಮಣ್ಣ, ಶ್ರೀಮತಿ.ಆರ್.ವರಲಕ್ಷ್ಮೀ ವೃತ್ತಿಪರ ನಿರ್ದೇಶಕರಾದ: ಶ್ರೀ.ಎಂ.ಎಸ್.ರಾಜಾರಾಂ. ಶ್ರೀ.ಆರ್.ದೇವರಾಜು

ವಿಶೇಷ ಸೂಚನೆ

1. ಬ್ಯಾಂಕಿನ 2023-24 ನೇ ಸಾಲಿನ ಲಾಭ-ನಷ್ಟದ ತಃಖ್ತೆ ಹಾಗೂ ಆಸ್ತಿ-ಜವಾಬ್ದಾರಿ ತಃಖ್ತೆಗಳನ್ನು ವೆಬ್‌ಸೈಟ್ www.gcbmys.in ರಲ್ಲಿಯೂ ಸಹ ಪರಿವೀಕ್ಷಿಸಲು ಲಭ್ಯವಿರುತ್ತದೆ.
2. ಸದಸ್ಯರು/ಸದಸ್ಯರೇತರುಗಳಿಗೆ ಅತ್ಯಂತ ಕಡಿಮೆ ಬಡ್ಡಿ ದರದಲ್ಲಿ ಅಂದರೆ ಶೇಕಡ 9% ರೀತ್ಯಾ ಚಿನ್ನದಾಭರಣ ಸಾಲವನ್ನು ಮಂಜೂರು ಮಾಡುತ್ತಲಿದ್ದು, ಅವಶ್ಯಕತೆಯುಳ್ಳವರು ಪಡೆಯಬಹುದಾಗಿರುತ್ತದೆ.

ನಗರಸಭಾ ಕಾರ್ಯಾಲಯ, ಮಡಿಕೇರಿ, ಕೊಡಗು ಜಿಲ್ಲೆ

ದೂರವಾಣಿ: 08272-228323, ಫ್ಯಾಕ್ಸ್: 08272-223998
Email: itstaff_ulb_madikeri1@yahoo.com
ಕಾವೇರಿ ಕಲಾಕ್ಷೇತ್ರದ ಹತ್ತಿರ, ಮಡಿಕೇರಿ-571201

ಸಂ:ಮನಸ/ತಾಂತ್ರಿಕ/ಜೆಇ.4/ಟೆಂಡರ್-08/ಎಂಆರ್‌ಎಫ್/2024-25
ದಿನಾಂಕ: 5-9-2024

ಟೆಂಡರ್ ಪ್ರಕಟಣೆ

ಸ್ವಚ್ಛ ಭಾರತ ಮಿಷನ್ (ನಗರ) 2.0 ಯೋಜನೆಯಡಿ ಸಿವಿಲ್ ಕಾಮಗಾರಿಯನ್ನು ನಿರ್ವಹಿಸಲು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಆದ್ಯಾದೇಶ 1999 ಹಾಗೂ ನಿಯಮ 2000 ಕ್ಕೆ ಒಳಪಟ್ಟು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ (ಕೆ.ಡಬ್ಲ್ಯೂ-3) ನಿಯಮಾವಳಿಯಂತೆ KPP ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಟೆಂಡರ್ ವಿವರಗಳನ್ನು KPP ಪೋರ್ಟಲ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು, KPP ಪೋರ್ಟಲ್ ಮುಖಾಂತರ ಸಲ್ಲಿಸಬಹುದು. ಹೆಚ್ಚಿನ ಮಾಹಿತಿ, ಕಾಮಗಾರಿ ವಿವರಣೆ, ನಿಭಂದನೆ ಹಾಗೂ ಷರತ್ತುಗಳಿಗೆ ಕಛೇರಿ ವೇಳೆಯಲ್ಲಿ ಈ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು. ಟೆಂಡರ್ ಡೌನ್‌ಲೋಡ್, ಅಪ್‌ಲೋಡ್, ಟೆಂಡರ್ ಪ್ರೋಸೆಸಿಂಗ್ ಮತ್ತು ಇ.ಎಂ.ಡಿ ಪಾವತಿ ಬಗ್ಗೆ ಸಂಬಂಧಪಟ್ಟಂತೆ ವಿವರಗಳನ್ನು ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಪಡೆಯಬಹುದು.

ಸಹಿ/- ಆಡಳಿತಾಧಿಕಾರಿಗಳು, ನಗರಸಭೆ, ಮಡಿಕೇರಿ ಹಾಗೂ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ.
ಸಹಿ/- ಪೌರಾಯುಕ್ತರು, ನಗರಸಭೆ, ಮಡಿಕೇರಿ.

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ ಲೋಕೋಪಯೋಗಿ ಇಲಾಖೆ ಹಾಸನ ವಿಭಾಗ, ಹಾಸನ.

ಸಂಖ್ಯೆ: 09:ಕಾಇಂ:ಲೋಇ:ಹಾವಿ:ಕಿಇಂ-2:2024-25
ದಿನಾಂಕಃ 03.09.2024.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-2 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ (3ನೇ ದರ್ಜೆ ಹಾಗೂ ಮೇಲ್ಪಟ್ಟ) ಗುತ್ತಿಗೆದಾರರಿಂದ ಅರಸೀಕೆರೆ ಉಪವಿಭಾಗ ವ್ಯಾಪ್ತಿಯ 01 ಸಂಖ್ಯೆ ಕಾಮಗಾರಿಗಾಗಿ ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್‌ನಲ್ಲಿನ ಕಾಮಗಾರಿ ಮೊತ್ತ ರೂ.40.00 ಲಕ್ಷ. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕಡೆಯ ದಿನಾಂಕ.11.09.2024. 16.00 ಗಂಟೆ. ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ನೋಡುವುದು ಅಥವಾ ಈ ಕಛೇರಿಯ ಸಹಾಯಕ ದೂರವಾಣಿ ಸಂಖ್ಯೆ: 08172-268437 ರಿಂದ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/-ಕಾರ್ಯಪಾಲಕ ಇಂಜಿನಿಯರ್, ಲೋಇ ಹಾಸನ ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/407/ಕೆಎಸ್‌ಎಂಸಿಎ/2024-25

Kodava Education Society (R) — COORG INSTITUTE OF TECHNOLOGY, PONNAMPET

ADMISSIONS OPEN FOR THE ACADEMIC YEAR 2024-25 - I AND II YEAR LATERAL ENTRY

COURSES OFFERED

- Artificial Intelligence and Machine Learning,
- Artificial Intelligence and Data Science,
- Computer Science and Engineering,
- Civil Engineering,
- Electronics and Communication Engineering,
- Mechanical Engineering,
- Computer Science and Engineering - Cyber Security.

Phone: +91 9611173724, +919611155457

ಗೌರಿ ಗಣೇಶ ಹಬ್ಬದ ಪ್ರಯುಕ್ತ ಇದೀಗ ಹೊಸ ಸ್ಟಾಕ್‌ನೊಂದಿಗೆ ಇಂದಿನಿಂದ ಮಾರಾಟ ಪ್ರಾರಂಭ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ

ಫ್ಯಾಷನ್ & ಲೈಫ್‌ಸ್ಟೈಲ್ ಪ್ರದರ್ಶನ ಮತ್ತು ಮಾರಾಟ

Upto 90% OFF — 1 ಲಕ್ಷದಷ್ಟು ಬ್ರಾಂಡೆಡ್ ಸಿದ್ಧ ಉಡುಪುಗಳು, ಪಾದರಕ್ಷೆಗಳು, ಸೀರೆಗಳು, ಅಲಂಕಾರಿಕಾ ವಸ್ತುಗಳು

ಪುರುಷರ ಬಾಕ್ಸರ್ ಶಾರ್ಟ್ಸ್ ರೂ. 249/-	ಪುರುಷರ ಟಿ-ಶರ್ಟ್‌ಗಳು ರೂ. 199/-	ಮಹಿಳೆಯರ ವೆಸ್ಟರ್ನ್ ಟಾಪ್ಸ್ ರೂ. 99/-	ಕಿಡ್ಸ್ ಬಾಯ್ಸ್ ಮತ್ತು ಗರ್ಲ್ಸ್ ರೂ. 99/-
ಮಹಿಳೆಯರ ಟ್ರಾಕ್‌ಪ್ಯಾಂಟ್ ಪಲ್ಲಾಜೋ ಮತ್ತು ಬಾಟಮ್ಸ್ ರೂ. 249/-	ಮಹಿಳೆಯರ ಕುರ್ತಿ, ಜೀನ್ಸ್, ಸೀರೆಗಳು ರೂ. 299/-	ಪುರುಷರ ಶರ್ಟ್ ರೂ. 399/-	ಜೀನ್ಸ್ ಪ್ಯಾಂಟ್ ರೂ. 599/-

ಮಹಿಳೆಯರ ಜಾಕೆಟ್‌ಗಳು, ವುಡ್ಡೀಸ್, ಜಿಪ್ಪರ್, ಸ್ವೆಟ್ ಶರ್ಟ್‌ಗಳು, ಸ್ವೆಟರ್‌ಗಳು — ಯಾವುದನ್ನೇ ಕೊಂಡರೂ ರೂ. 499/- ಮಾತ್ರ
ಪುರುಷರ ಜೀನ್ಸ್, ಪ್ಯೂಮಾ ಟ್ರ್ಯಾಕ್ ಪ್ಯಾಂಟ್, ಪುರುಷರ ಜಾಕೆಟ್‌ಗಳು, ಜಿಪ್ಪರ್, ವುಡ್ಡೀಸ್, ಸ್ವೆಟ್‌ಶರ್ಟ್‌ಗಳು — ಎಂಆರ್‌ಪಿ ರೂ. 1999ರಿಂದ 4999 ಯಾವುದನ್ನೇ ಖರೀದಿಸಿದರೂ ರೂ. 599/- ಮಾತ್ರ

ಗೌರಿ ಗಣೇಶ ಹಬ್ಬದ ವಿಶೇಷ ರಿಯಾಯಿತಿ

ಪುರುಷರ ಶೂಗಳು : ರೂ. 400/- ರಿಂದ 2000/-

PUMA, NIKE, WOODLAND, adidas, SKECHERS, LOUIS PHILIPPE, ANTA, U.S. POLO ASSN. SINCE 1890, asics, CATIA, new balance, campus, cultsport, RED CHIEF

ಮಹಿಳೆಯರ ಪ್ಯಾಂಟಿ ರೂ. 60 ಮಾತ್ರ | Bra Just Rs. 100/-

ರೂ. 1200/- ಬೆಲೆ ಬಾಳುವ ಸೀರೆಗಳು ಇಂದು ಕೇವಲ ರೂ. 300/- ಮಾತ್ರ

ಆಫರ್ 4 ದಿನಗಳು ಮಾತ್ರ : ಸೆಪ್ಟೆಂಬರ್ 6, 7, 8, 9 – 2024

ಸ್ಥಳ : ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪ
ಉದಯರವಿ ರಸ್ತೆ, ಕುವೆಂಪುನಗರ, ಮೈಸೂರು

ಇಂದ್ರ ಕೆಫೆ'ಸ್

IC ಸ್ಥಾಪನೆ :1956

ನಮಗೆ ಹೆಮ್ಮೆಯನ್ನು ತಂದುಕೊಟ್ಟು ಮೈಸೂರಿನ ಹಿರಿಮೆಯನ್ನು ಹೆಚ್ಚಿಸಿದ ಎಲ್ಲಾ ಖ್ಯಾತ ಗಣ್ಯರಿಗೂ
ನಮ್ಮ 68ನೇ ವಾರ್ಷಿಕೋತ್ಸವದ ಹೃದಯಪೂರ್ವಕ ವಂದನೆಗಳು

PARAS A Touch of Taste
ಅಪ್ಪಟ ಸಸ್ಯಹಾರಿ ರೆಸ್ಟೋರೆಂಟ್
ಬಾಯಿ ನೀರೂರಿಸುವಂತಹ ಸ್ವಾದ !

ಸೌತ್/ನಾರ್ತ್ ಇಂಡಿಯನ್ ತಿನಿಸುಗಳು, ಸಿಹಿತಿಂಡಿ, ಸ್ವಾದಭರಿತ ತಿಂಡಿಗಳು, ಐಸ್‌ಕ್ರೀಮ್, ಫ್ರೂಟ್ ಜ್ಯೂಸ್ ಮತ್ತು ಚಾಟ್ಸ್‌ಗಳು ಇತ್ಯಾದಿ

ಅಧಿಕ ಪ್ರಮಾಣದ ಸಿಹಿತಿಂಡಿಗಳ ಪೂರೈಕೆಗೆ ಆರ್ಡರ್‌ಗಳನ್ನು ಸ್ವೀಕರಿಸುತ್ತೇವೆ



ಪಾರ್ಟಿ, ಕೂಟ ಹಾಗೂ ಇನ್ನಿತರ ಶುಭ ಸಮಾರಂಭಗಳಿಗೆ ವಿಶಾಲವಾದ ಹಾಲ್ ದೊರೆಯುತ್ತದೆ. # 1740, ಸಯ್ಯಾಜಿ ರಾವ್ ರಸ್ತೆ, ಮೈಸೂರು -1. ದೂ: 2420236 / 4268236